**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

## ಕರ್ನಾಟಕ ವಿಧಾನ ಪರಿಷತ್ತು

4ನೇ ಮಾರ್ಚ್ 2021
ಗುರುವಾರ

## ವಿಷಯಾನುಕ್ರಮಣಿಕೆ

1. **ಸಂತಾಪ ಸೂಚನೆ**

**ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಮಂಡಗದ್ದೆ ರಾಮಾ ಜೋಯಿಸ್‌ರವರ ನಿಧನದ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

2. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವಗಳು**

**ಅ) ತಮಿಳುನಾಡು ಸರ್ಕಾರವು ಕಾವೇರಿ ನದಿ ಪಾತ್ರದಲ್ಲಿನ ಮಾಯನೂರು ಜಲಾಶಯವನ್ನು ಅಕ್ರಮವಾಗಿ ಬಳಸಿಕೊಂಡಿರುವ ಕುರಿತು.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**ಆ) ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಗುಡಿಬಂಡೆ ಸರಹದ್ದಿನಲ್ಲಿ ಬರುವಂತಹ ಹಿರೇನಾಗವಳ್ಳಿ ಗ್ರಾಮದ ಬಳಿ ಕಾನೂನುಬಾಹಿರವಾಗಿ ನಡೆಸುವ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಜಿಲೆಟಿನ್ ಮತ್ತಿತರ ಸ್ಫೋಟಕಗಳು ಸ್ಫೋಟಗೊಂಡ ಕಾರಣ ಆರು ಜನರು ಮರಣ ಹೊಂದಿರುವ ಬಗ್ಗೆ.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**627– ಬೆಂಗಳೂರು ನಗರದಲ್ಲಿ ಹೆಚ್ಚಾಗುತ್ತಿರುವ ಟ್ರಾಫಿಕ್ ಸಮಸ್ಯೆ ಕುರಿತು**

- **ಶ್ರೀ ಹೆಚ್.ಎಂ.ರಮೇಶ್‌ಗೌಡ**
- **ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**

**709 – ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರ ಸಭೆ ನಡೆಸುವ ಬಗ್ಗೆ.**

- ಶ್ರೀ ಆರ್.ಧರ್ಮಸೇನ
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**674 – ಎನ್.ಪಿ.ಎಸ್. ಬಗ್ಗೆ**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**779 – ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಉತ್ತೇಜನ ನೀಡುವ ಬಗ್ಗೆ.**

- ಶ್ರೀ ಬಿ.ಎಂ.ಫಾರೂಖ್
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**703 – ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಏರಿಕೆ ಬಗ್ಗೆ**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**606 – ಸ್ವಚ್ಛ ಬೆಂಗಳೂರು ಕುರಿತು**

- ಶ್ರೀ ಅ.ದೇವೇಗೌಡ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**689 – ವಿದ್ಯುತ್ ವಿತರಣಾ ಕಂಪನಿಗಳ ಖಾಸಗೀಕರಣದ ಕುರಿತು**

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**660 – ಸಚಿವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರ**

- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**666 – ಜಿ.ಎಸ್.ಟಿ. ಕೊರತೆ ಬಗ್ಗೆ**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

701 – **ಕೊಡಗು ಜಿಲ್ಲೆಯಲ್ಲಿನ ಕಾಫಿ ಬೆಳೆಗಾರರು ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ ಅವು ಬಳಕೆಯಾದ ಅವಧಿಗೆ ಮಾತ್ರ ಶುಲ್ಕ ವಿಧಿಸುವ ಬಗ್ಗೆ.**

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

4. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ಗದಗ ಜಿಲ್ಲೆಯಲ್ಲಿನ ಪಶು ಚಿಕಿತ್ಸಾಲಯಕ್ಕೆ ಪಶು ವೈದ್ಯರ ಕೊರತೆಯಿಂದ ಚಿಕಿತ್ಸಾಲಯದಲ್ಲಿ ಪಶುಗಳ ಚಿಕಿತ್ಸೆಗೆ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು)

**ಆ) ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಬಗ್ಗೆ**

- ಶ್ರೀ ಎನ್.ರವಿಕುಮಾರ್
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು)

5. **ಕಾರ್ಯದರ್ಶಿಯವರ ವರದಿ**
6. **ಪ್ರಕಟಣೆಗಳು**
7. **ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ ಐದು ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿರುವ ಕುರಿತು.**

- ಶ್ರೀ ಎನ್.ರವಿಕುಮಾರ್
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ನಸೀರ್ ಅಹಮದ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**೮. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ**

**ಇ) ಮೈಸೂರಿನ ಸಮಾರಂಭವೊಂದರಲ್ಲಿ ಹಿರಿಯ ಸಾಹಿತಿ ಶ್ರೀ ಎಸ್.ಎಲ್. ಭೈರಪ್ಪನವರು ತಿಗಳ(ವಹ್ನಿಕುಲ) ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಕುರಿತು ಮಾತನಾಡಿರುವರೆನ್ನಲಾದ ಅವಹೇಳನಕಾರಿ ಮಾತುಗಳ ಬಗ್ಗೆ.**

- ಶ್ರೀ ಪಿ.ಆರ್.ರಮೇಶ್
- ಶ್ರೀ ಕೋಟ ಶ್ರೀನಿವಾಸಪೂಜಾರಿ (ಸಭಾನಾಯಕರು)

**೯. ಗಮನ ಸೆಳೆಯುವ ಸೂಚನೆ**
**ಹಿಂದುಳಿದ ವರ್ಗಗಳ ಆಯೋಗವು 2014-15ನೇ ಸಾಲಿನಲ್ಲಿ ಕೈಗೊಂಡಿರುವ ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಸಲ್ಲಿಸದಿರುವ ಬಗ್ಗೆ.**

- ಶ್ರೀ ಅಡಗೂರ್ ಹೆಚ್.ವಿಶ್ವನಾಥ್
- ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**10. 'ಒಂದು ರಾಷ್ಟ್ರ – ಒಂದು ಚುನಾವಣೆ' ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಾರದೆಂದು ವಿರೋಧಪಕ್ಷದವರಿಂದ ಒತ್ತಾಯ ಹಾಗೂ ಧರಣಿ**

- ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಹೆಚ್.ಎಂ.ರಮೇಶ್‌ಗೌಡ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಅಡಗೂರು ಹೆಚ್.ವಿಶ್ವನಾಥ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಡಾ: ತೇಜಸ್ವಿನಿಗೌಡ

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(265) 04.03.2021: 11-00: SV-BNS

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 4ನೇ ಮಾರ್ಚ್ 2021***

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**
**ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭಗೊಂಡಿತು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(266) 04.03.2021, 11.20. KG.BNS **(ಸಭಾಪತಿಯವರ ಉಪಸ್ಥಿತಿ)**

## 1. ಸಂತಾಪ ಸೂಚನೆ

**ವಿಷಯ:– ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಮಂಡಗದ್ದೆ ರಾಮಾ ಜೋಯಿಸ್‌ರವರ ನಿಧನದ ಬಗ್ಗೆ.**

– –

**ಸಭಾಪತಿಯವರು:–** ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಮಂಡಗದ್ದೆ ರಾಮಾ ಜೋಯಿಸ್‌ರವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

ಮಾಜಿ ರಾಜ್ಯಸಭಾ ಸದಸ್ಯರು, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳ ಮಾಜಿ ರಾಜ್ಯಪಾಲರು, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ನ್ಯಾಯಾಂಗ ವಿದ್ವಾಂಸರಾಗಿದ್ದ ಮಂಡಗದ್ದೆ ರಾಮಾ ಜೋಯಿಸ್ ಅವರು ದಿನಾಂಕ 16.02.2021 ರಂದು ನಿಧನ ಹೊಂದಿರುತ್ತಾರೆ.

1931ರ ಜುಲೈ 27 ರಂದು ಶಿವಮೊಗ್ಗ ಜಿಲ್ಲೆಯ ಅರಗ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಬಿ.ಎಲ್., ಪದವೀಧರರಾಗಿದ್ದರು. ಆಗುಂಬೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ತೀರ್ಥಹಳ್ಳಿ ಮುನ್ಸಿಪಲ್ ಕಛೇರಿಯಲ್ಲಿ ಗುಮಾಸ್ತರಾಗಿ ಕಾರ್ಯನಿರ್ವಹಿಸಿದ್ದರು. ತದನಂತರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಶ್ರೀಯುತರು ಜನಪ್ರಿಯ ರಿಟ್ ಪಿಟಿಷನ್ ವಕೀಲರೆಂದು ಪ್ರಸಿದ್ಧರಾಗಿದ್ದರು. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಹಾಗೂ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ನೇತೃತ್ವ ವಹಿಸಿ ಗೋಕಾಕ್ ವರದಿ ಕುರಿತು 1989 ರಲ್ಲಿ ನೀಡಿದ ತೀರ್ಪು ಪ್ರೌಢಶಾಲಾ ಹಂತದವರೆಗೆ ಕನ್ನಡವು ಒಂದು ಭಾಷೆಯಾಗಿ ಕಡ್ಡಾಯವಾಗಲು ಕಾರಣವಾಯಿತು. 1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸೆರೆಮನೆವಾಸ ಅನುಭವಿಸಿದ್ದರು. 1992 ರಲ್ಲಿ ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿ ಶ್ರೀಯುತರು ಕಾರ್ಯನಿರ್ವಹಿಸಿದ್ದರು. ಸಂವಿಧಾನ, ಕಾನೂನು ಕಟ್ಟಳೆ ಕುರಿತು ನೀಡಿರುವ ಹಲವಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹತ್ವದ ತೀರ್ಪುಗಳು ಈಗಲೂ ಪರಾಮರ್ಶೆ ತೀರ್ಪುಗಳಾಗಿ ಬಳಸಲ್ಪಡುತ್ತಿವೆ. 2002 ರಲ್ಲಿ ಜಾರ್ಖಂಡ್ ರಾಜ್ಯದ ರಾಜ್ಯಪಾಲರಾಗಿ, 2003 ರಲ್ಲಿ ಬಿಹಾರದ ರಾಜ್ಯಪಾಲರಾಗಿ ಹಾಗೂ 2008 ರಿಂದ 2014ರವರೆಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ವಿಜ್ಞಾನೇಶ್ವರ ಪ್ರತಿಷ್ಠಾನ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಶ್ರೀಯುತರು ನ್ಯಾಯಾಂಗ ಕ್ಷೇತ್ರಕ್ಕೆ ವಿಜ್ಞಾನೇಶ್ವರನ ಕೊಡುಗೆಯನ್ನು ಇಡೀ ದೇಶಕ್ಕೆ ಪರಿಚಯಿಸಿದ್ದರು. ಸರ್ಕಾರದ ಅನೇಕ ಉನ್ನತ ಮಟ್ಟದ ಸಮಿತಿಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯವಾಗಿದೆ. ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ವಿಜ್ಞಾನೇಶ್ವರ ಪೀಠ, ಭಾರತೀಯ ನ್ಯಾಯದರ್ಶನ ಮತ್ತು ರಾಜಧರ್ಮ ಎಂಬ ಸ್ನಾತಕೋತ್ತರ ಕೋರ್ಸ್ ಸ್ಥಾಪನೆಗೆ ಕಾರಣೀಭೂತರಾಗಿದ್ದ ಶ್ರೀಯುತರಿಗೆ ಕುವೆಂಪು ವಿಶ್ವವಿದ್ಯಾಲಯವು "ಡಾಕ್ಟರ್ ಆಫ್ ಲಾ" ಎಂಬ ಪದವಿ ನೀಡಿ ಗೌರವಿಸಿತ್ತು.

ಸರ್ವೀಸ್ ಅಂಡರ್ ಸ್ಟೇಟ್, ಹಿಸ್ಟಾರಿಕಲ್ ಬ್ಯಾಟಲ್, ನೀಡ್ ಫಾರ್ ಅಮೆಂಡಿಂಗ್ ದಿ ಕಾನ್‌ಸ್ಟಿಟ್ಯೂಷನ್, ರಾಜಧರ್ಮ ವಿತ್ ದಿ ಲೈಸೆನ್ಸ್ ಆಫ್, ರಾಜನೀತಿ, ಕಾನೂನು ಮತ್ತು ಸಂವಿಧಾನಿಕ ಭಾರತದ ಇತಿಹಾಸ, ಪ್ರಾಚೀನ ಭಾರತದ ಕಾನೂನು, ತ್ರಿವರ್ಗ ಸಿದ್ಧಾಂತ, ಕೋಡ್ ಆಫ್ ಕಂಡಕ್ಟ್ ಫಾರ್ ರೂಲರ್ಸ್‌ನಂತಹ ಅನೇಕ ಪ್ರಮುಖ ಕೃತಿಗಳನ್ನು ಶ್ರೀಯುತರು ರಚಿಸಿದ್ದಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ನ್ಯಾಯಾಂಗ ವಿದ್ವಾಂಸ, ಧೀಮಂತ ನ್ಯಾಯಾಧೀಶ ಹಾಗೂ ಶ್ರೇಷ್ಠ ಚಿಂತಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾಜಿ ರಾಜ್ಯಸಭಾ ಸದಸ್ಯರು, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳ ಮಾಜಿ ರಾಜ್ಯಪಾಲರು, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ನ್ಯಾಯಾಂಗ ವಿದ್ವಾಂಸರಾಗಿದ್ದ ಮಂಡಗದ್ದೆ ರಾಮಾ ಜೋಯಿಸ್‌ರವರ ನಿಧನ ಒಂದು ಅರ್ಥದಲ್ಲಿ ಬಹು ದೊಡ್ಡ ಅನುಭವದ ಒಂದು ಶಕ್ತಿ ನಮ್ಮಿಂದ ಕಣ್ಮರೆಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಯುತರು ಆಗುಂಬೆಯ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮತ್ತು ತೀರ್ಥಹಳ್ಳಿಯ ಮುನ್ಸಿಪಲ್ ಕಛೇರಿಯಲ್ಲಿ ಗುಮಾಸ್ತರಾಗಿ ಕೆಲಸ ನಿರ್ವಹಿಸಿದ್ದಾರೆ. ಆನಂತರ ಅವರು ಕಾನೂನು ಪದವೀಧರರಾಗಿ ವಕೀಲ ವೃತ್ತಿಯನ್ನು ಆರಂಭಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸಲು ಅವಕಾಶಗಳು ಒದಗಿ ಬಂದವು. ಅಲ್ಲದೇ, ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು 90 ವರ್ಷಗಳ ಕಾಲ ಸಾರ್ವಜನಿಕ ಬದುಕಿನಲ್ಲಿ ಮತ್ತು ಕಾನೂನು ವಿಷಯದಲ್ಲಿ ಅಪಾರವಾದಂತಹ ಅನುಭವವನ್ನು ಹೊಂದಿದ್ದರು. ಅಲ್ಲದೇ, ನಮ್ಮ ರಾಜ್ಯಕ್ಕೆ ಬಹುದೊಡ್ಡ ಶಕ್ತಿಯಾಗಿ ಕೆಲಸ ಮಾಡಿದ್ದರು. ಶ್ರೀಯುತರು ಧಾರ್ಮಿಕ ದತ್ತಿ ಇಲಾಖೆಯ ಕಾಯಿದೆಗಳಿಗೆ ಕಾನೂನು ಸಲಹೆಗಾರರಾಗಿ ಕೆಲಸ ಮಾಡಿದ್ದು ನನಗೆ ನೆನಪಿದೆ. ಅನುಭವದ ಗಣಿಯಾಗಿದ್ದಂತಹ ಶ್ರೀಯುತರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆಮನೆವಾಸವನ್ನು ಅನುಭವಿಸಿದ್ದರು. ಅಲ್ಲದೇ, ಶ್ರೀಯುತರು ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಒಬ್ಬ ಸ್ವಯಂ ಸೇವಕನಾಗಿ ಅವರ ಕರ್ತವ್ಯಗಳನ್ನು ನಿರ್ವಹಿಸಿದ್ದನ್ನು ಸಹ, ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಶ್ರೀಯುತರು ಸಂವಿಧಾನದ ಬಗ್ಗೆ ಕಾನೂನು ಕಟ್ಟಳೆಗಳ ಬಗ್ಗೆ ಅಪಾರವಾದಂತಹ ಜ್ಞಾನವನ್ನು ಮತ್ತು ಸಂವಿಧಾನದ ಅನೇಕ ವಿಚಾರಗಳ ಬಗ್ಗೆ ಪರಾಮರ್ಶಿಸುವ ಹಾಗೂ ಅನುಭವಗಳನ್ನು ಹೇಳಿಕೊಡುವಂತಹ ಬಹಳ ದೊಡ್ಡ ಶಕ್ತಿಯನ್ನು ಹೊಂದಿದ್ದರು. ಅವರು ಕೆಲವು ಟ್ರಸ್ಟ್‌ಗಳನ್ನು ಸ್ಥಾಪನೆ ಮಾಡಿ ನ್ಯಾಯಾಂಗಕ್ಕೆ ಸಂಬಂಧಪಟ್ಟಂತೆ, ಅನೇಕ ವಿಚಾರಗಳ ಬಗ್ಗೆ ವಿಚಾರ ಸಂಕೀರ್ಣಗಳನ್ನು ಮತ್ತು ಅನೇಕ ವಿಚಾರಗಳ ಬಗ್ಗೆ ಪುಸ್ತಕಗಳನ್ನು ಬರೆದು ಸಾಹಿತ್ಯ ಲೋಕಕ್ಕೂ ಸಹ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ಸಹ ಗಮನಿಸಬೇಕಾಗುತ್ತದೆ. ಆ ಕಾರಣಕ್ಕೆ ಕುವೆಂಪು ವಿಶ್ವವಿದ್ಯಾನಿಯದವರು ಶ್ರೀಯುತರಿಗೆ 'Doctor of Law' ಪದವಿ ನೀಡಿ ಗೌರವಿಸಿದ್ದನ್ನು ನಾವೆಲ್ಲರೂ ಗಮನಿಸಬೇಕಾಗಿದೆ. ಸರ್ವೀಸ್ ಅಂಡರ್ ಸ್ಟೇಟ್, ಹಿಸ್ಟಾರಿಕಲ್ ಬ್ಯಾಟಲ್, ನೀಡ್ ಫಾರ್ ಅಮೆಂಡಿಂಗ್ ದಿ ಕಾನ್ಸ್‌ಟಿಟ್ಯೂಷನ್, ರಾಜಧರ್ಮ ವಿತ್ ದಿ ಲೈಸೆನ್ಸ್ ಆಫ್ ರಾಜನೀತಿ, ಕಾನೂನು ಮತ್ತು ಸಂವಿಧಾನಿಕ ಭಾರತದ ಇತಿಹಾಸ, ಪ್ರಾಚೀನ ಭಾರತದ ಕಾನೂನು, ತ್ರಿವರ್ಗ ಸಿದ್ಧಾಂತ, ಕೋಡ್ ಆಫ್ ಕಂಡಕ್ಟ್ ಫಾರ್ ರೂಲರ್ಸ್‌ನಂತಹ ಅನೇಕ ಪ್ರಮುಖ ಕೃತಿಗಳನ್ನು ರಚಿಸಿ ಈ ರಾಜ್ಯಕ್ಕೆ ಬಹುದೊಡ್ಡ ಕೊಡುಗೆ ಎನ್ನುವುದನ್ನು ತಾವು ಉಲ್ಲೇಖ ಮಾಡಿದ್ದೀರಿ, ಅದಕ್ಕೆ ನನ್ನ ಸಹಮತವನ್ನು ವ್ಯಕ್ತಿಪಡಿಸಿದ್ದೇನೆ. ಶ್ರೀಯುತರು ಅವರ ಬದುಕಿನ ಉದ್ದಕ್ಕೂ ಒಬ್ಬ ಒಳ್ಳೆಯ ಶ್ರೇಷ್ಠ ವ್ಯಕ್ತಿಯಾಗಿ, ಶಕ್ತಿಯಾಗಿ ನಮ್ಮ ಮುಂದೆ ಇದ್ದು, ಅನೇಕ ವಿಚಾರಗಳಿಗೆ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಬಿಟ್ಟುಹೋಗಿರುವಂತಹ ಆದರ್ಶಗಳು ನಮಗೆ ಮಾರ್ಗಸೂಚಿ ಆಗಬೇಕೆಂಬ ಭಾವನೆಯನ್ನು ವ್ಯಕ್ತಪಡಿಸಿ, ತಾವು ತಂದಿರುವಂತಹ ಈ ಸಂತಾಪ ಸೂಚನೆಗೆ ಸರ್ಕಾರದ ಪರವಾಗಿ ಬೆಂಬಲವನ್ನು ಸೂಚಿಸಿ, ಶ್ರೀಯುತರ ಅಗಲಿಕೆಯ ನೋವವನ್ನು ಅವರ ಕುಟುಂಬ ವರ್ಗಕ್ಕೆ ಭಗವಂತ ಭರಿಸುವಂತಹ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ, ಶ್ರೀಯುತರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ಕರುಣಿಸಲಿ ಎಂದು ತಮ್ಮ ಪ್ರಸ್ತಾವನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚನೆಯ ಗೊತ್ತುವಳಿಯನ್ನು ಬೆಂಬಲಿಸಿ ಮಂಡಗದ್ದೆ ರಾಮಾ ಜೋಯಿಸ್‌ರವರ ವಿಚಾರಗಳ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಯುತರ ನಿಧನದಿಂದ ಈ ರಾಷ್ಟ್ರದ ನ್ಯಾಯಾಂಗದ ಒಬ್ಬ ಶ್ರೇಷ್ಠ ನ್ಯಾಯವಾದಿ ಮತ್ತು ಅತ್ಯಂತ ಗೌರವಯುತವಾದಂತಹ ಸಾಕಷ್ಟು ಕಾನೂನು ಜ್ಞಾನ ಹೊಂದಿದಂತಹ ಒಬ್ಬ ನ್ಯಾಯಮೂರ್ತಿಯನ್ನು ಕಳೆದುಕೊಂಡಂತಹ ಅನುಭವವಾಗಿದೆ. ಶ್ರೀಯುತರು ಪ್ರಾರಂಭದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ, ನಂತರ ಗುಮಾಸ್ತ ಹುದ್ದೆಯಲ್ಲಿಯೂ ಸಹ ಕರ್ತವ್ಯ ನಿರ್ವಹಿಸಿದ್ದಾರೆ. ತದನಂತರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಕೆಲಸ ಪ್ರಾರಂಭ ಮಾಡಿದ್ದರು. ಅತ್ಯುತ್ತಮ ರೀತಿಯಿಂದ ಅವರಿಗೆ ಆಗಿನ ಕಾಲಕ್ಕೆ ತಾವು ಹೇಳಿದಂತೆ, 'Writ Petition Advocate' ಎಂದು ಹೇಳಿ ಪ್ರಖ್ಯಾತಿ ಪಡೆದಂತಹ ಒಬ್ಬ ಸುಪ್ರಸಿದ್ಧ ವಕೀಲರಾಗಿ 'eminent Jurist' ಎನ್ನುವಷ್ಟರ ಮಟ್ಟಿಗೆ ಬೆಳೆದಿದ್ದರು. ತಾವು ಪ್ರಸ್ತಾಪಿಸಿದಂತೆ, 1989 ರಲ್ಲಿ ಶ್ರೀಯುತರು ಗೋಕಾಕ್ ವರದಿಯಲ್ಲಿ ನೀಡಿದಂತಹ historical Judgement ಐತಿಹಾಸಿಕ ಮತ್ತು ಚಾರಿತ್ರಿಕವಾದಂತಹ ತೀರ್ಪು ಬಹುತೇಕವಾಗಿ ನಮ್ಮ ಕನ್ನಡ ಭಾಷೆಗೆ ನೀಡಿದಂತಹ ಒಂದು ದೊಡ್ಡ ಕೊಡುಗೆಯಾಗಿದೆ. ನಮ್ಮ ಕನ್ನಡ ನಾಡಿನಲ್ಲಿ ಕನ್ನಡವನ್ನು ಉಳಿಸಲಿಕ್ಕೆ ಮತ್ತು ಪ್ರೌಢಶಾಲೆಯ ಮಟ್ಟದವರೆಗೆ ಕನ್ನಡವನ್ನು ಒಂದು ವಿಷಯವನ್ನಾಗಿ ಕೈಗೆತ್ತಿಕೊಳ್ಳಲಿಕ್ಕೆ ಅನುಕೂಲಕರವಾಗಿದ್ದು, ನಿಜವಾಗಲೂ ನಮ್ಮ ನಾಡುನುಡಿಗೆ ಅವರ ಸೇವೆ ಅತ್ಯಂತ ಅಮೂಲ್ಯವಾದ್ದದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಶ್ರೀಯುತರು 1992 ರಲ್ಲಿ ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೇ, 2002 ರಲ್ಲಿ ಜಾರ್ಖಂಡ್ ಮತ್ತು 2003 ರಲ್ಲಿ ಬಿಹಾರ ರಾಜ್ಯಗಳ ರಾಜ್ಯಪಾಲರಾಗಿ ಹಾಗೂ 2008 ರಿಂದ 2014ರವರೆಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರಿಗೆ ಕುವೆಂಪು ವಿಶ್ವವಿದ್ಯಾನಿಲಯದವರು 'Doctor of Law' ಪದವಿ ನೀಡಿ ಗೌರವಿಸಿದ್ದನ್ನು ಸಹ ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಶ್ರೀಯುತರು ಕೈಗೆತ್ತಿಕೊಂಡ ಪ್ರಕರಣ ಎಂತಹದ್ದೇ ಇದ್ದರೂ ಸಹ, ಅದಕ್ಕೆ ಶಕ್ತಿ ತುಂಬಿ ಅವರ ಪರವಾಗಿ ತೀರ್ಪು ಬರುವಂತೆ ಚಾಕುಚಕ್ಯತೆಯಿಂದ ಜಾಣ್ಮೆಯಿಂದ argument ಮಾಡುವುದರ ಮುಖಾಂತರ ಕಕ್ಷಿದಾರರಿಗೆ ನ್ಯಾಯ ಕೊಡಿಸುವುದಕ್ಕೆ ಸಹಾಯ ಮಾಡಿದ್ದಾರೆ. ಶ್ರೀಯುತರು ನಿವೃತ್ತಿಯಾದ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನ್ಯಾಯವಾದಿಯಾಗಿ ಅತ್ಯುತ್ತಮವಾದಂತಹ ಸೇವೆಯನ್ನು ಸಲ್ಲಿಸಿ ನಮ್ಮ ರಾಷ್ಟ್ರದ ಉದ್ದಗಲಕ್ಕೂ ಹೆಸರು ಮಾಡಿದಂತಹವರು. ವಕೀಲರಿಗೆ ಯಾವ ಕೇಸ್ ಬಂದರೂ ಹಿಡಿಯುತ್ತಾರೆ. ಆದರೆ, ಸ್ಥಳೀಯ ಸಂಸ್ಥೆಗಳ ಮೀಸಲಾತಿ ಸಂದರ್ಭದಲ್ಲೂ ಕೂಡ ಅವರ ವಕಾಲತ್ ಹಾಕಿದ್ದು, as an advocate he could accept that brief.

(ಮುಂದು..)

(267) 04-03-2021 (11-20)ಎಂವಿ-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಆದರೆ, ಅದರಲ್ಲಿ ಅವರು ಯಶಸ್ವಿಯಾಗಲಿಲ್ಲ ಎನ್ನುವುದನ್ನು ನಾನು ಇಲ್ಲಿ ಜ್ಞಾಪಿಸಿಕೊಳ್ಳುತ್ತೇನೆ. ನ್ಯಾಯಾಲಯದಿಂದ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲ್ಪಟ್ಟಿದ್ದು ನಮ್ಮೆಲ್ಲರಿಗೂ ಸಂತೋಷದ ಸಂಗತಿ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡಿ, ಒಟ್ಟಾರೆಯಾಗಿ ಶ್ರೀ ರಾಮಾ ಜೋಯಿಸ್‌ರವರ ಹೆಸರು ಕೇವಲ ನಮ್ಮ ಕರ್ನಾಟಕ ರಾಜ್ಯಕ್ಕೆ ಸೀಮಿತವಲ್ಲ; ಇಡೀ ರಾಷ್ಟ್ರದ ಉದ್ದಗಲಕ್ಕೂ ನ್ಯಾಯಾಂಗ ಇಲಾಖೆಯಲ್ಲಿ ತಮ್ಮದೇ ಆದಂತಹ ಛಾಪು ಮೂಡಿಸಿದಂತಹವರು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡ ಬಯಸುತ್ತೇನೆ. ಅವರ ನಿಧನದಿಂದ ನಿಶ್ಚಿತವಾಗಿಯು ಒಬ್ಬ ಶ್ರೇಷ್ಠ ನ್ಯಾಯಾಧೀಶರು ಮತ್ತು ಶ್ರೇಷ್ಠ ವಕೀಲರನ್ನು ಕಳೆದುಕೊಳ್ಳುವುದರ ಜೊತೆಗೆ ಒಬ್ಬ ಕಾನೂನು ಪಂಡಿತರನ್ನು ಕಳೆದುಕೊಂಡಿದ್ದೇವೆ ಎನ್ನುವಂತಹ ಭಾವನೆ ನಮಗೆ ಬಂದಿದೆ ಎಂಬ ಮಾತನ್ನು ಹೇಳಿ, ಭಗವಂತ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಮತ್ತು ಅವರ ಅಗಲಿಕೆಯನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬದವರಿಗೆ ದಯಪಾಲಿಸಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಮಾನ್ಯ ಸದಸ್ಯರು ಮೃತರ ಗೌರವಾರ್ಥ ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಉಪಸ್ಥಿತರಿದ್ದ ಎಲ್ಲರೂ ಎದ್ದು ನಿಂತು, ಮೃತರ ಗೌರವಾರ್ಥ ಒಂದು ನಿಮಿಷದ ಕಾಲ ಮೌನವನ್ನಾಚರಿಸಿದರು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಗೃಹ ಮಂತ್ರಿಯವರು ಕೆಳಮನೆಗೆ ಹೋಗುವವರಿದ್ದಾರೆ...

**2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವಗಳು**

**ಅ) ವಿಷಯ:** ತಮಿಳುನಾಡು ಸರ್ಕಾರವು ಕಾವೇರಿ ನದಿ ಪಾತ್ರದಲ್ಲಿನ ಮಾಯನೂರು ಜಲಾಶಯವನ್ನು ಅಕ್ರಮವಾಗಿ ಬಳಸಿಕೊಂಡಿರುವ ಕುರಿತು.

---

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೇಳಿದ್ದೇವೆ.

**ಸಭಾಪತಿಯವರು:-** ನನ್ನ ಬಳಿಗೆ ಎರಡು ವಿಷಯಗಳು ಬಂದಿವೆ. ಆ ಎರಡು ವಿಷಯಗಳಲ್ಲಿ ಒಂದು ವಿಷಯ ಮೊದಲು ಬಂದಿದೆ. ಅದನ್ನು accept ಮಾಡಿದ್ದೇನೆ. ನಿಮ್ಮ ವಿಷಯ ತಡವಾಗಿ ಬಂದಿದೆ. ಆದುದರಿಂದ ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅದನ್ನು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದರೆ...

**ಸಭಾಪತಿಯವರು:-** ನಾನು ಅದನ್ನೂ ಒಪ್ಪುತ್ತೇನೆ. ಆದರೆ, ಎರಡೂ ವಿಷಯಗಳನ್ನು ಒಂದೇ ದಿವಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಕಾವೇರಿ...

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನನ್ನ ಬಳಿಗೆ ಒಂದು ವಿಷಯ ಬಂದಿದೆ, ಅದನ್ನು ತೆಗೆದುಕೊಂಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರ ವಿಷಯ ತಡವಾಗಿ ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಒಂದು ವಿಷಯವಿದೆ ಮತ್ತು ಮಾನ್ಯ ಕೆ.ಟಿ.ಶ್ರೀಕಂಠೇಗೌಡರ ಕಡೆಯಿಂದ ಒಂದು ವಿಷಯವಿದೆ.

**ಸಭಾಪತಿಯವರು:-** ಒಂದು ದಿವಸದಲ್ಲಿ ಒಂದೇ ವಿಷಯವನ್ನು ಮಾತ್ರ ತೆಗೆದುಕೊಳ್ಳಬೇಕು. ಮಾನ್ಯ ಕೆ.ಟಿ.ಶ್ರೀಕಂಠೇಗೌಡರ ಕಡೆಯಿಂದ ಮೊದಲು ಬಂದಿದೆ. ಆದುದರಿಂದ ಅದನ್ನು ತೆಗೆದುಕೊಂಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ರೀತಿಯಲ್ಲ, ಅಧಿಕೃತವಾಗಿ ಪ್ರತಿಪಕ್ಷದಿಂದ ಬಂದಿರುವುದಕ್ಕೆ ಪ್ರಾವಿಷನ್ ಕೊಡಬೇಕೆಂದು ರೂಲ್ ಇದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ದಿವಸಕ್ಕೆ ಒಂದೇ ತೆಗೆದುಕೊಳ್ಳಬೇಕೆಂದು ನಿಯಮ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು, ಒಂದೇ ವಿಷಯವನ್ನು ತೆಗೆದುಕೊಳ್ಳಬೇಕು. But, the priority should be given to us only.

**ಸಭಾಪತಿಯವರು:-** ಅವರ ಕಡೆಯಿಂದ ಮೊದಲು ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ಮೊದಲು ಬಂದಿದೆ ಎಂಬುದಕ್ಕೆ ಸಂಬಂಧವಿಲ್ಲ. ಒಂದು ಗಂಟೆ ಮುಂಚಿತವಾಗಿ ಕೊಡಬೇಕು.

**ಸಭಾಪತಿಯವರು:-** ಎರಡು ವಿಷಯಗಳು ಬಂದಿದ್ದು, ಆ ಎರಡರಲ್ಲಿ ಮೊದಲು ಬಂದಿರುವುದನ್ನು accept ಮಾಡಿ ತೆಗೆದುಕೊಂಡಿದ್ದೇನೆ. ಮತ್ತೊಂದನ್ನು ವಿಚಾರ ಮಾಡಿ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ವಿಷಯವನ್ನು accept ಮಾಡುತ್ತೀರೋ ಇಲ್ಲವೋ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮದು preliminary submission...

**ಸಭಾಪತಿಯವರು:-** ನಾನು ತಮಗೆ ಹೇಳಿದಂತೆ ಒಂದು ವಿಷಯವನ್ನು ತೆಗೆದುಕೊಂಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅತ್ಯಂತ ಅನುಭವಸ್ಥರು ಮತ್ತು ಹಿರಿಯರು ಹಾಗೂ ದೇಶದಲ್ಲಿ senior most MLC ಎನ್ನುವಂತಹ ಖ್ಯಾತಿಗೆ ಭಾಜನರಾಗಿದ್ದೀರಿ. ಇದನ್ನು ಅಧಿಕೃತ ಪ್ರತಿಪಕ್ಷದ ನಾಯಕರು ಕೊಟ್ಟಂತಹ ಸಂದರ್ಭದಲ್ಲಿ, ಅದನ್ನು ಒಂದು ಗಂಟೆಯ ಮುಂಚೆ; ಕೆಲವು ಮಂದಿ ಅರವತ್ತು ನಿಮಿಷಕ್ಕೆ ಕೊಡಬಹುದು, ಎಪ್ಪತ್ತು ನಿಮಿಷಕ್ಕೆ ಕೊಡಬಹುದು ಅಥವಾ ಎಂಬತ್ತು ನಿಮಿಷಕ್ಕೆ ಕೊಡಬಹುದು. ಆದರೆ, ಈ ಸದನದ ಸಂಪ್ರದಾಯದಂತೆ, ನಾನು ಇಲ್ಲಿಗೆ ಬಂದು ಸುಮಾರು 23 ವರ್ಷವಾಗಿದೆ. Here the priority should be given to the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

authorised opposition party. ಅಧಿಕೃತವಾದಂತಹ ಪ್ರತಿಪಕ್ಷಕ್ಕೆ ಅದನ್ನು ಕೈಗೆತ್ತಿಕೊಳ್ಳಬೇಕೆಂದು ಇದೆ. ಈ ಹಿಂದಿನ ಎಲ್ಲಾ ಸಭಾಪತಿಗಳು ಆ ಸತ್ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ತಾವು ಇವತ್ತು ಏನು ಹೊಸದಾಗಿ ಬಂದಿದ್ದೀರಾ?

**ಸಭಾಪತಿಯವರು:–** ನಾನು ನಿಯಮವನ್ನು ನೋಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಭವದ ಬಗ್ಗೆ it is not disputed.

**ಸಭಾಪತಿಯವರು:–** ನಾನು ಅದನ್ನು ನೋಡಿ, ಚರ್ಚೆ ಮಾಡಿ, ಅದನ್ನು ಚರ್ಚೆ ಮಾಡಿದ ನಂತರ ನಿಯಮಗಳನ್ನು ಓದಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಯಾರ ಜೊತೆ ಚರ್ಚೆ ಮಾಡಬೇಕು? ತಾವು ಅಪಾರವಾದ ಅನುಭವ ಹೊಂದಿರುವಂತಹವರು. ತಾವು ದಯಮಾಡಿ ನೋಡಿ.

**ಸಭಾಪತಿಯವರು:–** ಒಂದು ನಿಮಿಷ ನನ್ನ ಮಾತನ್ನು ಕೇಳಿ. ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ತೀರ್ಮಾನ ಮಾಡಿರುವುದನ್ನು ತಮಗೆ ಹೇಳುತ್ತೇವೆ. ತಮಗೆ ನಾಳೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ಕಾನೂನು ತೊಡಕು ಬರುತ್ತದೆ. ನಾನು ತಮ್ಮಷ್ಟು ಅನುಭವಸ್ಥನಲ್ಲ. ಏನೆಂದರೆ, ಅದು ಮುಗಿಯುವವರೆಗೆ ಮತ್ತೊಂದು Adjournment Motion ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ನಾನು ಅದನ್ನು ತಮಗೆ ಹೇಳುತ್ತೇನೆ. ಆಮೇಲೆ ತಮಗೆ ಏನಾದರೂ ಅನಿಸಿದರೆ ಅದನ್ನು ನನಗೆ ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮತ್ತು ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಇಂತಹ ಸಂದರ್ಭಗಳಲ್ಲಿ ಯಾವ ರೀತಿ ಮಾಡಬೇಕು ಎನ್ನುವಂಥದ್ದಕ್ಕೆ ಸಂಪ್ರದಾಯ ಮತ್ತು ನಿಯಮಗಳು ಇವೆ. ಆ ಪ್ರಕಾರ ತಾವು ಮಾಡಿ. ಎರಡನೆಯದಾಗಿ, ಇವುಗಳನ್ನು convert ಮಾಡಿ ಇಬ್ಬರಿಗೂ ಸಹ ಅವಕಾಶ ಮಾಡಿಕೊಡಿ. ಸರ್ಕಾರ ಅ ಎರಡೂ ವಿಷಯಗಳಿಗೂ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು convert ಮಾಡಿ. ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಹೇಳಿದ ಹಾಗೆ ಇದನ್ನು ನಿಯಮ 68ಕ್ಕೆ convert ಮಾಡಿ. I will accept your decision.

**ಸಭಾಪತಿಯವರು:–** ನಾನು ಏನು ಹೇಳುತ್ತೇನೆಂದು ಕೇಳಿ. ನಾನು ಬೆಳಗ್ಗೆ 10.00 ಗಂಟೆಗೆ ಬಂದಿದ್ದೇನೆ. ನಾನು ಬಂದು ಇದನ್ನು ನೋಡಿ, ಚರ್ಚೆ ಮಾಡಿದ ನಂತರ ಯಾವುದಕ್ಕೆ ಅವಕಾಶ ಕೊಡಬೇಕು ಮತ್ತು ಯಾವುದಕ್ಕೆ ಅವಕಾಶ ಕೊಡಬಾರದು ಎಂದು ತಿಳಿದ ನಂತರ, ಅವುಗಳಲ್ಲಿ ಮೊದಲು ಕೊಟ್ಟಿರುವುದನ್ನು priority ಮೇಲೆ ತೆಗೆದುಕೊಳ್ಳಬೇಕೆಂದು, ಅದನ್ನು ಚರ್ಚೆ ಮಾಡಿ ತೆಗೆದುಕೊಂಡಿದ್ದೇನೆ. ನಾನು ತಮಗೆ ಹೇಳುತ್ತೇನೆ. ನಾನು ಹೇಳಿದ ನಂತರ ತಮಗೆ ಏನಾದರೂ ಅನಿಸಿದರೆ ತಾವು ನಮಗೆ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು convert ಮಾಡುತ್ತೇನೆಂದು ಹೇಳಿಬಿಡಿ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈಗ ಮೊದಲು ಕೊಟ್ಟಿರುವುದನ್ನು ತೆಗೆದುಕೊಂಡಿದ್ದೇನೆ. ಅದಾದ ನಂತರ ತಮಗೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವುದನ್ನು ತೆಗೆದುಕೊಳ್ಳಬೇಕಾಗಿತ್ತು.

**ಸಭಾಪತಿಯವರು:–** ಆ ರೀತಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಇದು ಆಶ್ಚರ್ಯವೆನಿಸುತ್ತದೆ. ಮಾನ್ಯ ಬಸವರಾಜ ಬೊಮ್ಮಾಯಿಯವರೆ, ನನ್ನ ಮೊದಲನೆಯ ಅನುಭವವಿದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ preliminary submission ಗೆ ಅವಕಾಶ ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಈಗ ತಮ್ಮ ಮುಂದೆ ಎರಡು Adjournment Motion ಬಂದಿವೆ. ಒಂದು ಮೊದಲು ಬಂದು, ಎರಡನೆಯದು ಆಮೇಲೆ ಬಂದಿದೆ. ಇವುಗಳಲ್ಲಿ ಮೊದಲು ಯಾವುದನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ತಾವು ಘೋಷಣೆ ಮಾಡಿದ್ದೀರಿ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದು ಹತ್ತೂವರೆ ಗಂಟೆಗೆ ಬಂದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಅವಕಾಶ ನೀಡುವಂತೆ ಮಾನ್ಯ ಸದಸ್ಯರಿಗೆ ತಿಳಿಸಿ. ಈಗ ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೀರಿ. ಈ ಪ್ರಶ್ನೆ ಪ್ರಶ್ನೋತ್ತರವಾದ ಮೇಲೆ ಬರುತ್ತದೆ. ತಮ್ಮಲ್ಲಿ ನನ್ನ ಒಂದು ಬಿನ್ನಹ ಅಥವಾ ಮನವಿ ಏನೆಂದರೆ, ಈಗ ಅವರೊಂದು ವಿಷಯ ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವಂತಹ ವಿಷಯ ಬೇರೆ ಬೇರೆ ಇದೆ. ಪ್ರಶ್ನೋತ್ತರವಾದ ಮೇಲೆ ತಾವು ಈ ಎರಡನ್ನೂ ಸಹ ನಿಯಮ 68ಕ್ಕೆ ಎಂದು ರೂಲಿಂಗ್ ಕೊಡಿ. ರೂಲಿಂಗ್‌ನಲ್ಲಿ ಈ ಎರಡು ವಿಷಯಗಳನ್ನು ನಿಯಮ 68ಕ್ಕೆ convert ಮಾಡಿ, ಎರಡೂ ವಿಷಯಗಳಿಗೂ ಅವಕಾಶ ಮಾಡಿಕೊಡಿ. ಆಗ ಕಾನೂನು ತೊಡಕಿನ ಪ್ರಶ್ನೆ ಬರುವುದಿಲ್ಲ. ಈ ಎರಡೂ ವಿಷಯಗಳು ನಿಯಮ 68ರ ಅಡಿಯಲ್ಲಿ ಚರ್ಚೆಯಾಗಲಿ. ಅದಕ್ಕೆ ಸರ್ಕಾರ ಉತ್ತರ ನೀಡುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದನ್ನು ನಿಯಮ 68ಕ್ಕೆ convert ಮಾಡಬಹುದು.

**ಸಭಾಪತಿಯವರು:-** ನನಗೆ ಒಂದು ನಿಮಿಷ ಸಮಯ ನೀಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಬಹಳ ನೋವು ಅನಿಸುತ್ತಿದೆ. ನಾನು ತಮ್ಮ ನಿರ್ಣಯವನ್ನು ಗೌರವದಿಂದ ತಲೆಬಾಗಿ ಸ್ವೀಕಾರ ಮಾಡುತ್ತೇನೆ. ನಾನು ಅಧಿಕೃತ ಪ್ರತಿಪಕ್ಷದ ನಾಯಕನಾಗಿ Adjournment Motion ಕೊಟ್ಟಾಗ priority should be given. ಮತ್ತೆ ಬೇರೆಯವರಿಗೆಲ್ಲಾ Every Member has got an inherent right in this august House. They can move any Adjournment Motion. But, the priority must be given to the authorised opposition

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

party. ನಾವು ಇಲ್ಲಿ ಕುಳಿತುಕೊಂಡು ಕೆಲಸ ಮಾಡಬೇಕು. ಏಕೆಂದರೆ, ನಾನು ಎಡ ಮತ್ತು ಬಲ ಭಾಗಗಳ ಮಧ್ಯದಲ್ಲಿ ಕುಳಿತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಒಂದು ನಿಮಿಷ ಕುಳಿತುಕೊಂಡರೆ ಏನೆಂದು ಹೇಳುತ್ತೇನೆ. ನಾನು ಹೇಳುವುದನ್ನು ಆಮೇಲೆ ತಾವು ಒಪ್ಪಿಕೊಳ್ಳುತ್ತೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ತಾವು ನೀಡಿರುವ ವಿಷಯವನ್ನು ನಾನು ಓದಿದ್ದೇನೆ. ಇದು ಸಾರ್ವಜನಿಕ ಮಹತ್ವವಿರುವುದರಿಂದ ಇದನ್ನು ನಿಯಮ 68ಕ್ಕೆ convert ಮಾಡಿದ್ದೇನೆ.

**(ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿ ಪ್ರಸ್ತಾಪಿಸಿದ ಪ್ರಸ್ತಾವವನ್ನು ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮ್ಮ ವಿಷಯ ಏನೆಂದು ಹೇಳಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:** ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಗುಡಿಬಂಡೆ ಸರಹದ್ದಿನಲ್ಲಿ ಬರುವಂತಹ ಹಿರೇನಾಗವಳ್ಳಿ ಗ್ರಾಮದ ಬಳಿ ಕಾನೂನುಬಾಹಿರವಾಗಿ ನಡೆಸುವ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಜಿಲೆಟಿನ್ ಮತ್ತಿತರ ಸ್ಫೋಟಕಗಳು ಸ್ಫೋಟಗೊಂಡ ಕಾರಣ ಆರು ಜನರು ಮರಣ ಹೊಂದಿರುವ ಬಗ್ಗೆ.

---

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನದು initiation ಅಷ್ಟೆ. ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಗುಡಿಬಂಡೆ ಸರಹದ್ದಿನಲ್ಲಿ ಬರುವಂತಹ, ಹಿರೇನಾಗವಳ್ಳಿ ಗ್ರಾಮದ ಬಳಿಯಲ್ಲಿ ಕಾನೂನುಬಾಹಿರವಾಗಿ ನಡೆಸುವ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ, ಜಿಲೆಟಿನ್ ಮತ್ತಿತರ ಸ್ಫೋಟಕಗಳು ಸ್ಫೋಟಗೊಂಡ ಕಾರಣ ಆರು ಜನರು ಮರಣ ಹೊಂದಿದ್ದಾರೆ. ಸರ್ಕಾರದ ಬಿಗಿ ನಿಯಮಾವಳಿಗಳು ಇಲ್ಲದೆ ಮತ್ತು ಬಳಕೆದಾರರಿಗೆ ಮಾರ್ಗಸೂಚಿಗಳು ಇದ್ದರೂ ಸಹ ಇದನ್ನು ಕಠಿಣವಾಗಿ ಜಾರಿಗೊಳಿಸುವಲ್ಲಿ ಮತ್ತು ಸಾರ್ವಜನಿಕ ಜೀವಗಳ ಮತ್ತು ಭೂಸಂಪತ್ತನ್ನು ಸರ್ಕಾರ ಮತ್ತು ಜಿಲ್ಲಾಡಳಿತ ಸಂರಕ್ಷಿಸುವಲ್ಲಿ ವಿಫಲವಾಗಿರುವ ಕಾರಣ, ಒಂದು ತಿಂಗಳ ಅವಧಿಯಲ್ಲಿ ಎರಡನೆ ಬಾರಿಗೆ ರಾಜ್ಯದಲ್ಲಿ ಜಿಲೆಟಿನ್ ಸ್ಫೋಟ ಸಂಭವಿಸಿದೆ. ಈ ದುರಂತಗಳನ್ನು ಕುರಿತು ಹಾಗು ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ವಿಷಯವು ಸಾರ್ವಜನಿಕವಾಗಿ ಮಹತ್ವ ಇರುವುದರಿಂದ, ಕೊನೆಗೆ ಇಂದು ನಿಯಮ 59ರ ಅಡಿಯಲ್ಲಿ ಚರ್ಚಿಸುವುದಕ್ಕೆ ಅವಕಾಶ ಕಲ್ಪಿಸಿದೆ ಎಂದು ನಾನು ಕೇಳುತ್ತಿದ್ದೇನೆ. ಅದು ಏಕೆಂದು ಅದನ್ನು ನಾನು ಒಂದೆ ವಾಕ್ಯದಲ್ಲಿ ಹೇಳುತ್ತೇನೆ. ಅಂದರೆ, ಜನವರಿ 21, 2021ಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿಯ ಘಟನೆಯಾಯಿತು. ಫೆಬ್ರವರಿ 22, 2021ಕ್ಕೆ ಒಂದು ತಿಂಗಳ ಅವಧಿಯಲ್ಲಿ ಸ್ಫೋಟದಲ್ಲಿ ಅಲ್ಲೂ ಆರು ಜನ ಸತ್ತಿದ್ದಾರೆ, ಇಲ್ಲೂ ಆರು ಜನರು ಸತ್ತಿದ್ದಾರೆ. ಅವರ ದೇಹಗಳು ಛಿದ್ರ ಛಿದ್ರವಾಗಿ ಹೋಗಿವೆ. ಅಷ್ಟೆ ಅಲ್ಲ, ಅವರ ಕುಟುಂಬದವರ ಬದುಕು ಕೂಡ ಛಿದ್ರ ಛಿದ್ರವಾಗಿ ಹೋಗಿದೆ. ಈ ಹಿಂದೆ ನಾನು ಸರ್ಕಾರಕ್ಕೆ ಬಹಳಷ್ಟು ವಿನಂತಿಯನ್ನು ಮಾಡಿಕೊಂಡಿದ್ದೆ. ರಾಜ್ಯ ಗುಪ್ತಚಾರ ಇಲಾಖೆ, ಜಿಲ್ಲೆ, ತಾಲ್ಲೂಕು ಹಾಗೂ ಪೊಲೀಸ್ ಠಾಣೆ ಇವರುಗಳ ವೈಫಲ್ಯತೆಯಿಂದ ಈ ತರಹದ ಸ್ಫೋಟಕಗಳು ಆಗುತ್ತವೆ. ಯಾವುದೇ ರೀತಿ ತರಬೇತಿ ಇಲ್ಲದೆ, ಕಾನೂನುಬಾಹಿರವಾಗಿ ಅವುಗಳನ್ನು ಸ್ಫೋಟ ಮಾಡುವುದರಿಂದ ಬಡ ಕಾರ್ಮಿಕರ ಅಮೂಲ್ಯವಾದ ಜೀವಗಳು ಹೋಗುತ್ತವೆ. ಈ ರೀತಿಯ ಘಟನೆ ಏನು ಇದೇ ಮೊದಲು ಅಲ್ಲ. ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿಯ ಘಟನೆಯಾಗಿತ್ತು. ಇದು ಎರಡನೆಯದು, ಅದು ಒಂದು ತಿಂಗಳಿನಲ್ಲಿ. ಅಂದರೆ ಮೂವತ್ತೊಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸದಲ್ಲಿ ಎರಡನೆ ಘಟನೆ ಘಟಿಸಿದೆ. ಈ ರೀತಿಯಾದ ಘಟನೆಗಳು ಮೇಲಿಂದ ಮೇಲೆ ಸಂಭವಿಸಿದರೆ, ನಾವು ಈ ಸದನಕ್ಕೆ ಬಂದು ಏನು ಮಾತನಾಡಬೇಕು?

**(ಮುಂದು...)**

(268) 11.30 04.03.2021 ಎಲ್‌ಎಲ್/ಜಿಆರ್

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಎಸ್.ಆರ್. ಪಾಟೀಲ್(ಮುಂದುವರೆದಿದ್ದು...)**

ನಾವು ಏನೂ ಹೇಳಿದರೂ ಸಹ ಅದಕ್ಕೆ ಯಾವುದೇ ಪರಿಹಾರ ಇರುವುದಿಲ್ಲ. ಈ ಹಿಂದೆ ಮಾನ್ಯ ಗೃಹ ಮಂತ್ರಿಗಳು ಒಂದು ಉತ್ತರ ಕೊಟ್ಟಿದ್ದರು. ಅದೇ ರೀತಿ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು ಸಹ ಒಂದು ಉತ್ತರ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಅವರುಗಳು ಈ ಪ್ರಕರಣದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಮತ್ತು ಇನ್ನು ಮುಂದೆ ಈ ರೀತಿಯ ಘಟನೆಗಳು ಆಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದರು. ಹಾಗಾಗಿ, ಈ ವಿಷಯ ಸಾರ್ವಜನಿಕ ಮಹತ್ವವಾದದ್ದು, ಅದರಲ್ಲಿಯೂ ಇದು repeated occurrence ಆಗಿರುವುದರಿಂದ ಪದೇ ಪದೇ ಸ್ಫೋಟಕಗಳು ಕಾನೂನು ಬಾಹಿರವಾಗಿ ನಮ್ಮ ರಾಜ್ಯದೊಳಗೆ ಬರುತ್ತಿದ್ದು ಹಾಗೂ ಮನಸೋ ಇಚ್ಛೆ ಅವುಗಳನ್ನು ಉಪಯೋಗ ಮಾಡುವುದರಿಂದ ಅಮೂಲ್ಯವಾದಂತಹ ಜೀವ ಕಳೆದುಕೊಳ್ಳುವಂತಹ ದುಸ್ಥಿತಿಗೆ ನಾವು ತಲುಪಿದ್ದೇವೆ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಈ ರೀತಿ ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿರುತ್ತದೆ. ಸರ್ಕಾರಕ್ಕೆ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಬಾಯಿ ಮತ್ತು ಚರ್ಮ ಇದ್ದು, ಅವು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೇ ಎಂಬ ಬಗ್ಗೆ ನನಗೆ ಸಂಶಯ ಬರುತ್ತಿದೆ.

**ಸಭಾಪತಿಯವರು:–** ಈಗ ತಾವು ತಮ್ಮ ವಿಷಯದ ಬಗ್ಗೆ ಪ್ರಸ್ತಾಪ ಮಾಡಿರುತ್ತೀರಿ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಈ ವಿಷಯವನ್ನು ತಾವು ಕೈಗೆತ್ತಿಕೊಳ್ಳಬೇಕು. It is of a very very public importance. It is the need of the hour.

**ಸಭಾಪತಿಯವರು:–** ತಾವು ಪ್ರಸ್ತಾಪ ಮಾಡಿರುವ ವಿಷಯ ಸಾರ್ವಜನಿಕವಾಗಿ ಬಹಳ ಮಹತ್ವವಾದ ವಿಷಯ ಆಗಿರುವುದರಿಂದ, ತಮ್ಮ ವಿಷಯವನ್ನು ನಿಯಮ 68ಕ್ಕೆ ಮಾರ್ಪಾಡು ಮಾಡಿ, ಇದರ ಬಗ್ಗೆ ಮಾತನಾಡಲು ತಮಗೆ ಸಮಯಾವಕಾಶ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್**:- ಧನ್ಯವಾದಗಳು.

**(ನಿಯಮ 59 ರಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿ ಪ್ರಸ್ತಾಪಿಸಿದ ಪ್ರಸ್ತಾವವನ್ನು ನಿಯಮ 68ಕ್ಕೆ ಪರಿವರ್ತಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಸಭಾಪತಿಯವರು**:- ಮಾನ್ಯ ಗೃಹಮಂತ್ರಿಗಳು ಕೆಳಮನೆಗೆ ಹೋಗಬೇಕಾಗಿರುವುದರಿಂದ ಮೊದಲನೆಯದಾಗಿ, ಗೃಹ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ.

**ಪ್ರಶ್ನೆ ಸಂಖ್ಯೆ:627**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ**:- ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ಬೆಂಗಳೂರು ನಗರದಲ್ಲಿ ದಿನೇದಿನೇ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆ ಬಗ್ಗೆ ನನ್ನ ಮೊದಲನೆ ಪ್ರಶ್ನೆ ಕೇಳಿರುತ್ತೇನೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಆ ಪ್ರಶ್ನೆಗೆ ಸರಿಯಾದ ಉತ್ತರ ನೀಡಿರುತ್ತಾರೆ. ಆದರೆ, ನನ್ನ ಪ್ರಶ್ನೆ ಸಂಖ್ಯೆ(ಇ) ರಲ್ಲಿ, 'ನಗರದ ಅನಿರೀಕ್ಷಿತ ತಿರುವುಗಳಲ್ಲಿ ಟ್ರಾಫಿಕ್ ಪೋಲೀಸರು ಏಕಾಏಕಿ ಅಡ್ಡ ಬಂದು ವಾಹನ ಸವಾರರ ಅಪಘಾತಗಳಿಗೆ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂಬ ಪ್ರಶ್ನೆಗೆ, 'ಬಂದಿರುವುದಿಲ್ಲ' ಎಂದು ಉತ್ತರ ನೀಡಿರುತ್ತಾರೆ. ಈ ಬಗ್ಗೆ ಇಲ್ಲಿರುವಂತಹ ಎಲ್ಲಾ ಸದಸ್ಯರಿಗೂ ಗೊತ್ತಿರುತ್ತದೆ. ಇವೊತ್ತಿನ ದಿವಸ ನಮ್ಮ ಸಿಸ್ಟಮ್‌ನಲ್ಲಿ ಅಥವಾ ಟೆಕ್ನಾಲಜಿ ವೈಸ್‌ನಲ್ಲಿ ನಾವು ಸಾಕಷ್ಟು ಮುಂದುವರಿದಿದ್ದರೂ ಸಹ ಮತ್ತು ಎಲ್ಲಾ ಕಡೆ ಸಿ.ಸಿ.ಟಿ.ವಿ. ಕ್ಯಾಮೆರಾ ಇದ್ದರೂ ಸಹ, ಟ್ರಾಫಿಕ್ ಪೋಲೀಸರು ಅದರಲ್ಲಿಯೂ ಕಾನ್‌ಸ್ಟೇಬಲ್‌ಗಳು ಈಗಲೂ ಸಹ, ರಸ್ತೆಗಳಲ್ಲಿ ಬರುವಂತಹ ವಾಹನಗಳಿಗೆ ಅಡ್ಡ ಓಡಿ ಬರುತ್ತಾರೆ. ಇದರಿಂದಾಗಿ, ಸಾರ್ವಜನಿಕರಿಗೂ ತೊಂದರೆ ಹಾಗೂ ಸರ್ಕಾರಕ್ಕೂ ಸಹ ಕೆಟ್ಟ ಹೆಸರು ಬರುತ್ತಿದೆ. ಹಾಗಾಗಿ, ನನ್ನ ಪ್ರಶ್ನೆಗೆ ತಪ್ಪು ಮಾಹಿತಿ ನೀಡಿರುತ್ತಾರೆ. ಏಕೆಂದರೆ, ಮಾನ್ಯ ಗೃಹಮಂತ್ರಿಗಳು ಈ ಹಿಂದೆ, ಇದೇ ಪ್ರಶ್ನೆಗೆ ಹೌದು, 'ನಮ್ಮ ಗಮನಕ್ಕೆ ಬಂದಿದೆ' ಎಂದು ಉತ್ತರ ನೀಡಿರುತ್ತಾರೆ.

**ಸಭಾಪತಿಯವರು**:- ಮಾನ್ಯ ರಮೇಶ್‌ಗೌಡರವರೇ, ತಮ್ಮ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿ.

**ಶ್ರೀ ಬಸವರಾಜ ಬೊಮ್ಮಾಯಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ನನಗೆ ಅರ್ಥವಾಗಿದೆ. ಅವರ ಮೂಲ ಪ್ರಶ್ನೆ ಟ್ರಾಫಿಕ್ ಹೆಚ್ಚಾಗುತ್ತಿರುವುದಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಇದ್ದು, ಅದಕ್ಕೆ ನಾನು ಉತ್ತರ ನೀಡಿದ್ದು, ಅದು ಅವರಿಗೆ ತೃಪ್ತಿಕರವಾಗಿರುತ್ತದೆ. ಅದರಲ್ಲಿ 12 ಕಾರಿಡಾರ್ ಮಾಡುತ್ತಿದ್ದೇವೆ ಮತ್ತು ಅದಕ್ಕಾಗಿ ಸುಮಾರು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎಲ್ಲಾ ತಿರುವುಗಳಲ್ಲಿ ಬಾಟಲ್‌ನೆಕ್‌ಗಳನ್ನು ತೆಗೆದು ಹೈ ಡೆನ್ಸಿಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಿಡಾರ್‌ಗಳನ್ನು seamless signal ಹಾಕಿ ಮಾಡುತ್ತಿದ್ದೇವೆ. ಅದರ ಬಗ್ಗೆ ವಿವರವನ್ನು ಸಹ ಕೊಟ್ಟಿರುತ್ತೇನೆ. ಆದರೆ, ಅವರ ಪಶ್ನೆ ಸಂಖ್ಯೆ(ಇ) ಪೊಲೀಸರು ರಸ್ತೆಗಳಲ್ಲಿ ಬರುವಂತಹ ಸಾರ್ವಜನಿಕರಿಗೆ ಏಕಾಏಕಿ ಅಡ್ಡ ಬರುವುದರಿಂದ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಮತ್ತು ಅಪಘಾತಗಳು ಆಗುತ್ತಿವೆ ಎಂದು ಕೇಳಿರುತ್ತಾರೆ. ಅದರಂತೆ, ಟ್ರಾಫಿಕ್ ಸಮಸ್ಯೆಯನ್ನು ಯಾವ ರೀತಿ ನಿಯಂತ್ರಿಸಬೇಕು ಮತ್ತು ಯಾರ್‍ಯಾರು ಟ್ರಾಫಿಕ್ ರೂಲ್ಸ್ ಅನ್ನು ಕ್ರಾಸ್ ಮಾಡುತ್ತಾರೆ, ಅವರನ್ನು ಹೇಗೆ ನಿಯಂತ್ರಿಸಬೇಕು ಎಂಬ ಬಗ್ಗೆ ಇದರಲ್ಲಿ 2 ರೀತಿಯ ನಾರ್ಮ್ಸ್‌ಗಳು ಇರುತ್ತವೆ. ಅದಕ್ಕಾಗಿ ನಾವು ಟೆಕ್ನಾಲಜಿಯನ್ನು ಸಹ ಉಪಯೋಗ ಮಾಡುತ್ತಿದ್ದೇವೆ. ಸಿಗ್ನಲ್ ಜಂಪ್ ಆದಾಗ, ಸ್ಪೀಡ್ ಹೆಚ್ಚಾದಾಗ, ಅದನ್ನು ನಿಯಂತ್ರಿಸುವುದಕ್ಕಾಗಿ ಟೆಕ್ನಾಲಜಿ ಇದೆ. ಆದರೆ, ಅದನ್ನು ಎಲ್ಲಾ ಕಡೆಗಳಲ್ಲಿಯೂ ಅಳವಡಿಸುವುದಕ್ಕೆ ಆಗಿರುವುದಿಲ್ಲ. ಈ ಬಗ್ಗೆ ನಾವು ಏನೇ ಉತ್ತರ ಕೊಟ್ಟರೂ ಸಹ ಕೆಲವು ಸಂದರ್ಭಗಳಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಿರುವುದನ್ನು ನಾವು ಕೂಡ ನೋಡಿರುತ್ತೇವೆ. ಆದರೆ, ಅಪರಾಧ ಮಾಡಿದಂತಹ ಸಂದರ್ಭದಲ್ಲಿ ಅದನ್ನು ತಡೆಯುವಂತಹ ಅನಿವಾರ್ಯತೆ ಸಹ ಪೊಲೀಸರಿಗೆ ಇರುತ್ತದೆ. ಹೀಗಾಗಿ, ಕೆಲವು ಸಂದರ್ಭಗಳಲ್ಲಿ ಪೊಲೀಸರು ಅದನ್ನು ಮಾಡುತ್ತಾರೆ. ಆದರೂ ಸಹ, ಇದರಲ್ಲಿ ನಾನು ಸೂಚನೆ ಕೊಡುವುದೇನೆಂದರೆ, ಟ್ರಾಫಿಕ್ ನಿಯಂತ್ರಣದ ಸಂದರ್ಭದಲ್ಲಿ, ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸುವುದಾಗಲಿ ಅಥವಾ ಅಪಘಾತ ಆಗುವಂತಹ ಹಂತಕ್ಕೆ ತೆಗೆದುಕೊಂಡು ಹೋಗದೇ ಅವರು ತಮ್ಮ ಕರ್ತವ್ಯವನ್ನು ನಿಭಾಯಿಸಬೇಕು ಎನ್ನುವಂತಹ ಸೂಚನೆಯನ್ನು ನಾನು ಕೊಡುತ್ತೇನೆ.

**ಶ್ರೀ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ, enforcement ಜಾಸ್ತಿಯಾಗಿದೆ, ಟ್ರಾಫಿಕ್ ಸಮಸ್ಯೆ...

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ತಾವು ಅನುಮತಿ ಪಡೆಯದೇ ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಮಾತನಾಡಬೇಡಿ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸಂಖ್ಯೆ(ಆ)ಗೆ, 'ಬೆಂಗಳೂರು ಸಂಚಾರ ವಿಭಾಗದಲ್ಲಿ ಪೂರ್ವ, ಪಶ್ಚಿಮ ಮತ್ತು ಉತ್ತರ ವಲಯಗಳು' ಎಂದು ಮೂರು ವಲಯಗಳು ಮಾತ್ರ ಇರುತ್ತದೆ. ಆದರೆ, ಈ ಮೂರು ವಲಯಗಳಲ್ಲಿ ಇರತಕ್ಕಂತಹ ಸಂಚಾರ ವಿಭಾಗ ದಕ್ಷಿಣ ವಿಭಾಗದಲ್ಲಿ ಇರುವುದಿಲ್ಲ. ಆದರೆ ನನಗೆ ನೀಡಿರುವ ಉತ್ತರದಲ್ಲಿ, 'ದಕ್ಷಿಣ ವಲಯ ಸ್ಥಾಪಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ'ವೆಂದು ಉತ್ತರ ನೀಡಿರುತ್ತಾರೆ. ಆದರೆ, ಪ್ರಸ್ತಾಪ ಈಗ ಬೇಕಾಗಿರುವುದಿಲ್ಲ. ಬೆಂಗಳೂರು ಪೂರ್ವ, ಪಶ್ಚಿಮ ಮತ್ತು ಉತ್ತರ ವಲಯ ಸಂಚಾರ ವಿಭಾಗ ಇರುವ ರೀತಿ, ದಕ್ಷಿಣ ವಲಯ ಸಂಚಾರ ವಿಭಾಗ ಸ್ಥಾಪಿಸುವ ಬಗ್ಗೆ 2016ರಲ್ಲಿಯೇ ಸರ್ಕಾರಿ ಆದೇಶವಾಗಿದ್ದು,

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಕೇವಲ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಆದರೆ, ಸರ್ಕಾರ ಅದನ್ನು ಮಾಡಿರುವುದಿಲ್ಲ. ಬೆಂಗಳೂರು ಟ್ರಾಫಿಕ್ ಸಮಸ್ಯೆ ಬಗ್ಗೆ ಎಲ್ಲರಿಗೂ ಗೊತ್ತಿರುತ್ತದೆ. ಬೆಂಗಳೂರು ಪೂರ್ವ ವಲಯ ಸಂಚಾರ ವಿಭಾಗಕ್ಕೆ 21 ಪೊಲೀಸ್ ಸ್ಟೇಷನ್ ಬರುತ್ತದೆ. ಅದೇ ರೀತಿ ಪಶ್ಚಿಮ ವಲಯಕ್ಕೆ 18 ಪೊಲೀಸ್ ಸ್ಟೇಷನ್ ಮತ್ತು ಉತ್ತರ ವಲಯಕ್ಕೆ ಕೇವಲ 5 ಪೊಲೀಸ್ ಸ್ಟೇಷನ್‌ಗಳು ಬರುತ್ತವೆ. ಆದರೆ, ದಕ್ಷಿಣ ವಲಯದಲ್ಲಿ ಸಂಚಾರಿ ವಿಭಾಗ ಸ್ಥಾಪಿಸುವ ಬಗ್ಗೆ 2016ರಲ್ಲಿ ಆಗಿರುವಂತಹ ಸರ್ಕಾರಿ ಆದೇಶವನ್ನು ಅನುಷ್ಠಾನ ಮಾಡಬೇಕೆಂದು ನಾನು ಮೊದಲನೆಯದಾಗಿ ಮಾನ್ಯ ಗೃಹಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಅದೇ ರೀತಿ, ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ, ಕೊತ್ತನ್ನೂರು, ಬಾಗಲೂರು ಹಾಗೂ ಮತ್ತೊಂದು ಪೊಲೀಸ್ ಸ್ಟೇಷನ್ ಸೇರಿದಂತೆ ಒಟ್ಟು ಮೂರು ಪೊಲೀಸ್ ಸ್ಟೇಷನ್‌ಗಳು ದೇವನಹಳ್ಳಿ ಪೊಲೀಸ್ ಸ್ಟೇಷನ್ ವ್ಯಾಪ್ತಿಗೆ ಬರುತ್ತಿದ್ದು, ಅವರು ಬೆಂಗಳೂರು ನಗರಕ್ಕೆ ಬರಬೇಕಾದರೆ ಸುಮಾರು 41 ಕಿಲೋಮೀಟರ್ ಆಗುತ್ತದೆ. ಆ ವ್ಯಾಪ್ತಿಯಲ್ಲಿ ಯಾವುದಾದರೂ ಅಪಘಾತವಾದರೆ ಅಥವಾ ಮತ್ತೊಂದು ಆದರೆ, ದೂರು ನೀಡುವುದಕ್ಕಾಗಿ ಬೆಂಗಳೂರಿನಿಂದ ದೇವನಹಳ್ಳಿಗೆ ಹೋಗಬೇಕಾಗುತ್ತದೆ. ಅದೇ ರೀತಿ, ಅಲ್ಲಿರತಕ್ಕಂತಹ ಇನ್ಸ್‌ಪೆಕ್ಟರ್ ಸದರಿ ಪ್ರಕರಣದ ಸಂಬಂಧವಾಗಿ ಸುಮಾರು 41 ಕಿಲೋಮೀಟರ್ ಬರಬೇಕಾಗುತ್ತದೆ. ಇವೊತ್ತಿನ ಟ್ರಾಫಿಕ್ ಸಮಸ್ಯೆಯಲ್ಲಿ 41 ಕಿಲೋಮೀಟರ್ ಬರುವುದಕ್ಕೆ ಬೆಂಗಳೂರು ನಗರದಲ್ಲಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ಬಗ್ಗೆ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಮತ್ತು ಅಲ್ಲಿರತಕ್ಕಂತಹ ಮಾನ್ಯ ಆಯುಕ್ತರಿಗೆ ಕೊಟ್ಟಿರುತ್ತಾರೆ. ಆದರೆ, ಇದುವರೆವಿಗೂ ಸಹ ಅದು ಅನುಷ್ಠಾನವಾಗಿರುವುದಿಲ್ಲ.

ಎರಡನೆಯದಾಗಿ, ಇಲ್ಲಿರುವಂತಹ ಪೊಲೀಸ್ ಸ್ಟೇಷನ್ ಅನ್ನು ಹೆಗಡೆ ನಗರಕ್ಕೆ ಸ್ಥಳಾಂತರ ಮಾಡಬೇಕು. ಅದರಲ್ಲಿ ಕೇವಲ ಡಿವಿಷನ್ ಮಾತ್ರ ಬದಲಾವಣೆ ಆಗಬೇಕು. ಹಾಗಾಗಿ, ಇದರಲ್ಲಿ ಸರ್ಕಾರಕ್ಕೆ ಶೂನ್ಯ ಬಜೆಟ್ ಅಂದರೆ, ಯಾವುದೇ ಬಜೆಟ್ ಬೇಕಾಗಿರುವುದಿಲ್ಲ ಮತ್ತು ಇದರಿಂದ ಸಾರ್ವಜನಿಕರಿಗೂ ಸಹ ಅನುಕೂಲವಾಗುತ್ತದೆ. ಹಾಗಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ದಕ್ಷಿಣ ವಲಯ ಸಂಚಾರ ವಿಭಾಗ ಮಾಡುವಂತಹ ಪ್ರಸ್ತಾವನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ, ಸಂಚಾರಿ ವಿಭಾಗದಲ್ಲಿ ಪೂರ್ವ, ಪಶ್ಚಿಮ ಮತ್ತು ಉತ್ತರ ವಲಯಗಳೆಂದು ಮೂರು ವಲಯಗಳು ಇರುತ್ತವೆ. ಅದರಲ್ಲಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹುತೇಕವಾಗಿ ಎಲ್ಲವೂ ಕವರ್ ಆಗಿರುತ್ತದೆ. ಆದರೆ, ಬೆಂಗಳೂರು ನಗರ ಬಹಳಷ್ಟು ವಿಸ್ತರಣೆ ಆಗಿದ್ದರಿಂದ, ಸಂಪೂರ್ಣ ಬೆಂಗಳೂರು ನಗರದ ಪೊಲೀಸರ reorganisation ಮಾಡುವುದಕ್ಕೆ ಈಗಾಗಲೇ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿದ್ದು, ಅದು ಅಂತಿಮ ಹಂತದಲ್ಲಿದ್ದು, ಬಹುಶಃ ಒಂದು ವಾರದಲ್ಲಿ ಅಥವಾ 10 ದಿನಗಳಲ್ಲಿ ತನ್ನ ವರದಿಯನ್ನು ಕೊಡುವವರಿದ್ದಾರೆ. ಅದರಲ್ಲಿ ನಾವು ಟ್ರಾಫಿಕ್ ವಿಭಾಗವನ್ನು ಸಹ ಸೇರಿಸಲಾಗಿರುತ್ತದೆ. ಪ್ರಸ್ತುತ ಸುಮಾರು 110 ಹಳ್ಳಿಗಳು ಸೇರಿ ಬೃಹತ್ ಮಹಾನಗರ ಪಾಲಿಕೆಯಾಗಿದೆ, ಅವುಗಳನ್ನು ಕೂಡ ಸೇರಿಸಿ, ಎಲ್ಲೆಲ್ಲಿ 'ಡಾರ್ಕ್ ಏರಿಯಾ' ಇದೆ ಅಂದರೆ, ಒಂದು ಪೊಲೀಸ್ ಸ್ಟೇಷನ್‌ನಿಂದ ಮತ್ತೊಂದು ಪೊಲೀಸ್ ಸ್ಟೇಷನ್ ನಡುವೆ ಗ್ಯಾಪ್ ಬಹಳಷ್ಟು ಇರುತ್ತದೆ. ಅಲ್ಲಿ ಹೊಸ ಪೊಲೀಸ್ ಸ್ಟೇಷನ್ ಮಾಡುವಂತಹ, ಡಿಖಾಡಿಣಖಣಣಡುಖಂ ಮಾಡುವಂತಹ ಬೆಂಗಳೂರು ನಗರದಲ್ಲಿ ಮಾನ್ಯ ಸದಸ್ಯರು ಹೇಳಿದಂತೆ, ಕೆಲವು ಡಿವಿಷನ್‌ಗಳಿಗೆ ಜಾಸ್ತಿ ಪೊಲೀಸ್ ಸ್ಟೇಷನ್‌ಗಳಿದ್ದು, ಕೆಲವು ಡಿವಿಷನ್‌ಗಳಿಗೆ ಕಡಿಮೆ ಪೊಲೀಸ್ ಸ್ಟೇಷನ್‌ಗಳಿರುತ್ತವೆ ಮತ್ತು ಪೊಲೀಸ್ ಸ್ಟೇಷನ್ ವ್ಯಾಪ್ತಿ ಕೆಲವು ಕಡೆ ಜಾಸ್ತಿ ಇದ್ದು, ಇನ್ನೂ ಕೆಲವು ಕಡೆ ಬಹಳ ಕಡಿಮೆ ಇರುತ್ತದೆ. ಹೀಗಾಗಿ, ಈ ಎಲ್ಲವನ್ನೂ reorganise ಮಾಡುವುದಕ್ಕೆ ಪೊಲೀಸ್ ಆಯುಕ್ತರ ಸಮಿತಿ ಅಂತಿಮವಾಗಿ ಸರ್ಕಾರಕ್ಕೆ ವರದಿ ನೀಡುತ್ತಾರೆ. ಅದರಲ್ಲಿ ದಕ್ಷಿಣ ವಲಯ ಸಂಚಾರ ವಿಭಾಗವನ್ನು ಮಾಡುವಂತಹ ಪ್ರಸ್ತಾವನೆ ಅಳವಡಿಸಿಕೊಂಡಿದ್ದೇವೆ. ಅದರಂತೆ, ಆ ವರದಿ ಬಂದ ತಕ್ಷಣವೇ ನಾವು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಎರಡನೆಯದಾಗಿ, ಮಾನ್ಯ ಸದಸ್ಯರು ಹೇಳಿದಂತೆ, ಬೆಂಗಳೂರು ಏರ್‌ಪೋರ್ಟ್ ಬೆಂಗಳೂರು ನಗರಕ್ಕೆ ಸೇರಬೇಕೆಂಬ ದೃಷ್ಟಿಯಿಂದ ಆ ದೇವನಹಳ್ಳಿ ಪೊಲೀಸ್ ಠಾಣೆಯನ್ನು ಮಾತ್ರ ಬೆಂಗಳೂರು ನಗರಕ್ಕೆ ಸೇರಿಸಲಾಗಿದೆ. ಅದು ಕೂಡ ನನ್ನ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ನಾನೇ ಪ್ರಶ್ನೆಯನ್ನು ಸಹ ಕೇಳಿರುತ್ತೇನೆ. ಈ reorganisation ನಲ್ಲಿ ಅದನ್ನು ಕೂಡ set right ಮಾಡುತ್ತೇವೆ. ಬೆಂಗಳೂರು ನಗರ ಪೊಲೀಸ್ ಸ್ಟೇಷನ್ ವ್ಯಾಪ್ತಿಗೆ, ನಗರದ ಗಡಿಗೆ ಇತಿ–ಮಿತಿಯನ್ನು ನಿಗದಿ ಮಾಡಿ, ಅದಕ್ಕಾಗಿ ಒಂದು ಪ್ರತ್ಯೇಕವಾದಂತಹ ಪೊಲೀಸ್ ಸ್ಟೇಷನ್ ಮಾಡುವಂತಹ ಒಂದು ಪ್ರಸ್ತಾವನೆ ನಮ್ಮ ಮುಂದಿರುತ್ತದೆ. ಈ ಎಲ್ಲಾ ಅಂಶಗಳನ್ನು ಸೇರಿಸಿ, ಸಮಗ್ರವಾಗಿ reorganisation of Bengaluru Police Stations ಏನಿದೆ ಅದನ್ನು ಖಂಡಿತವಾಗಿ ಮಾಡುತ್ತೇವೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರ ಸಲಹೆಗಳನ್ನು ಅಳವಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 597**
**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ: ಚಂದ್ರಶೇಖರ್ ಬಿ. ಪಾಟೀಲ್‌ರವರು ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ:709**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ನೀಡಿರುತ್ತಾರೆ. ಆದರೆ, ನಾನು ಮೂಲಭೂತವಾಗಿ ಕೇಳುವುದೇನೆಂದರೆ, ಕ್ರಮ ಸಂಖ್ಯೆ(ಇ) ಪ್ರಶ್ನೆಗೆ, ಮಾನ್ಯ ಸಚಿವರು, 'ಸಾರ್ವಜನಿಕ ಸಭೆ ನಡೆಸುವಂತಹ ಸಂದರ್ಭದಲ್ಲಿ ಪೋಲೀಸ್ ಆಯುಕ್ತರು ಒಂದು ದಿನ ಮುಂಚಿತವಾಗಿಯೇ ಮಾಧ್ಯಮ ಹಾಗೂ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುತ್ತಾರೆಂದು' ತಮ್ಮ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ, ಬೆಂಗಳೂರಿನಂತಹ ನಗರಕ್ಕೆ ಒಂದು ದಿನ ಸಮಯ ಸಾಕಾಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಅದಕ್ಕಾಗಿ, ಸ್ವಲ್ಪ ಮುಂಚಿತವಾಗಿ ತಿಳಿಸಬೇಕು. ಸಾರ್ವಜನಿಕರು ಎಂದರೆ, ನನಗೆ ಗೊತ್ತಿರುವ ಪ್ರಕಾರ ಪೋಲೀಸ್ ಸ್ಟೇಷನ್‌ಗಳಲ್ಲಿ ಬಂದವರೇ ಬರುತ್ತಿರುತ್ತಾರೆ. ದಯಮಾಡಿ, ಬೇರೆ ಸಾರ್ವಜನಿಕರು ಅಂದರೆ, ಸಾರ್ವಜನಿಕ ಸಂಘ–ಸಂಸ್ಥೆಗಳು ಅಥವಾ ಬೇರೆ ಬೇರೆಯವರು involve ಆಗುವುದಕ್ಕೆ ಮಾನ್ಯ ಸಚಿವರು ಸೂಚನೆ ಕೊಡಬೇಕು. ಇದರ ಜೊತೆಗೆ, ಪೋಲೀಸರು ಯಾವ ಸಭೆಗಳನ್ನು ಮಾಡುತ್ತಾರೆ, ಅದರ ಬಗ್ಗೆ ಮಾನ್ಯ ಸಚಿವರಿಗೆ ಯಾವಾಗಲೂ ಮಾಹಿತಿ ಇರಬೇಕೆಂದು ನಾನು ಬಯಸುತ್ತೇನೆ.

(...ಮುಂದುವರೆದಿದೆ)

(269) 04.03.2021 11.40 ವೈಎಲ್–ಎಂಡಿ (ಸಭಾಪತಿಯವರ ಉಪಸ್ಥಿತಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು ಸಾರ್ವಜನಿಕರ ಸಂಪರ್ಕ ಇರಬೇಕೆನ್ನುವ ಕಾರಣದಿಂದಾಗಿ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಂಪರ್ಕ ಸೇವೆಯನ್ನು ಮಾಡುತ್ತಿದ್ದೇವೆ. ಕಳೆದ ಒಂದು ವರ್ಷದಲ್ಲಿ ಬೆಂಗಳೂರು ನಗರದ ಪೊಲೀಸ್ ಠಾಣೆಗಳಲ್ಲಿ ಸುಮಾರು 978 ಸಭೆಗಳನ್ನು ನಡೆಸಿದ್ದು, ಬಹುತೇಕವಾಗಿ ಸಾವಿರ ಸಭೆಗಳನ್ನು ವಿವಿಧ ಪೊಲೀಸ್

ಠಾಣೆಗಳಲ್ಲಿ ಮಾಡುತ್ತೇವೆ. ಮಾನ್ಯ ಸದಸ್ಯರ ಕಳಕಳಿ ಏನಿದೆ, ಅದಕ್ಕೆ ಹೆಚ್ಚಿನ ಸಮಯ ನೀಡಬೇಕು ಮತ್ತು ಪ್ರಚಾರವನ್ನು ಮಾಡಬೇಕು, ಎಲ್ಲರನ್ನೂ ಒಳಗೊಂಡಂತೆ ಹೊಸಬರು ಸಹ ಭಾಗವಹಿಸಬೇಕೆಂದು ಏನು ಹೇಳಿದ್ದಾರೆ, ಆ ಮಾತನ್ನು ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ. ಆಧುನಿಕವಾಗಿ ಏನಿದೆ, ಅದನ್ನು ಅಳವಡಿಸಿಕೊಂಡು ಫೇಸ್‌ಬುಕ್ ಮೂಲಕ ಸಹ ಪ್ರಚಾರ ಮಾಡುತ್ತಿದ್ದೇವೆ. ಪೊಲೀಸ್ ಕಮೀಷನರ್‌ರವರ ಕಾರ್ಯಬಾಹುಳ್ಯ ಬಹಳ ಇರುವುದರಿಂದ ಒಂದು ದಿವಸ ಮಾಡಿದ್ದಾರೆ. ಖಂಡಿತವಾಗಿ ಅದನ್ನು ಹೆಚ್ಚಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಆರ್.ಧರ್ಮಸೇನ:-** ಪೊಲೀಸ್ ಠಾಣೆಗಳು ಹಿಂದಿನಂತೆ ಇಲ್ಲ. ಇತ್ತೀಚೆಗೆ ಬಹಳ ಆಧುನೀಕರಣವಾಗಿದ್ದು, ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಆದರೆ, ಪೊಲೀಸ್ ಠಾಣೆಗೆ ದೂರು ನೀಡಲು ಬರುವಂಥವರು ಇವತ್ತಿಗೂ ಸಹ ಭಯದ ವಾತಾವರಣದಲ್ಲಿಯೇ ಬರುತ್ತಿದ್ದಾರೆ. ಹಾಗಾಗಿ ಭಯದ ವಾತಾವರಣವನ್ನು ತೆಗೆಯಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ತಾವು ಹೇಳಿದ ಹಾಗೆ, ಪೊಲೀಸ್ ಠಾಣೆಗೆ ಬರುವಂಥ ಸಾರ್ವಜನಿಕರಲ್ಲಿ ಯಾವುದೇ ರೀತಿಯ ಆತಂಕ ಇರಬಾರದೆಂದು ಪ್ರಾರಂಭದಲ್ಲಿ ಸಹಾಯವಾಣಿ ಕೇಂದ್ರವನ್ನು ಅಳವಡಿಸಿದ್ದೇವೆ. ದೂರುದಾರರು ಪೊಲೀಸ್ ಠಾಣೆಗೆ ಬಂದರೆ, ಅವರ ಹತ್ತಿರ ಮಾತನಾಡಿ, ಅವರಿಗೆ ಮಾರ್ಗದರ್ಶನ ನೀಡಲು ಪೊಲೀಸ್ ಠಾಣೆಯಲ್ಲಿ ಒಬ್ಬ ವ್ಯಕ್ತಿ ಇರುವಂತೆ ಮಾಡಲಾಗಿದೆ. ಅದೇ ರೀತಿ ಹೆಣ್ಣು ಮಕ್ಕಳಿಗೆ ಮಹಿಳಾ ಸಹಾಯವಾಣಿ ಕೇಂದ್ರವನ್ನು ಪ್ರತ್ಯೇಕವಾಗಿ ಮಾಡಲಾಗಿದೆ. ಅದಲ್ಲದೇ ಬರುವಂಥ ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ treatment ಮಾಡಬೇಕೆಂದು ಸುತ್ತೋಲೆ/ಸೂಚನೆಯನ್ನು ನೀಡಿದ್ದೇವೆ. ಜನಸ್ನೇಹಿ ಪೊಲೀಸ್ ಆಗಬೇಕೆಂಬುದು ನಮ್ಮ ಉದ್ದೇಶ. ಅದಕ್ಕಾಗಿ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಅವಶ್ಯಕ ಇರುವ ಇನ್ನಷ್ಟು ಸುಧಾರಣೆಗಳನ್ನು ಮಾಡಲು ಸಿದ್ದನಾಗಿದ್ದೇನೆ. ಸಾರ್ವಜನಿಕರು ಮತ್ತು ಪೊಲೀಸ್‌ನವರ ಮಧ್ಯೆ ಉತ್ತಮ ರೀತಿಯಲ್ಲಿ ಸಂಬಂಧ ಇದ್ದರೆ ಮಾತ್ರ ನ್ಯಾಯ ನೀಡಲು ಸಾಧ್ಯವೆಂದು ನಂಬಿಕೆಯನ್ನಿಟ್ಟು ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಈ ಸಹಾಯವಾಣಿ ಕೇಂದ್ರಗಳಲ್ಲಿ computerization ಮಾಡಲು ಈ ವರ್ಷ ಹಣವನ್ನು ಸಹ ಒದಗಿಸಿದ್ದೇವೆ. ಸಾರ್ವಜನಿಕರಿಗೆ ಮಾಹಿತಿಯ ಅವಶ್ಯಕತೆ ಇದ್ದರೆ, ಸಹಾಯವಾಣಿ ಕೇಂದ್ರದಲ್ಲಿಯೇ ನೀಡುವಂಥ ವ್ಯವಸ್ಥೆಯನ್ನು ಖಂಡಿತವಾಗಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 524**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್‌ರವರು ಗೈರು ಹಾಜರಾಗಿದ್ದರು)**

**ಸಭಾಪತಿಯವರು:-** ಮಾನ್ಯ ಕಾಂತರಾಜುರವರ ಪ್ರಶ್ನೆ ಸಂಖ್ಯೆ 684 ಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಮಯಾವಕಾಶ ಕೋರಿರುತ್ತಾರೆ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮುಂದಿನ ವಾರದಲ್ಲಿಯೇ ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲಿ. ಏಕೆಂದರೆ, ನಾನು ಈ ಪ್ರಶ್ನೆಯನ್ನು 3-4 ಸಲ ಸಲ್ಲಿಸಿದ್ದರೂ, ಉತ್ತರ ಒದಗಿಸುತ್ತಿಲ್ಲ. ಒಂದು ತಿಂಗಳು ಅಧಿವೇಶನ ನಡೆಯುವುದರಿಂದ ಮುಂದಿನ ವಾರದಲ್ಲಾದರೂ ಉತ್ತರ ಒದಗಿಸಿಕೊಡಿ.

**ಸಭಾಪತಿಯವರು:-** ಮುಖ್ಯಮಂತ್ರಿಗಳು ಸಮಯಾವಕಾಶ ಕೋರಿರುತ್ತಾರೆ. ಎರಡು ವಾರದ ನಂತರ ಉತ್ತರ ಒದಗಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 674**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನ್ನ ಪ್ರಶ್ನೆಯೇನೆಂದರೆ, ದಿನಾಂಕ: 01.04.2006ರ ನಂತರ ನೇಮಕವಾಗಿರುವ ನೌಕರರ ನೂತನ ಪಿಂಚಣಿ ಯೋಜನೆಯನ್ನು ರದ್ದತಿಗೊಳಿಸಿ, ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದೆನು. ಅದಕ್ಕೆ ಬಹಳ ಸ್ಪಷ್ಟವಾಗಿ 'ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿಲ್ಲ' ಎಂದು ಉತ್ತರವನ್ನು ನೀಡಿದ್ದಾರೆ. ಇದು ಬಹಳ ಗಂಭೀರವಾಗಿರುವ ವಿಚಾರವಾಗಿದ್ದು, ಹಳೆಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುವ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗಿದೆಯೇ, ಇಲ್ಲವೇ ಎಂಬುದನ್ನು ನಾನು ಇಲ್ಲಿ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ, ಲೋಕಸಭೆಯಲ್ಲಿ ಚರ್ಚೆಯಾಗಿ ಕೊನೆಗೆ ಆಯಾಯ respective ವಿಧಾನಸಭೆಗಳಲ್ಲಿ ಚರ್ಚೆ ಮಾಡಬೇಕೆಂದು ಕಳುಹಿಸಿಕೊಟ್ಟರು. ತದನಂತರ ನಮ್ಮ ವಿಧಾನಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆಯೋ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ಕೇಳುತ್ತಿದ್ದೇನೆ. ಸರ್ಕಾರ ಒದಗಿಸಿರುವ ಉತ್ತರದಲ್ಲಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಆಇ 107 ಪಿಇಎನ್ 2018, ದಿನಾಂಕ: 11.12.2018 ರನ್ವಯ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಲಾಗಿದೆ. ಇದುವರೆವಿಗೂ ಯಾವ್ಯಾವ ಅಧಿಕಾರಿ ಆ ಸಮಿತಿಯಲ್ಲಿದ್ದಾರೆ ಎಂಬುದು ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಅದಕ್ಕೆ ಸರ್ಕಾರ ಏನು ಮಾಡಬೇಕೆಂದನ್ನು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹಳೆಯ ಪಿಂಚಣಿ ಯೋಜನೆಯನ್ನು ವಾಪಸ್ಸು ತರಬೇಕೆಂದು ಕೇಳುತ್ತಿದ್ದೇನೆ. ಆದರೆ, ಸರ್ಕಾರವು ಪರಿಶೀಲನೆಯಲ್ಲಿಲ್ಲ ಎಂದು ಉತ್ತರ ನೀಡಿದ್ದು, ಅದರ ಬಗ್ಗೆ ದಯವಿಟ್ಟು ಚರ್ಚೆಯಾಗಬೇಕಾಗುತ್ತದೆ. ಹಾಗಾಗಿ ನಾನು ಮಾತನಾಡಬೇಕಾಗಿದ್ದು, ನನ್ನ ಮಾತು ಇನ್ನೂ ಮುಗಿದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆ ಬಹಳ ಗಂಭೀರವಾದ ಪ್ರಶ್ನೆಯಾಗಿದ್ದು, ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ನೌಕರರ ಒತ್ತಡ ಇದ್ದು, ಕಾಲಕಾಲಕ್ಕೆ ಅವರ ಬಗ್ಗೆ ಸಹಾನುಭೂತಿಯನ್ನು ಎಲ್ಲಾ ಸರ್ಕಾರವು ಹೊಂದಿತ್ತು. ಆದರೆ, ಇವತ್ತಿನ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ನಮ್ಮ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. ಕೆಲವು ನ್ಯೂನತೆಗಳಿದ್ದು, ಅದಕ್ಕಾಗಿಯೇ ಸಮಿತಿಯನ್ನು ರಚನೆ ಮಾಡಲಾಗಿತ್ತು. ಆ ಸಮಿತಿಯಿಂದ ಪೂರ್ಣ ವರದಿ ಬಂದಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದ್ದು, ಸಮಿತಿಯವರು ಪೂರ್ಣ ವರದಿ ನೀಡಿರುವುದಿಲ್ಲ. ಎನ್‌ಪಿಎಸ್ ನಲ್ಲಿ ಕೆಲವು ಸೌಲಭ್ಯಗಳು ಹೆಚ್ಚಾಗಬೇಕು. ಈಗ ಮರಣ ನಿಧಿಯನ್ನು ರೂ.10.00 ಲಕ್ಷಗಳಿಗೆ ಮಾಡಲಾಗಿದ್ದು, ಅದನ್ನು ರೂ.20.00 ಲಕ್ಷಕ್ಕೆ ಹೆಚ್ಚಿಸಬೇಕೆಂಬ ಕೆಲವು ಚರ್ಚೆಗಳು ಇರುವುದು ಸತ್ಯ. ಏನೇ ಆದರೂ ಸಮಿತಿಯು ವರದಿ ನೀಡುವ ಅವಶ್ಯಕತೆ ಇದೆ. ಆದಷ್ಟು ಬೇಗ ಸಮಿತಿಯವರು ವರದಿ ನೀಡಬೇಕೆಂದು ನಾನೂ ಸಹ ಹೇಳುತ್ತೇನೆ. ಜೊತೆಗೆ ಎನ್‌ಪಿಎಸ್ ನಲ್ಲಿ ಬದಲಾವಣೆ ಆಗಬೇಕೆಂಬ ನೌಕರರ ಬೇಡಿಕೆ ಏನಿದೆ, ಅದನ್ನು ಸಹ ಗಮನದಲ್ಲಿಟ್ಟುಕೊಂಡು, ಕೆಲಸವನ್ನು ಮಾಡಿ ಕೊಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಲಕ್ಷಾಂತರ ಜನ ಎನ್‌ಪಿಎಸ್ ನೌಕರರು ವಿಧಾನಸೌಧದಲ್ಲಿ ಬೃಹತ್ ಪ್ರತಿಭಟನೆ ಮಾಡಿದಂತಹ ಸಂದರ್ಭದಲ್ಲಿ ಹಾಲಿ ಮುಖ್ಯಮಂತ್ರಿಗಳು, ಅಂದಿನ ಮುಖ್ಯಮಂತ್ರಿಗಳು ಇಬ್ಬರೂ ಸಹ ಆ ಸಮಿತಿಯಲ್ಲಿ ಪಾಲ್ಗೊಂಡಿದ್ದಾರೆ. ಹಾಲಿ ಮುಖ್ಯಮಂತ್ರಿಗಳು ಆ ಸಮಿತಿಯಲ್ಲಿ ಪಾಲ್ಗೊಂಡು ಖಂಡಿತವಾಗಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಎನ್‌ಪಿಎಸ್ ಅನ್ನು ರದ್ದುಗೊಳಿಸಿ ಹಳೆಯ ಮಾದರಿಯ ಪಿಂಚಣಿಯನ್ನು ಜಾರಿಗೆ ತರುತ್ತೇವೆ ಎಂದು ವಾಗ್ದಾನ ನೀಡಿರುತ್ತಾರೆ. ಹಾಗಾಗಿ ಈ ಸದನದಲ್ಲಿ ಮುಖ್ಯಮಂತ್ರಿಗಳು ಉತ್ತರ ನೀಡಬೇಕಾಗಿತ್ತು, ಆದರೆ ಅವರ ಪರವಾಗಿ ಸಭಾನಾಯಕರು ಉತ್ತರ ನೀಡುತ್ತಿದ್ದಾರೆ, ತೊಂದರೆ ಇಲ್ಲ. 6ನೇ ವೇತನ ಆಯೋಗದಲ್ಲಿ 'ಮರಣ ಹೊಂದಿರುವ ಸರ್ಕಾರಿ ನೌಕರರಿಗೆ' ಹಳೆಯ ಪಿಂಚಣಿಯನ್ನು ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇವತ್ತು ಎನ್‌ಪಿಎಸ್ ನೌಕರರ ಪರಿಸ್ಥಿತಿ ಏನಾಗಿದೆ ಎಂದರೆ, ಈಗಾಗಲೇ ನಿವೃತ್ತಿ ಹೊಂದಿ ಸಾವಿರಾರು ಜನ ಮನೆಗೆ ಹೋಗಿದ್ದು, ಅವರ ಕುಟುಂಬಕ್ಕೆ ರಕ್ಷಣೆ ಇಲ್ಲದಂತಾಗಿದೆ. ಎಂ.ಎಲ್.ಎ., ಎಂ.ಎಲ್.ಸಿ., ಲೋಕಸಭಾ ಸದಸ್ಯರು, ಈ ದೇಶದ Apex Court ನ ನ್ಯಾಯಾಧೀಶರು ಹಳೆಯ ಪಿಂಚಣಿ ಸೌಲಭ್ಯವನ್ನು ಪಡೆಯುತ್ತಿದ್ದು, ಅವರಿಗೆಲ್ಲಾ ಏತಕ್ಕೆ ಎನ್.ಪಿ.ಎಸ್. ಜಾರಿ ಮಾಡಿಲ್ಲ. ಇವತ್ತು ನಿವೃತ್ತಿ ಹೊಂದಿ ಬರಿ ಕೈಯಲ್ಲಿ ಸಾವಿರಾರು ಜನ ನೌಕರರು ಮನೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿದ್ದಾರೆ. ಅವರ ಕುಟುಂಬದವರು ಬೀದಿಗೆ ಬಂದಿದ್ದಾರೆ. ಹಾಗಾದರೆ, ಅವರ ಬಗ್ಗೆ ಯೋಚನೆಯೇ ಇಲ್ಲವೇ? ಅವರ ಕುಟುಂಬದ ರಕ್ಷಣೆ ಏನಾಗಿದೆ?

**ಸಭಾಪತಿಯವರು:-** ಮಾನ್ಯ ಸದಸ್ಯರೆ ಅದಕ್ಕೆ ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಎನ್‌ಪಿಎಸ್ ನಲ್ಲಿರುವ ನೌಕರರಿಗೆ ಶೇ.100ಕ್ಕೆ 100 ರಷ್ಟು ರಕ್ಷಣೆ ಇದೆ ಎಂಬುದನ್ನು ಸರ್ಕಾರ ಮಾಡಬೇಕು. ಏಕೆಂದರೆ, 60 ವರ್ಷದ ನಂತರ ನಿವೃತ್ತಿ ಹೊಂದಿದ ಮೇಲೆ ದುಡಿಯುವ ವಯಸ್ಸನ್ನು ಸಹ ಕಳೆದುಕೊಂಡಿರುತ್ತಾರೆ. ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೂತನ ಪಿಂಚಣಿ ಯೋಜನೆಯಿಂದ ನೌಕರರಿಗೆ ತೊಂದರೆಯಾಗುತ್ತಿದ್ದು, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂಬುದು ವಾದವಾಗಿದೆ. ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವುದರ ಬಗ್ಗೆ ಇರುವ ಸಮಸ್ಯೆ ಏನೆಂಬುದನ್ನು ಸರ್ಕಾರ ತಿಳಿಸಿದ್ದೆ. ಈಗಾಗಲೇ ಹಾಲಿ ಮುಖ್ಯಮಂತ್ರಿಗಳು ಸಮಿತಿಯಲ್ಲಿ ತಿಳಿಸಿರುವುದನ್ನು ಉಲ್ಲೇಖ ಮಾಡಿದ್ದಾರೆ. ಹಾಗೆಯೇ ಹಿಂದಿನ ಮುಖ್ಯಮಂತ್ರಿಗಳು ಸಹ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಸರಿಪಡಿಸುತ್ತೇವೆ ಎಂದು ತಿಳಿಸಿರುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಆರ್ಥಿಕ ಸ್ಥಿತಿಯಿಂದಾಗಿ ಯಾವುದೇ ಸರ್ಕಾರಕ್ಕೂ ಅದನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗಿಲ್ಲ. ಏನೇ ಆದರೂ ಸಹ ಹಳೆಯ ಪಿಂಚಣಿ ಯೋಜನೆಯಲ್ಲಿ ಕೆಲವು ಮಾರ್ಪಾಡು ಮಾಡಬೇಕೆಂಬ ಮಾನ್ಯ ಸದಸ್ಯರ ಭಾವನೆಯು ಸದನದ ಭಾವನೆಯಾಗಿದೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟಂತಹ ಹಿರಿಯ ಅಧಿಕಾರಿಗಳಿಂದ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಆ ಸಮಿತಿಯ ವರದಿಯನ್ನು ನಿರೀಕ್ಷೆ ಮಾಡಿ, ಸರ್ಕಾರದಿಂದ ಏನೇನು ಸಹಾಯ ಮಾಡಲು ಸಾಧ್ಯ ಇದೆ, ಅದೆಲ್ಲವನ್ನೂ ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸ್ಪಷ್ಟವಾದ ಉತ್ತರವನ್ನು ನೀಡಲಿ. ಇದು ಬಹಳ ಗಂಭೀರವಾಗಿದೆ. ನಾನು ಸಹ ಸದನದ ಸಮಯವನ್ನು ವ್ಯರ್ಥ ಮಾಡುವುದಕ್ಕೆ ತಯಾರಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೆ ನಾನು ಹೇಳುವುದನ್ನು ಸ್ವಲ್ಪ ಕೇಳಿ. ಗಮನ ಸೆಳೆಯುವ ಸೂಚನೆಯಲ್ಲಿ ಸಹ ಇದೇ ವಿಷಯವನ್ನು ನಮೂದಿಸಲಾಗಿದ್ದು, ಸರ್ಕಾರ ಬರವಣಿಗೆಯ ಮೂಲಕ ಉತ್ತರ ಒದಗಿಸುತ್ತಾರೆ, ಆಗ ತಮಗೆ ಮಾತನಾಡಲು ಅನುಮತಿ ನೀಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಎಷ್ಟು ದಿನಗಳಿಗೊಮ್ಮೆ ಸಮಿತಿ ಸೇರುತ್ತಾರೆ ಮತ್ತು ಯಾವ್ಯಾವ ಅಧಿಕಾರಿಗಳು ಸಮಿತಿಯಲ್ಲಿ ಭಾಗಿಯಾಗುತ್ತಾರೆ? ಆ ಸಮಿತಿಯಲ್ಲಿ ಚರ್ಚೆ ಮಾಡಿ, ಎಷ್ಟು ದಿವಸದಲ್ಲಿ ತಿಳಿಸುತ್ತಾರೆ ಎಂಬುದನ್ನು ದಯವಿಟ್ಟು ಹೇಳಲಿ.

**ಸಭಾಪತಿಯವರು:–** ತಾವು ಈ ರೀತಿ ಕೇಳಿದರೆ, ಸಭಾನಾಯಕರು ಏನೆಂದು ಉತ್ತರ ನೀಡಬೇಕು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಮಿತಿಯನ್ನು ರಚನೆ ಮಾಡಲಾಗಿದ್ದು, ಸಮಿತಿಯಿಂದ ಆದಷ್ಟು ಬೇಗ ವರದಿಯನ್ನು ತರಿಸಿ, ಮಾನ್ಯ ಸದಸ್ಯರು ಹೇಳಿರುವುದನ್ನು ಅರ್ಥ ಮಾಡಿಕೊಂಡು ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ.

(ಮುಂದು...)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(270)04.03.2021/11.50/ಎಸ್‌ಕೆ-ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ 779**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಎಂ. ಫಾರೂಖ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಏನಿದೆ ಎಂದರೆ, ಕಡಿಮೆ ವಿದ್ಯುತ್ ಬೇಡಿಕೆ ಅವಧಿಯಲ್ಲಿ ಉತ್ಪಾದನೆಯಾದ ವಿದ್ಯುತ್ ಅನ್ನು ಗರಿಷ್ಠ ವಿದ್ಯುತ್ ಬೇಡಿಕೆ ಅವಧಿಯಲ್ಲಿಯೂ ಕೂಡ ಬಳಕೆ ಮಾಡಲು ಅವಕಾಶವಿದ್ದುದರಿಂದ ಮತ್ತು ಈ ರೀತಿಯ ಸೌಲಭ್ಯದಿಂದ ವಿದ್ಯುತ್ ಸರಬರಾಜ ಕಂಪನಿಗಳ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿದ್ದುದರಿಂದ ಈ ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆಯಲಾಗಿದೆ.

ನಾನು ಎಲ್ಲಾ renewable energy ಬಗ್ಗೆ ಹೇಳುತ್ತಿಲ್ಲ. Renewable energy ನಲ್ಲಿ ಬಹಳಷ್ಟು ಇದೆ. ಸೋಲಾರ್, mini hydel, cogeneration, biomass ಇದೆ. ನಾನು ಮುಖ್ಯವಾಗಿ ಗಾಳಿ ಯಂತ್ರದ ಮಾತನಾಡುತ್ತೇನೆ. ಈ ಗಾಳಿ ಯಂತ್ರದಿಂದ ಉತ್ಪಾದಿಸುವ ವಿದ್ಯುತ್‌ನ್ನು ಇದೆಯೆಲ್ಲಾ, ಅದನ್ನು ಮೇ ರಿಂದ ಸೆಪ್ಟೆಂಬರ್ ಸೀಸನ್‌ನಲ್ಲಿ ವಿದ್ಯುತ್‌ನ್ನು ಉತ್ಪಾದಿಸುತ್ತಾರೆ. ಈಗಿನ latest technology machine ನಲ್ಲಿ ಒಂದು ಗಂಟೆಗೆ ಒಂದು ಮೆಗಾವ್ಯಾಟ್ ಅಂದರೆ ಸುಮಾರು 1,000 ಯೂನಿಟ್‌ಗಳು ವಿದ್ಯುತ್ ಉತ್ಪಾದನೆಯಾಗುತ್ತದೆ. ಅಲ್ಲಿರುವ ಪ್ರಶ್ನೆ ಏನೆಂದರೆ, ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ ಶೇಕಡ 60 ರಿಂದ 72 ರವರೆಗೂ ವಿದ್ಯುತ್ ಉತ್ಪಾದನೆಯಾದಾಗ ನಾವು ಬ್ಯಾಂಕಿಂಗ್ ತೆಗೆದ ತಕ್ಷಣ ಸೆಪ್ಟೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೂ lull period ಇದೆ. ಆಗ ವಿದ್ಯುತ್‌ನ್ನು ಏನೇನು ಉತ್ಪಾದನೆ ಮಾಡಿದ್ದೇವೋ, ಉದಾಹರಣೆಗೆ ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಇದ್ದರು. ಅವರ ಸಿಮೆಂಟ್ ಕಾರ್ಖಾನೆಗೆ ನಾನು ಒಂದು ಒಡಂಬಡಿಕೆ ಮಾಡಿರುತ್ತೇನೆ. ಅವರಿಗೆ ಕನಿಷ್ಠ ಒಂದು ವರ್ಷಕ್ಕೆ 20 ಲಕ್ಷ ಯೂನಿಟ್ ಕೊಡಬೇಕೆಂಬುದು ಇದೆ. ಅದರಲ್ಲಿ 20 ಲಕ್ಷ ಯೂನಿಟ್ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಸರಾಸರಿಯಾಗಿ ಸರಬರಾಜು ಮಾಡಬೇಕು. ಗಾಳಿ ಯಂತ್ರದಲ್ಲಿ ವಿದ್ಯುತ್ ಉತ್ಪಾದನೆ highest power generation ಮೇ ತಿಂಗಳವರೆಗೂ ಆಗುತ್ತದೆ. ನಂತರ ಸೆಪ್ಟೆಂಬರ್ ತಿಂಗಳಿನಲ್ಲಿ ಅದು ಮುಗಿದು ಬಿಡುತ್ತದೆ. ಬಾಕಿ ಡಿಸೆಂಬರ್ ತಿಂಗಳು ಇರುವಾಗ, ನಾವು ಅವರಿಗೆ 10 ಲಕ್ಷ ಯೂನಿಟ್ ವಿದ್ಯುತ್‌ಗೆ ಕಮಿಟ್ ಮಾಡಿದರೆ, ಈ ವಿಂಡ್‌ನಲ್ಲಿ ಬಂದಿದ್ದು ಆಗುತ್ತದೆ. ಬಾಕಿ time

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ we have to give free power to the grid. 2017-18 ರಲ್ಲಿ ನಮಗೆ ಬಹತೇಕ 857 ಮೆಗಾವ್ಯಾಟ್ ಆಗಿತ್ತು. ಆದರೆ 2018-19ರಲ್ಲಿ ಈ policy ತೆಗೆದ ಮೇಲೆ, ಕರ್ನಾಟಕದಲ್ಲಿ it has almost come down to 10 percent of the installation. ಕರ್ನಾಟಕ ರಾಜ್ಯದಲ್ಲಿ wind energy ಗೆ 4,900.84 ಮೆಗಾವ್ಯಾಟ್‌ನ ಸಾಮರ್ಥ್ಯವನ್ನು ಅಳವಡಿಸಲಾಗಿದೆ. And it is much more eco-friendly. ಈಗಿನ ಜಾಗತಿಕ ಪರಿಸರ ವಿಷಯದಲ್ಲಿ ಕೂಡ ಕರ್ನಾಟಕ ofcourse, ಅವರು ಒಂದು ಕಡೆ ಹೇಳಿರುವಂತೆ, RPO (Renewable Purchase Obligation) ಮುಗಿದಿದೆ. RPO ಮುಗಿದಿರುವುದಕೋಸ್ಕರ ರಾಜ್ಯದಲ್ಲಿ ಅಷ್ಟೊಂದು ಬೆಳವಣಿಗೆಯಿಲ್ಲ. ಆರ್ಥಿಕತೆಯ ಪರಿಣಾಮವೆಂದರೆ, ಈ ಹಿಂದೆ 4.70 ರೂಪಾಯಿಗಳಿಗೆ PPA (Power Purchase Agreement) ಇತ್ತು. ಇಪ್ಪತ್ತು ವರ್ಷದವರೆಗೆ PPA ಕೊಡುತ್ತಿದ್ದರು. ಆ PPA ಯನ್ನು ಕಿತ್ತು ಹಾಕಿಕೊಂಡರು. ಆ PPA ಆದಮೇಲೆ then they wanted to bring down to Rs.3.65 ಮಾಡಿದರು. ಸ್ವಲ್ಪ ದಿನಗಳ caring ಆಯಿತು. ಅದನ್ನು ತೆಗೆದು ಹಾಕಿದರು. ಮತ್ತೆ ರೂ. 3.25 ಪೈಸೆಯಿಂದ ರೂ. 3.30 ಪೈಸೆಗಳವರೆಗೆ level ಗೆ ಬರೋಣವೆಂಬುದು ಇತ್ತು. ಈಗ ಏನಾಗಿದೆ ಎಂದರೆ ಸಣ್ಣ ಉದ್ದಿಮೆದಾರರ ಒಂದು ಸಣ್ಣ Carton Box Industry ಯಿದೆ. ಅವರಿಗೇನಾದರೂ 2 ಮತ್ತು 4 ಮೆಗಾವ್ಯಾಟ್ wind power ಬೇಕಾದರೆ, ಅವರಿಗೆ capital investment ಮಾಡುವುದಕ್ಕೂ ಕೂಡ ಕಷ್ಟವಾಗಿದೆ. All the small investors don't have any opportunity to invest in this sector. ಒಂದು ಮುಖ್ಯವಾಗಿ atleast particularly for the wind industry, ಇಡೀ ಒಂದು ವರ್ಷದಲ್ಲಿ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ power generation ಎಷ್ಟು ಬರುತ್ತದೆ? ಆ ಅವಧಿಯಲ್ಲಿ ಬರುವ ಕಾರಣ ಅದನ್ನು ತಾವು it should be restricted to atleast to wind energy project, ಈ wind energy project ಎಂದರೆ, ನಾವು ...

**ಸಭಾಪತಿಯವರು:-** ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಬಿ.ಎಂ. ಫಾರೂಖ್:-** ಮಾನ್ಯ ಸಭಾಪತಿಯವರೇ, wind energy ಗೆ ಮುಖ್ಯವಾಗಿ ಬ್ಯಾಂಕಿಂಗ್ ಸೌಲಭ್ಯವನ್ನು ಕೊಡಬೇಕು. ಬೆಸ್ಕಾಂನವರು ಪ್ರತಿ ಯೂನಿಟ್‌ಗೆ ರೂ. 9 ಚಿಲ್ಲರೆ ಚಾರ್ಜ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಾರೆ. ನಾವು ಒಂದು ಯೂನಿಟ್‌ಗೆ power ಇವತ್ತು ರೂ. 3.30 ಪೈಸೆಯನ್ನು ಕೊಡುವುದಕ್ಕೆ ತಯಾರಿದ್ದೇವೆ. I mean economically impact ಆಗುತ್ತದೆಂದು ಆ ರೀತಿ ಅವಕಾಶ ಕೊಟ್ಟುಬಿಡಿ. ಇದರಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಮುಖ್ಯವಾಗಿ ಉದ್ಯೋಗವಾಗುತ್ತದೆ. Wind energy is the most eco-friendly. ಎಂದರೆ, ಅರ್ಧ ಎಕರೆಯಲ್ಲಿ, we can produce 4 mw power.

**ಸಭಾಪತಿಯವರು:–** ತಾವು ಪ್ರಶ್ನೆಯನ್ನು ಕೇಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಫಾರೂಖ್‌ರವರು ಬಹಳ ಅರ್ಥಪೂರ್ಣವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಮಾನ್ಯ ಸದಸ್ಯರ ಗಮನದಲ್ಲಿ ಇರಲಿ. ದಿನಾಂಕ 31.01.2021 ರ ಅಂತ್ಯಕ್ಕೆ ಅಳವಡಿಸಲಾದಂಥ ಕೆಲವು ಸಾಮರ್ಥ್ಯಗಳ ಮಾಹಿತಿಯನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಈ ಸೌರ, ಪವನ, ಕಿರುಜಲ, ಜೈವಿಕ, ಸಹವಿದ್ಯುತ್ ಮತ್ತು ಘನತ್ಯಾಜ್ಯಗಳಿಂದ ಮಾಡಿದ ಒಟ್ಟು ವಿದ್ಯುತ್‌ಗಳ ಉತ್ಪಾದನೆ ಮತ್ತು ನಮ್ಮ ರಾಜ್ಯಕ್ಕೆ ಇರುವಂತಹ ಬೇಡಿಕೆಗಳನ್ನು ನಮ್ಮ ಗಮನದಲ್ಲಿಟ್ಟುಕೊಂಡರೆ, ನಮಗೆ ಈಗ ಸುಮಾರು 13 ಸಾವಿರ ಮೆಗಾವ್ಯಾಟ್‌ನ ಸಾಮರ್ಥ್ಯ ನಮ್ಮ ರಾಜ್ಯಕ್ಕೆ ಅಗತ್ಯವಿದೆ. ಈ ಅಸಾಂಪ್ರದಾಯಿಕ ಮೂಲಗಳಿಂದ ಸೇರಿದಂತೆ ಒಟ್ಟು ವಿದ್ಯುತ್‌ನ ಉತ್ಪಾದನೆ ಸುಮಾರು 15,052 ಮೆಗಾವ್ಯಾಟ್ ಇದೆ. ಆ ಕಾರಣಕ್ಕೋಸ್ಕರ ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆದು ಹಾಕುವಂತಹ ಕ್ರಮವನ್ನು ಮಾಡಲಾಯಿತು. ಈ ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆದು ಹಾಕದಿದ್ದರೆ, ಸರ್ಕಾರಕ್ಕೆ ಬೇರೆ ಬೇರೆ ಕಾರಣಗಳಿಂದಾಗಿ ಆರ್ಥಿಕ ನಷ್ಟ ಬರುತ್ತದೆ ಎನ್ನುವಂತಹ ವಿಚಾರವನ್ನು ಇಟ್ಟುಕೊಂಡು ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆದುಹಾಕಲಾಗಿದೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ನಮ್ಮಲ್ಲಿ ಈಗಾಗಲೇ ವಿದ್ಯುತ್ ಪೂರೈಕೆ ಮತ್ತು ಶೇಖರಣೆ ಸಾಕಷ್ಟು ಇರುವುದರಿಂದ ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆದು ಹಾಕುವ ಅನಿವಾರ್ಯತೆ ನಮ್ಮ ಸರ್ಕಾರಕ್ಕೆ ಒದಗಿ ಬಂದಿದೆ. ಆ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ಸೌಲಭ್ಯವನ್ನು ತೆಗೆದು ಹಾಕಲಾಗಿದೆ. ಅವರೇನಾದರೂ ಮೂರನೇ ವ್ಯಕ್ತಿಗೆ ಮಾರಾಟ ಮಾಡುವಂತಹ ಪ್ರಸ್ತಾಪವನ್ನು ಕೊಟ್ಟರೆ, ಅದರ ಪರಿಶೀಲನೆಯನ್ನು ಮಾಡುತ್ತೇನೆ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಮೂರನೇ ವ್ಯಕ್ತಿಗೆ ಮಾರಾಟ ಮಾಡಬೇಕೆಂದರೆ, ಈ ಬ್ಯಾಂಕಿಂಗ್ ಸೌಲಭ್ಯ ತುಂಬಾ ಮುಖ್ಯವಾದದ್ದು. ಮೂರನೇ ವ್ಯಕ್ತಿಗೆ ನಾವು ಒಂದು ಯೂನಿಟ್‌ಗೆ ರೂ. 9.25, ರೂ. 9.55 ಪೈಸೆಯನ್ನು ಕೊಡುವುದಿಲ್ಲ. ಎಲ್ಲಾ ESCOM's ನವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಾಸರಿ ರೂ. 8.50 ಪೈಸೆಯಿಂದ ರೂ.9.50 ಗೆ ಚಾರ್ಜ್ ಮಾಡುತ್ತಾರೆ. ಆದರೆ ಮೆಸ್ಕಾಂನವರು ರೂ.9 ಮಾಡುತ್ತಾರೆ. ಬೆಸ್ಕಾಂನವರು ರೂ.9.50 ಪೈಸೆ ಮಾಡುತ್ತಾರೆ. Industrial tariff is almost Rs. 7. ಅದೇ ರೀತಿ ಗ್ರಾಹಕರಿಗೂ ಈಗ ರೂ. 5.60 ಪೈಸೆ ಚಾರ್ಜ್ ಮಾಡುತ್ತಿದ್ದಾರೆ. We are giving the power at Rs. 3.30. ತಮ್ಮಲ್ಲಿ ಕೂಡ ಒಬ್ಬ ದಕ್ಷ ಅಧಿಕಾರಿ ಕೂಡ ಇದ್ದಾರೆ. ಈ ಹಿಂದೆ ಕೇಂದ್ರ ಸರ್ಕಾರ Energy Department ಕೂಡ; ಈಗ ಒಂದು ಸಭೆ ಕರೆಯಿರಿ. ನಮ್ಮಲ್ಲಿ open access ನಲ್ಲಿ they are charging upto Rs.2 cross-subsidy and wheeling, banking is almost 7 percent. ಬ್ಯಾಂಕಿಂಗ್‌ನಲ್ಲಿ ಒಂದು ಪರ್ಸೆಂಟ್‌ಯಿದ್ದಾಗ, ನಮಗೆ ಕನಿಷ್ಠ ಪಕ್ಷ wind sector ಗೆ ಬ್ಯಾಂಕಿಂಗ್ ಸೌಲಭ್ಯ ಕೊಡಿ. What I am suggesting is that, ಕನಿಷ್ಠ ಪಕ್ಷ ಒಂದು ಸಾವಿರ ಮೆಗಾವ್ಯಾಟ್ ಒಂದು ವರ್ಷಕ್ಕಾದರೂ ಮಾಡಿ. ಏಕೆಂದರೆ wind is the most potential subject. ತುಮಕೂರಿನಿಂದ ಬೆಳಗಾವಿವರೆಗೆ wind corridor ಇದೆ. Next future ಗೆ Charging Station ಬಂದರೆ, ಸುಮಾರು ಐದು ಸಾವಿರ ಮೆಗಾವ್ಯಾಟ್ ಬರೀ ಚಾರ್ಜಿಂಗ್‌ಗೆ ಬೇಕಾಗುತ್ತದೆ. It is not a small requirement. ಅದಕ್ಕೋಸ್ಕರ ನಾವು ಕೊಡುತ್ತಿರುವುದು ಬಹಳ ಕಡಿಮೆ. Open access ನಲ್ಲಿ ತಾವು ಮೂರನೇ ವ್ಯಕ್ತಿ ಎಂದು ಹೇಳಿದರಲ್ಲಾ, ಈ open access ನಲ್ಲಿ cross-subsidy ರೂ. 2 ಚಿಲ್ಲರೆ ಆಮೇಲೆ wheeling charge, tax ಸೇರಿ ಸುಮಾರು ಮೂರು ರೂಪಾಯಿ ಹತ್ತಿರ ಬರುತ್ತದೆ. Cross-subsidy ಎಂದು ಹೇಳಿದರಲ್ಲ...

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮನ್ಯ ಫಾರೂಖ್‌ರವರ ಅಭಿಪ್ರಾಯಗಳು ಮತ್ತು ಸಲಹೆಗಳು ಸರಿಯಿದೆ. ಆದರೆ ಅವರು ಹೇಳಿದಂತೆ, ದಕ್ಷ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಇವತ್ತು ಉತ್ತರವನ್ನು ಮತ್ತೊಮ್ಮೆ ಕೊಡುತ್ತಿದ್ದೇನೆ. ನಮಗೆ ಅಗತ್ಯವಿರುವುದಕ್ಕಿಂತಲೂ ಹೆಚ್ಚಿನ ವಿದ್ಯುತ್ ಪೂರೈಕೆ ಇದೆ. ವಿದ್ಯುತ್‌ನ ಸಾಮರ್ಥ್ಯ ಸುಮಾರು 15,052 ಮೆಗಾವ್ಯಾಟ್ ವಿದ್ಯುತ್ ಇದೆ. KERC (Karnataka Electricity Regulatory Commission) ನಿಗದಿಪಡಿಸಿದಕ್ಕಿಂತಲೂ ಹೆಚ್ಚು ವಿದ್ಯುತ್ ಸಂಗ್ರಹವಿದೆ. ಅಂತಹ ಸಂದರ್ಭದಲ್ಲಿ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲು ಬಹಳ ಕಷ್ಟ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಇನ್ನೇನಾದರೂ ಮೂರನೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯಕ್ತಿಗೆ ಕೊಡುವಂತಹ ಚರ್ಚೆ ಏನಾದರೂ ಉಳಿದುಕೊಂಡಿದ್ದರೆ, ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ. ನಮ್ಮ ಕೈಯಲ್ಲಿ ಏನಾದರೂ ಸಹಕಾರ ಮಾಡುವಂತಹಂತದ್ದು ಏನಾದರೂ ಇದ್ದರೆ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ ಒಂದೇ ನಿಮಿಷ.

**ಸಭಾಪತಿಯವರು:–** ತಮ್ಮನ್ನು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತೇವೆಂದು ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಪರಿಸರದ ಬಗ್ಗೆ coal based ಕಡಿಮೆ ಮಾಡಿ. Clean energy ಗೆ ಉತ್ತೇಜನ ಕೊಡಿ.

**ಸಭಾಪತಿಯವರು:–** ತಾವು ಮಾತನಾಡುವುದನ್ನು ಸಾಕು ಮಾಡಿ. ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತೇನೆ. ಅವರ ಸಲಹೆಗಳನ್ನು ಪಡೆದುಕೊಂಡ ನಂತರ ಅವರಿಗೆ ಏನಾದರೂ ಸಹಕಾರ ಮಾಡುವುದಕ್ಕೆ ಸಾಧ್ಯವಿದ್ದರೆ, ಮಾಡುತ್ತೇನೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೊಬ್ಬರೇ ಅಲ್ಲ. ಇದರಲ್ಲಿ ಯಾರಿಗೆ ಆಸಕ್ತಿಯಿದೆಯೋ ಅವರನ್ನೆಲ್ಲಾ ಕರೆದು ಸಭೆ ಮಾಡಿ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಕಲ್ಲಿದ್ದಲು ಬೆಲೆ ಎಷ್ಟಿದೆ ಎಂದರೆ, coal based ವಿದ್ಯುತ್ ಉತ್ಪಾದನೆ ಕಡಿಮೆ ಮಾಡಲಿ. ನಮ್ಮ environment ಇನ್ನಷ್ಟು clean ಆಗಿ ಇರಲಿ. Coal based, whether it is Adani Power Limited, KPCL (Karnataka Power Corporation Limited), Bellary Thermal Power Plant ಇರಲಿ, 50 percent ಗಿಂತ ಕಡಿಮೆ, 30 percent NTPC (National Thermal Power Corporation) ಮಾಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಾವು ಒಂದು ನಿಮಿಷ ಕೇಳಿ. ಸಭೆ ನಡೆಸುವಾಗ ತಮ್ಮನ್ನು ಕರೆಯುತ್ತಾರೆ. ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರನ್ನು ಸಭೆಗೆ ಕರೆದು ಅವರ ಸಲಹೆಗಳನ್ನು ಪಡೆದುಕೊಂಡ ನಂತರ ಏನು ಮಾಡಬೇಕೆಂಬುರದ ಬಗ್ಗೆ ಮಾಡಿ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ತಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 703**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮೊದಲನೇ ಪ್ರಶ್ನೆ ಏನೆಂದರೆ, ಡೀಸೆಲ್ ಮತ್ತು ಪೆಟ್ರೋಲ್‌ನಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಬರುತ್ತಿರುವ ತೆರಿಗೆ ಎಷ್ಟು ಎಂದು ವಿವರವನ್ನು ಕೇಳಿದ್ದೆ. ಅದಕ್ಕೆ ಸರ್ಕಾರ ಉತ್ತರ ಕೊಡುವಾಗ, ಡೀಸೆಲ್ ಮತ್ತು ಪೆಟ್ರೋಲ್‌ನಿಂದ ರಾಜ್ಯ ಸರ್ಕಾರಕ್ಕೆ 2020-21ನೇ ಸಾಲಿನಲ್ಲಿ (ಜನವರಿ ಅಂತ್ಯದವರೆಗೆ) ಬಂದಿರುವ ತೆರಿಗೆ ರೂ.12432.27 ಕೋಟಿಗಳು ಎಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರಕ್ಕೆ ಎಷ್ಟು ತೆರಿಗೆ ಹೋಗುತ್ತಿದೆ ಎನ್ನುವ ಬಗ್ಗೆ ಉತ್ತರದಲ್ಲಿ ತಿಳಿಸಿಲ್ಲ. ಎರಡನೆ ಪ್ರಶ್ನೆ ಏನೆಂದರೆ, ಕಳೆದ ಎರಡು ತಿಂಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ದಿನ ಏರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಹೌದು ಎಂದು ತಿಳಿಸಿದ್ದಾರೆ.

(ಮುಂದು)

(271) 04.03.2021, 12.00, ಟಿಸಿಹೆಚ್-ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು.):-**

ಇನ್ನು ಮೂರನೆಯ ಉಪ ಪ್ರಶ್ನೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ದಿನ ಏರಿಕೆಯಾಗುತ್ತಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿದ್ದು, ಬೆಲೆ ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದೆನು. ಅದಕ್ಕೆ ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಯು ಮಾರುಕಟ್ಟೆ ಆಧಾರಿತವಾಗಿದ್ದು, ಅವುಗಳ ಮಾರಾಟದ ಬೆಲೆಯಲ್ಲಿ ದಿನೇ ದಿನೇ ಬದಲಾವಣೆಗಳಾಗುತ್ತಿವೆ. ಮೂಲ ಬೆಲೆಯಲ್ಲಿ ಹೆಚ್ಚಳವಾದಾಗ ಅವುಗಳ ಮಾರಾಟದ ತೆರಿಗೆ ಹೆಚ್ಚಳವಾಗುತ್ತದೆ. ದಕ್ಷಿಣದ ರಾಜ್ಯಗಳಿಗೆ ಹೋಲಿಸಿದಾಗ ಕೇರಳ ರಾಜ್ಯ ಹೊರತುಪಡಿಸಿದರೆ ಪೆಟ್ರೋಲ್ ಬೆಲೆಯು ಕರ್ನಾಟಕದಲ್ಲಿಯೇ ಕಡಿಮೆ ಇರುತ್ತದೆ. ಡೀಸೆಲ್ ಬೆಲೆಯು ದಕ್ಷಿಣದ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿಯೇ ಅತೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿಮೆ ಇರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ತೆರಿಗೆ ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಪ್ರಶ್ನೆ ಕೇಳಿರುವುದಕ್ಕೆ ಉತ್ತರ ಕೊಟ್ಟಿಲ್ಲ. ಮೊದಲನೆಯದಾಗಿ, ನನ್ನ ಎರಡು ಪ್ರಶ್ನೆಗಳಿಗೆ ಸರ್ಕಾರ ಸಂಪೂರ್ಣವಾಗಿ ಉತ್ತರ ಕೊಟ್ಟಿಲ್ಲ. ಇದರ ಜೊತೆಗೆ ಸರ್ಕಾರ ಕೋವಿಡ್-19 ಸಮಯದಲ್ಲಿ ಜನಸಾಮಾನ್ಯರಿಗೆ ಆಗುತ್ತಿರುವಂಥ ತೊಂದರೆಗಳನ್ನು ಗಮನಿಸಿದಾಗ, ತೆರಿಗೆಯನ್ನು ಕಡಿಮೆ ಮಾಡುವಂಥ ಅವಕಾಶ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಇದೆ. ಆದರೆ, ರಾಜ್ಯ ಸರ್ಕಾರ ಕಳೆದ ಒಂದು ವರ್ಷದಲ್ಲಿ ಪ್ರತಿಶತ 32 ರಿಂದ 35 ತೆರಿಗೆಯನ್ನು ಹೆಚ್ಚಿಗೆ ಮಾಡಿದೆ. ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಪೆಟ್ರೋಲ್ ಮತ್ತು ಡೀಸೆಲ್ ಎಲ್ಲಾ ಕಡೆ ಹೆಚ್ಚಳವಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ತೆರಿಗೆಯನ್ನು ಹೆಚ್ಚಿಸುತ್ತಿವೆ. ಇದರಿಂದ ಜನಸಾಮಾನ್ಯರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ತೆರಿಗೆ ಇಳಿಕೆ ಮಾಡುವುದರಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಬೇಕು. ನಾನು ದಕ್ಷಿಣ ರಾಜ್ಯಗಳಿಗೆ ಹೋಲಿಕೆ ಮಾಡಿರುವುದನ್ನು ಕೊಡಿ ಎಂದು ಕೇಳಲಿಲ್ಲ. ನಾನು ಕೇಳುತ್ತಿರುವುದು ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳಿದ್ದೇನೆ. ಇವತ್ತು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. 8.50 ಪೈಸೆ ದರವನ್ನು ಇಳಿಸಿದರೂ ಸಹ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಆದಾಯವೇನು ಬರುತ್ತಿದೆ, ಅದನ್ನು ಕಡಿಮೆ ಮಾಡುವಂಥ ಅವಕಾಶ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಇದೆ. ರಾಜ್ಯ ಸರ್ಕಾರ ಇದರ ಮೇಲೆ ಕ್ರಮ ವಹಿಸಬೇಕು. ಇದರಿಂದ ಜನಸಾಮಾನ್ಯರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ದಿನದಿಂದ ದಿನಕ್ಕೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗುತ್ತಿದೆ. ಸರ್ಕಾರ ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಸ್ಪಂದಿಸಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಭಾನಾಯಕರು ಹಾಗೂ ಮುಜರಾಯಿ ಮತ್ತು ಧರ್ಮಾದಾಯ ಇಲಾಖೆ ಸಚಿವರು (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಅದಕ್ಕೆ ಉಪ ಪ್ರಶ್ನೆಗಳನ್ನೂ ಕೂಡ ಕೇಳಿದ್ದಾರೆ. ಅದಕ್ಕೆ ಸಾಕಷ್ಟು ಉತ್ತರಗಳನ್ನು ಕೊಡಲಾಗಿದೆ. ಅವರು ಸ್ಪಷ್ಟವಾಗಿ ಕೇಳುತ್ತಿರುವುದೇನೆಂದರೆ, ರಾಜ್ಯ ಸರ್ಕಾರಕ್ಕೆ ಬರುವಂಥ ತೆರಿಗೆ ಎಷ್ಟು ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಡೀಸೆಲ್ ಮತ್ತು ಪೆಟ್ರೋಲ್‌ನಿಂದ ರಾಜ್ಯ ಸರ್ಕಾರಕ್ಕೆ 2020-21ನೇ ಸಾಲಿನಲ್ಲಿ (ಜನವರಿ ಅಂತ್ಯದವರೆಗೆ) ಬಂದಿರುವ ತೆರಿಗೆ ರೂ.12432.27 ಕೋಟಿಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಬರುತ್ತಿರುವ ತೆರಿಗೆ ಎಷ್ಟು ಎಂದು ಪ್ರಶ್ನೆ ಕೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರಕ್ಕೆ ಬರುತ್ತಿರುವ ತೆರಿಗೆ ಎಷ್ಟೆಂದು ನಮ್ಮ ಹತ್ತಿರ ಮಾಹಿತಿ ಲಭ್ಯವಿಲ್ಲ. ಮಾನ್ಯ ಸದಸ್ಯರಿಗೆ ಅಗತ್ಯವಿದ್ದರೆ, ಕೇಂದ್ರ ಸರ್ಕಾರದಿಂದ ಮಾಹಿತಿ ತರಿಕೊಂಡು ಕೊಡುತ್ತೇವೆ. ಮತ್ತೆ ಮಾನ್ಯ ಸದಸ್ಯರು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು ತೆರಿಗೆ ರೂ.12432.27 ಕೋಟಿಗಳು ಎಂದು ಏತಕ್ಕೆ ಹೇಳಿದೆನೆಂದರೆ, ಕೇರಳ ರಾಜ್ಯವನ್ನು ಹೊರತುಪಡಿಸಿ, ಉಳಿದೆಲ್ಲಾ ದಕ್ಷಿಣ ಭಾರತದ ರಾಜ್ಯಗಳನ್ನು ಗಮನಿಸಿದಾಗ, ಕರ್ನಾಟಕದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆ ಇದೆ ಎನ್ನತಕ್ಕಂಥ ಅಂಕಿ–ಅಂಶಗಳನ್ನು ಕೊಟ್ಟಿದ್ದೇವೆ. ಕರ್ನಾಟಕ, ತಮಿಳುನಾಡು, ಕೇರಳ, ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಏನು ಬೆಲೆ ಇದೆಯೆಂದು ತಮಗೂ ಗೊತ್ತಿದೆ. ಇದನ್ನು ಮಾನ್ಯ ಸದಸ್ಯರ ಗಮನಕ್ಕೋಸ್ಕರ ಕೊಡಲಾಗಿದೆ. ನಾನು ಸಮರ್ಥನೆಗೋಸ್ಕರ ಕೊಟ್ಟಿಲ್ಲ. ಕೇರಳದಲ್ಲಿ ಮಾತ್ರ ರೂ.84.96 ಗಳು ಇದೆ. ನಮ್ಮ ರಾಜ್ಯದಲ್ಲಿ ರೂ.86.59 ಗಳು ಇದೆ.  ಇದು ಈಗ ಇರುವಂಥ ಮಾರಾಟದ ಒಟ್ಟು ಸ್ಥಿತಿಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ತಾವು ಇದನ್ನು ಗಮನಿಸಬೇಕು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.  ನಮ್ಮ ರಾಜ್ಯದಲ್ಲಿ ದಿನಾಂಕ 01.04.2015ರಲ್ಲಿ ಪೆಟ್ರೋಲ್ ಬೆಲೆ ಪ್ರತಿಶತ 26 ಇತ್ತು.  ಆದರೆ ದಿನಾಂಕ 01.04.2020ಕ್ಕೆ ಪ್ರತಿಶತ 35 ಇದೆಯೆಂದು ಕೊಟ್ಟಿದ್ದಾರೆ. ಆದರೆ ನಾನು ಹೇಳುತ್ತಿರುವುದು ಏನೆಂದರೆ, ಸರ್ಕಾರ ಡೀಸೆಲ್ ಮತ್ತು ಪೆಟ್ರೋಲ್ ಬೆಲೆಯನ್ನು ಇಷ್ಟೊಂದು ಹೆಚ್ಚು ಮಾಡಿದೆ.  ಈ ಕೋವಿಡ್–19 ಸಮಯದಲ್ಲಿ ಅವುಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ? ಬೇರೆ ಸರ್ಕಾರಕ್ಕೆ ಹೋಲಿಸಿರುವುದನ್ನು ನಾನು ಕೇಳಲಿಲ್ಲ, ಆದರೂ ನೀವು ಕೊಟ್ಟಿದ್ದೀರಿ, ಓಕೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಬೆಲೆ ಇಳಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ, ಇದನ್ನು ಕಡಿಮೆ ಮಾಡಲು ಆಯವ್ಯಯದಲ್ಲಿ ಏನಾದರೂ ಪ್ರಸ್ತಾವನೆಯನ್ನು ಇಟ್ಟಿದ್ದೀರಾ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ತಾವು ಇದನ್ನು ಗಮನದಲ್ಲಿಡಬೇಕು.  2017–18ನೇ ಸಾಲಿನಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಡೀಸೆಲ್ ಮತ್ತು ಪೆಟ್ರೋಲ್ ದರವನ್ನು ರೂ.3.00 ಗಳು ಕಡಿಮೆ ಮಾಡಿದ್ದೇವೆ. ಅದೇ ರೀತಿ ಈಗಿನ ಸರ್ಕಾರ ಡೀಸೆಲ್ ಮತ್ತು ಪೆಟ್ರೋಲ್ ದರವನ್ನು ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದೆಯೇ? ಇಲ್ಲವೇ ಆಯವ್ಯಯದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ಬೆಲೆ ಏನಾದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿಮೆ ಮಾಡುತ್ತಾರೆಯೇ? ಈ ಸದನಕ್ಕೆ ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದಂಥ ಶ್ರೀ ಪ್ರಕಾಶ್ ಕೆ.ರಾಥೋಡ್‌ರವರು ನೀವು ಡೀಸೆಲ್ ಮತ್ತು ಪೆಟ್ರೋಲ್ ಬೆಲೆಯನ್ನು ಏನಾದರೂ ಕಡಿಮೆ ಮಾಡುತ್ತೀರಾ? ಇಲ್ಲವೇ ಇದನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡುತ್ತೀರಾ ಎಂದು ಕೇಳಿದ್ದಾರೆ. ಇದು ಬಹಳ ಮುಖ್ಯವಾದ ಪ್ರಶ್ನೆ. ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು point of order.

**ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ದಯಯಾಡಿ ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಅವರು ಹೇಳಿದ್ದು ರೆಕಾರ್ಡ್‌ಗೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಲಿಲ್ಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.606**
**(ಉತ್ತರ ಲಗತ್ತಿಸಿದೆ)**

**ಶ್ರೀ ಅ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. " ಕಳಪೆ ಯಂತ್ರಗಳ ಬಗ್ಗೆ ಅಸಮಧಾನ " ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. 17 ಕಸ ಗುಡಿಸತಕ್ಕಂಥ ಯಂತ್ರಗಳು ಎಲ್ಲೆಲ್ಲಿ ಓಡಾಡುತ್ತಿವೆ ಮತ್ತು ಎಲ್ಲೆಲ್ಲಿ ಕಸ ತೆಗೆಯುತ್ತಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಸ್ವಚ್ಚತಾ ಯಂತ್ರಗಳೇ ಕೆಲವು ಐದು ತಿಂಗಳಾದರು ಇನ್ನೂ ಕೆಲಸ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹಸಿರು ನಿಶಾನೆ ನೀಡಿದ್ದರೂ ಕೂಡ ಕಾರ್ಯಾರಂಭ ಆಗಿಲ್ಲವೆಂದು ಹೇಳಲಾಗಿದೆ. ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿವರನ್ನು ನಾನು ಅವರಿಗೆ ತಲುಪಿಸುತ್ತೇನೆ. ಅದರ ಬಗ್ಗೆ ಬಿ.ಬಿ.ಎಂ.ಪಿಯವರು ಪರಿಶೀಲಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು, ಮುಖ್ಯ ಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಅ.ದೇವೇಗೌಡರವರ ಚುಕ್ಕೆ ಗುರುತಿನ ಪ್ರಶ್ನೆಗೆ ಪೂರಕವಾದಂಥ ಟಿಪ್ಪಣಿಯನ್ನು ಕೊಡಲಾಗಿದೆ. ಸುಮಾರು 1400 ಕಿಲೋ ಮೀಟರ್ ವ್ಯಾಪ್ತಿಯ ಬೆಂಗಳೂರು ಮಹಾನಗರ ಪಾಲಿಕೆ ರಸ್ತೆಗಳನ್ನು ಶುಚಿಗೊಳಿಸಬೇಕಿದೆ. ಮಾನವ ಸಂಪನ್ಮೂಲದಿಂದ ಶುಚಿಗೊಳಿಸುವುದು ತುಂಬಾ ಕಠಿಣವಾದಂಥ ಕೆಲಸ. ರಸ್ತೆಗಳಲ್ಲಿ ಯಾವಾಗಲೂ ದೂಳು ತುಂಬಿರುತ್ತದೆ ಎನ್ನುವ ಕಾರಣಕ್ಕೋಸ್ಕರ ಈ ಯಂತ್ರಗಳನ್ನು ಖರೀದಿಸಿ ಕೆಲಸ ಮಾಡುವಂಥದ್ದನ್ನು ಮಾಡಲಾಗಿದೆ. ಎಷ್ಟೆಷ್ಟು ಯಂತ್ರಗಳನ್ನು ಖರೀದಿ ಮಾಡಿದ್ದೇವೆ, ಅವುಗಳ ಒಟ್ಟು ಮೊತ್ತಗಳೆಷ್ಟು ಮತ್ತು ಅವುಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ ಎನ್ನುವುದನ್ನೂ ಕೂಡ ಪೂರ್ಣ ಪ್ರಮಾಣದಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಮತ್ತೆ ಏನಾದರೂ ಮಾಡಬೇಕಾದರೆ ಮಾಡುತ್ತೇವೆ.

**ಸಭಾಪತಿಯವರು:–** ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ತಮ್ಮ ಪ್ರಶ್ನೆ ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)** ಮಾನ್ಯ ಸಭಾಪತಿಯವರೇ, ಅವರಿಗಿಂತ ಮೊದಲು ನನ್ನ ಪ್ರಶ್ನೆ ಇದೆ. ನಾನು ಪ್ರಶ್ನೆ ಕೇಳಲು ಅವಕಾಶ ಕೊಡಬೇಕು.

**ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.689ನ್ನು ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಜಲಸಂಪನ್ಮೂಲ ಇಲಾಖೆ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇವೆ. ಏಕೆಂದರೆ, ಆ ಇಲಾಖೆಗೆ ಸಚಿವರು ಇಲ್ಲ. ಪ್ರಸ್ತುತ ಪರಿಸ್ಥಿತಿ ಯಾವ ರೀತಿ ಇದೆಯೆಂದು ತಮಗೂ ಗೊತ್ತಿದೆ. ಹಾಗಾಗಿ, ಅದನ್ನು ತೆಗೆದುಕೊಳ್ಳುತ್ತಿಲ್ಲ. ನೀವು ಒಂದು ದಿವಸವಾದರೂ ಸಮಯ ಕೊಡಿ. ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣವೆಂದು ಮಾತನಾಡಿದ್ದೇನೆ. ನಿಮ್ಮ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಈಗ ಅದಕ್ಕೂ ಉತ್ತರ ಕೊಡಬಹುದಲ್ಲವೇ? ಈಗ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಉತ್ತರ ಕೊಡುತ್ತಿದ್ದಾರಲ್ಲಾ, ಆ ರೀತಿ ಕೊಡಬಹುದಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ ಅಗತ್ಯವಿದ್ದರೆ ಉತ್ತರ ಕೊಡಬಹುದು. ಅದಕ್ಕೆ ಮಾಹಿತಿಗಳನ್ನು ತರಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಆ ವಿಷಯ ನಿಯಮ 68ರಲ್ಲಿ ಇದೆ. ಚರ್ಚೆ ಮಾಡೋಣ. ಈಗ ಮಾನ್ಯ ಕೆ.ಪ್ರತಾಪ್‌ಚಂದ್ರಶೆಟ್ಟಿಯವರು ಪ್ರಶ್ನೆ ಕೇಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.689**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರ ಸಾಮರ್ಥ್ಯದ ಬಗ್ಗೆ ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಶ್ನೆ ಕೇಳಿದ್ದೆನು. ಆದರೆ, ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟಿರುವುದರಲ್ಲಿ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಧೀನದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಉದ್ದೇಶವನ್ನು ಹೊಂದಿದ್ದೀರಾ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದೆನು. ಖಾಸಗೀಕರಣ ಮಾಡತಕ್ಕಂಥ ಉದ್ದೇಶವೇನು? ಅದನ್ನು ಯಾರ ಬೇಡಿಕೆ ಮೇಲೆ ಮಾಡುತ್ತಿದ್ದೀರಿ? ಈಗ ಯಾರಿಗೆ ತೊಂದರೆಯಾಗಿದೆ. ಖಾಸಗೀಕರಣ ಮಾಡತಕ್ಕಂಥದ್ದಕ್ಕೆ ಏನಾದರೂ ಮನವಿಗಳು ಬಂದಂಥ ಹಿನ್ನೆಲೆಯಲ್ಲಿ ಮಾಡಿದ್ದೀರಾ. ಇದನ್ನು ಖಾಸಗೀಕರಣ ಮಾಡುವುದಕ್ಕೆ Federation of Karnataka Electricity Board Employees Union and Associations ರವರ ವಿರೋಧವಿದೆ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡದೇ ಇದ್ದರೂ ಕೂಡ ಅದಕ್ಕೆ ತಿದ್ದುಪಡಿಯನ್ನು ತರತಕ್ಕಂಥ ಉದ್ದೇಶವೇನೆಂದು ಮಾನ್ಯ ಸಭಾನಾಯಕರು ಹೇಳುತ್ತಾರೆಯೇ? ಅವರು ಇದೊಂದಕ್ಕೆ ಉತ್ತರ ಕೊಡಲಿ. ಇಂಧನ ಇಲಾಖೆಯ ಅಧೀನದಲ್ಲಿ ಬರುವಂಥ ವಿವಿಧ ವಿದ್ಯುತ್ ವಿತರಣಾ ಕಂಪನಿಗಳನ್ನು ಖಾಸಗೀಕರಣ ಮಾಡತಕ್ಕಂಥ ಉದ್ದೇಶವೇನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿದ್ಯುಚ್ಛಕ್ತಿಯನ್ನು ಸರಬರಾಜು ಮತ್ತು ಉತ್ಪಾದನೆ ಮಾಡುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸುಪರ್ಧಿಗೆ ಒಳಪಡುತ್ತದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–**ಮಾನ್ಯ ಸಭಾಪತಿಯವರೇ, ಒಳಪಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಟಿಪ್ಪಣಿಯನ್ನು ಕೊಟ್ಟಿದ್ದೇವೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದ ಕೊನೆಯಲ್ಲಿ ಹೇಳಿರುವುದನ್ನು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**: ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಜೋರು ಮಾಡಿದರೆ ಹೇಗೆ. ಸ್ವಲ್ಪ ಪ್ರೀತಿ ತೋರಿಸಬೇಕು ಅಲ್ಲವೇ? ಮಾನ್ಯ ಹರಿಪ್ರಸಾದ್‌ರವರೇ ಇದು ಯಾವ ನ್ಯಾಯ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(272)4.3.2021/12.10/ಎಂ.ಎಂ-ಎ.ಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಂದು):-**

ನಾನು ಅಲ್ಲಿರುವಾಗ ಪ್ರೀತಿ ಇದೆಯೆಂದು ತಿಳಿದುಕೊಂಡಿದ್ದೆ. ಇಲ್ಲಿರುವಾಗ ಇಲ್ಲವೆಂದರೆ ಯಾವ ನ್ಯಾಯ? ಕೋಪವನ್ನು ನನ್ನೊಬ್ಬನ ಮೇಲೆ ತೆಗೆಯಬೇಡಿ ಅವರ ಮೇಲೆಯೂ ಸ್ವಲ್ಪ ತೆಗೆಯಿರಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರು ಬಂದು ಇಲ್ಲಿ ಉತ್ತರ ಕೊಡಬೇಕಾಗುತ್ತದೆ. ಅವರು ಏನು ಬೇಕು ಅದನ್ನು ಕೊಡಬೇಕೆಂದರೆ . . . ಅದಕ್ಕೆ ಉತ್ತರ ಕೊಡಬೇಕು.

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ನೀವು ಏತಕ್ಕೆ ಹೊಗಳಿಕೆ ಮಾಡುತ್ತೀರಿ ಅವರು ಹೇಳುತ್ತಾರೆ ಕೇಳಿ.

**Sri P.R. RAMESH:** Point of Order ನಲ್ಲಿ... (ಗೊಂದಲ) ಬೇಡ ಎನ್ನುತ್ತೀರಿ. ಬರುವುದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಕೊಡುತ್ತೇವೆ. ಅದರ ಪ್ರಕಾರ ಮಾತನಾಡುತ್ತೇವೆ. ಮುಖ್ಯಮಂತ್ರಿಯವರು ಇರಬೇಕು.

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ನಾನು ಮುಂದೆ ನಿಂತುಕೊಂಡು ಮಾತನಾಡಿದ್ದೇನೆ. ಅವರು ಉತ್ತರ ಹೇಳುತ್ತಾರೆ ಕೇಳಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, Point of Order ತೆಗೆದಿದ್ದಾರೆ. ಅವರು ಮುಖ್ಯಮಂತ್ರಿಯವರ ಪರವಾಗಿ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಏನಾದರೂ ಹೇಳಿ.

**ಸಭಾಪತಿಯವರು:-** ಸಭಾನಾಯಕರು ಮುಖ್ಯಮಂತ್ರಿಯವರ ಪರವಾಗಿ ಉತ್ತರ ಹೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮುಖ್ಯಮಂತ್ರಿಯವರ ಪರವಾಗಿ ರೂಲಿಂಗ್ ಕೊಡಬಹುದು ಎಂದಾದರೂ ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರಿಗೆ ಮುಖ್ಯಮಂತ್ರಿಗಳ ಜೊತೆ ತುಂಬಾ ಆತ್ಮೀಯತೆ ಇದೆ. ಅದಕ್ಕೋಸ್ಕರ ಅವರಿಂದ ಉತ್ತರ ಕೇಳುತ್ತಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕಳೆದ ಸಲ ಸದನ ನಡೆದಾಗ ಮುಖ್ಯಮಂತ್ರಿಯವರು ಸದನಕ್ಕೆ ಒಂದು ಸಲವೂ ಬರಲಿಲ್ಲ. ಮೇಲ್ಮನೆಯೆಂದರೆ ಲೆಕ್ಕಕ್ಕೇ ಇಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ನಾಡಿನಲ್ಲಿ ಅತ್ಯಂತ ಜ್ವಲಂತ ಸಮಸ್ಯೆಗಳಿವೆ. ಮುಖ್ಯಮಂತ್ರಿಯವರು ಪ್ರಮುಖವಾದ portfolio ಹೊಂದಿದ್ದಾರೆ. ಮಹತ್ವದ ಪ್ರಶ್ನೆಗಳನ್ನು ಕೇಳಿದಾಗ ಅವರಿದ್ದರೆ we will not underestimate our Leader of the House. We have got regards and respect for him. ಅವರಿಗೆ knowledge, wisdom ಎಲ್ಲಾ ಇದೆ. ಅದರ ಬಗ್ಗೆ ಅಲ್ಲ. ಆದರೆ portfolio ನಿರ್ವಹಣೆ ಮಾಡಿದವರಿಗೆ ಅದರ ಅನುಭವ ಇರುತ್ತದೆ. ನಾನು briefing ತೆಗೆದುಕೊಳ್ಳುತ್ತೇನೆ. ನಾನು ಸಭಾನಾಯಕನಾಗಿದ್ದಾಗ ಮುಖ್ಯಮಂತ್ರಿಯವರ ಪ್ರಶ್ನೆಗೆ ಒಂದು ದಿವಸವೂ ಉತ್ತರ ಕೊಟ್ಟಿಲ್ಲ. ಆದರೆ ಅವರಿಗೆ ಬೇರೆ ಕೆಲಸ ಕಾರ್ಯಗಳಿದ್ದಾಗ ಕೊಟ್ಟಿದ್ದೇನೆ. ಕೊಟ್ಟಿಲ್ಲ ಎಂದು ಹೇಳುವುದಿಲ್ಲ. ಜ್ವಲಂತ ಸಮಸ್ಯೆಗಳಿದ್ದಾಗ defer ಮಾಡಲಿ. ಅವರು ಉತ್ತರ ಕೊಟ್ಟರೆ ಒಳ್ಳೆಯದಾಗುತ್ತದೆ. ಆಗ policy decision ಇರುತ್ತದೆ. ನೀವು policy decision ಮೇಲೆ ಹೇಳುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಯವರು authentic ಆಗಿ ಇಂತಹ ನಿರ್ಣಯ ಕೈಗೊಳ್ಳುತ್ತಾರೆ. ಮಾನ್ಯ ಸದಸ್ಯರು ಅದನ್ನು ಕೇಳಿದರು.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ನಮಗೆ ನ್ಯಾಯ ಸಿಗುವುದಿಲ್ಲ.

**ಸಭಾಪತಿಯವರು:-** ಸಭಾನಾಯಕರೇ, ದಯಮಾಡಿ ಮುಂದಿನ ಸಲ ಮುಖ್ಯಮಂತ್ರಿಯವರು ಈ ಸದನಕ್ಕೆ ಬಂದು ಉತ್ತರವನ್ನು ಕೊಡುವ ಕೆಲಸ ಮಾಡಬೇಕೆಂದು ನಿಮಗೆ ಹೇಳುತ್ತೇನೆ. ಯಾವುದೇ ಸಚಿವರಿರಲಿ ಅವರವರ ಉತ್ತರವನ್ನು ಅವರೇ ಕೊಡಬೇಕು. ಕಾರಣಾಂತರಗಳಿಂದ ಎಂದು ನೀವು ಹೇಳಿದ್ದೀರಿ, ಅದಕ್ಕೆ ಅವರು ಪತ್ರವನ್ನೂ ಕಳುಹಿಸಿದ್ದಾರೆ. ಮುಂದಿನ ವಾರದಿಂದ ಮುಖ್ಯಮಂತ್ರಿಯವರು ಈ ಸದನಕ್ಕೆ ಬಂದು ಉತ್ತರ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್**:- ಮಾನ್ಯ ಸಭಾಪತಿಯವರೇ, policy decision ಇದೆ ಅದರ ಮೇಲೆ ಅವರು ನಿರ್ಣಯ;

**ಸಭಾಪತಿಯವರು**:- ಈಗ ನಾನು ಅದನ್ನೇ ಹೇಳಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್**:- ತಾವು ನಮಗೆ ಸಪೋರ್ಟ್ ಕೊಟ್ಟಿರಿ ಅದರ ಬಗ್ಗೆ ಎರಡು ಮಾತಿಲ್ಲ. ಮುಖ್ಯಮಂತ್ರಿಯವರಿದ್ದಾಗ ಅವರೇ ಹೇಳಬೇಕು. ಉಳಿದ ಸಚಿವರದ್ದನ್ನು ಅವರು ನಿಭಾಯಿಸಬಹುದು. ನೀವಂತೂ ನಮಗೆ ಬೆಂಬಲ ಕೊಟ್ಟಿದ್ದೀರಿ ಅದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಮುಂದಿನ ಸಲ ಹೀಗಾಗದಂತೆ ನೋಡಿಕೊಳ್ಳಿ.

**ಸಭಾಪತಿಯವರು**:- ನಾನು ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಮುಖ್ಯಮಂತ್ರಿಯವರು ಬಂದು ಉತ್ತರ ಹೇಳಿದರೆ ಎಲ್ಲರಿಗೂ ಸಮಾಧಾನವಾಗುತ್ತದೆ. ಮುಂದಿನ ಸಲ ಮುಖ್ಯಮಂತ್ರಿಯವರು ಕಡ್ಡಾಯವಾಗಿ ಬಂದು ಉತ್ತರ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ತಾವು ಏನು ಆದೇಶ ಕೊಟ್ಟಿದ್ದೀರಿ ಅದಕ್ಕೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ಹೇಳಬೇಕಾಗಿದೆ. ಮೊದಲು ಮಾನ್ಯ ವಿರೋಧಪಕ್ಷದ ನಾಯಕರು ಸಭಾನಾಯಕರಾಗಿದ್ದಾಗ ಮುಖ್ಯಮಂತ್ರಿಯವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆಗ ನಮಗೆ ಇದನ್ನು ಹೇಳುವುದಕ್ಕೆ ಅರ್ಥವಾಗಲೇ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್**:- ಮಾನ್ಯ ಸಭಾನಾಯಕರೇ, ನೀವು ಕಡತವನ್ನು ತೆಗೆದು ನೋಡಿ. ನಾನು ಸುಮಾರು ಮೂರು ವರ್ಷಗಳ ಕಾಲ ಸಭಾನಾಯಕನಾಗಿದ್ದೆ. ಮುಖ್ಯಮಂತ್ರಿಯವರ ಪ್ರಶ್ನೆಗೆ ಒಂದೂ ಉತ್ತರ ಕೊಟ್ಟಿಲ್ಲ. ಆದರೆ ಮುಖ್ಯಮಂತ್ರಿಯವರ ನಿಯಮ 330, ನಿಯಮ 72, ಗಮನ ಸೆಳೆಯುವ ಸೂಚನೆಗಳಿಗೆ ಬಹುತೇಕ ಅಟೆಂಡ್ ಆಗಿದ್ದರು. ಪ್ರಶ್ನೆಗಳಿಗೆ ಮಾತ್ರ ಅಂದು ಮುಖ್ಯಮಂತ್ರಿಯಾಗಿದ್ದ ಮಾನ್ಯ ಸಿದ್ದರಾಮಯ್ಯನವರೇ ಬಂದು ಉತ್ತರ ಕೊಟ್ಟಿದ್ದಾರೆ. ಬೇಕಾದರೆ ಕಡತ ತೆಗೆದು ನೋಡಿ. Authentic ಆಗಿ ಜವಾಬ್ದಾರಿಯುತವಾದ ಸ್ಥಾನದಲ್ಲಿರುವವರು;

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ಅವರು ಹೇಳಿದ್ದನ್ನು ತಿಳಿದುಕೊಳ್ಳಿ. ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಿ. ಅದಕ್ಕೆ ಸ್ಪಂದಿಸಬೇಕಾದುದು ಸರ್ಕಾರದ ಜವಾಬ್ದಾರಿಯಾಗಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾಪತಿಯವರೇ, ಇದು ಸರ್ಕಾರದ ನೀತಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಇದಕ್ಕೆ ತಾವು ಉತ್ತರ ಕೊಡುವುದು ಕಷ್ಟವಾಗುತ್ತದೆ. ಏಕೆಂದರೆ ತಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಡಿಫೆಂಡ್ ಮಾಡುವುದಕ್ಕಾಗುವುದಿಲ್ಲ. ಡಿಫೆಂಡ್ ಮಾಡಬೇಕಾದರೆ ಯಾವ ಕಾರಣದಿಂದ ಎನ್ನುವುದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ಅದರ ಬಗ್ಗೆ ಪ್ರಬಲವಾದ ವಿರೋಧವೂ ಇರುವಂತಹ ಸಂದರ್ಭದಲ್ಲಿ ನೀವು ಏನೆಂದು ಹೇಳುತ್ತೀರಿ? ಕೊನೆಯದಾಗಿ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇವೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ನಾವು ಪ್ರಶ್ನೆ ಹಾಕುವುದಿಲ್ಲ. ನಾವು ಪ್ರಶ್ನೆ ಹಾಕುವುದು ಇದಕ್ಕೆ;

**ಸಭಾಪತಿಯವರು**:– ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಒಂದು ಕೆಲಸ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**:– ಮುಂದಿನ ವಾರ ಉತ್ತರ ಕೊಟ್ಟರೆ ಪರವಾಗಿಲ್ಲ.

**ಸಭಾಪತಿಯವರು**:– ಮಾನ್ಯ ಸಭಾನಾಯಕರೇ, ಉತ್ತರ ಅವರಿಗೆ ಸಮಾಧಾನ ತಂದಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ**:– ಈಗ ಅವರು GPA Holder. A GPA Holder is as good as the owner.

**ಸಭಾಪತಿಯವರು**:– ಮಾನ್ಯ ಭೋಜೇಗೌಡರೇ ಏತಕ್ಕೆ ನಿಂತುಕೊಂಡಿರಿ, ನಿಮಗೆ ಹೇಳಿದೆನೇ? ಸುಮ್ಮನೇ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮಾನ್ಯ ಸಭಾಪತಿಯವರೇ, 'GPA Holder' ಎನ್ನುವಂತಹ ಪದವನ್ನು ತಾವು ಕಡತದಿಂದ ತೆಗೆಯಬೇಕು.

**ಸಭಾಪತಿಯವರು**:– ಒಂದು ನಿಮಿಷ ನಾನು ಹೇಳುತ್ತೇನೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಸಮಾಧಾನವಾಗಿಲ್ಲ. ಮುಂದಿನವಾರ ಮುಖ್ಯಮಂತ್ರಿಯವರು ಅದಕ್ಕೆ ಉತ್ತರ ಕೊಡಲಿ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**:– ಮಾನ್ಯ ಸಭಾಪತಿಯವರೇ, ಸಭಾನಾಯಕರ ಕೈಗೆ ಏನಾಯಿತು ಎಂದು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮೊನ್ನೆ ದಿವಸ ನನ್ನ ಕಾರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸು ಹೊಡೆಯಿತು. ಅದಕ್ಕೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರೀತಿ ಮತ್ತು ಸಹಾನುಭೂತಿ ಇರುವುದರಿಂದ ಪೆಟ್ಟು ಕಡಿಮೆಯಾಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 660**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಪ್ರಶ್ನೆಯನ್ನು ಈ ರಾಜ್ಯದ ಸಚಿವಾಲಯದ ನೌಕರರ ಕಾರ್ಯವೈಖರಿ ಬಗ್ಗೆ ಕೇಳಿದ್ದೇನೆ. ಈ ರಾಜ್ಯದ ಪ್ರಗತಿಗೆ ಮನುಷ್ಯನ ದೇಹಕ್ಕೆ ತಲೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ಸಚಿವಾಲಯ ಇಲಾಖೆ ಈ ರಾಜ್ಯದ ಪ್ರಗತಿಗೆ ಪೂರಕವಾಗಿರಬೇಕೆನ್ನುವ ಆಶಯದಿಂದ ಈ ಪ್ರಶ್ನೆ ಕೇಳಿದ್ದೇನೆ. ಇಲ್ಲಿ 43 ಇಲಾಖೆಗಳು, 2269 ನೌಕರರು ಡಿ.ಪಿ.ಎ.ಆರ್ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಏನು ಸಮಸ್ಯೆಯಾಗಿದೆಯೆಂದರೆ, ಈ ಸರ್ಕಾರದ ಆಶಯಗಳು, ಯೋಜನೆಗಳು, ಕಾರ್ಯಕ್ರಮಗಳು ಜಾರಿಯಾಗಬೇಕಾದರೆ ಅದು ಪ್ರಾರಂಭವಾಗುವುದೇ ಸಚಿವಾಲಯದಿಂದ. ಸಚಿವಾಲಯದ ಅಡಿಯಲ್ಲಿ ಸಮಯಕ್ಕೆ ಸರಿಯಾಗಿ ಆದೇಶಗಳು, ಸುತ್ತೋಲೆಗಳು ಜಾರಿಯಾಗದೇ ಇರುವುದರಿಂದ ರಾಜ್ಯದ ಪ್ರಗತಿ ಕುಂಠಿತವಾಗುತ್ತದೆ ಎನ್ನುವುದು ಎಲ್ಲರ ಭಾವನೆಯಾಗಿದೆ ಎಂದು ಅಂದುಕೊಂಡಿದ್ದೇನೆ. ಆದ್ದರಿಂದ ಆ ಇಲಾಖೆ ಸರಿಯಾಗಿ ಕೆಲಸ ಮಾಡದೇ ಇದ್ದರೆ the governance of the government will come to a standstill. ನನ್ನ ಭಾವನೆ ಇಷ್ಟೇ. ಇಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಲಗಾಮು ಹಾಕುವವರು ಯಾರು? ಅವರ ಕಾರ್ಯವೈಖರಿ ಹೇಗಿದೆ? ನಾವು ನೀವು 10-20 ಸಲ ಕಛೇರಿಗೆ ತಿರುಗಿದರೂ ಸಚಿವಾಲಯದಲ್ಲಿ ಒಂದು ಕಡತವೂ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ. ಅವರು ಕೆಲಸ ಮಾಡುತ್ತಿರುವುದೇ ವಿಧಾನಸೌಧ, ವಿಕಾಸಸೌಧ, ಎಂ.ಎಸ್. ಬಿಲ್ಡಿಂಗ್ ಬಿಟ್ಟರೆ ಬೇರೆ ಎಲ್ಲೂ ಇಲ್ಲ, ಒಂದೇ ಇಲಾಖೆಯಡಿಯಲ್ಲಿ. ಅವರ ನಿಗ್ರಹಕ್ಕೆ, ವರ್ಗಾವಣೆಗೆಂದು 2013ರಲ್ಲಿ ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದಕ್ಕೆ addendum ಮಾಡಿ ಅವರನ್ನು ವರ್ಗಾವಣೆ ಎಂದು ಕರೆಯುವುದು ಬೇಡ, ಅವರು ಒಂದೇ ಇಲಾಖೆಯಡಿಯಲ್ಲಿ ಬರುತ್ತಾರೆ ಅದಕ್ಕೋಸ್ಕರ ಅವರ ಚಲನವಲನ ಮಾಡುತ್ತೇವೆಂದು ಆದೇಶವನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ನನ್ನ ಪ್ರಶ್ನೆ ಇಷ್ಟೇ. ನೀವು ಬೇರೆ ಬೇರೆ ಇಲಾಖೆಗಳಿಗೆ ಪೋಲೀಸ್ ಇಲಾಖೆ, ಕೆ.ಎ.ಎಸ್ ಅಧಿಕಾರಿಗಳು, ಐ.ಎ.ಎಸ್ ಅಧಿಕಾರಿ, ಬೇರೆ ಬೇರೆ ರಾಜ್ಯದ ಅಧಿಕಾರಿಗಳೆಲ್ಲರಿಗೂ ವರ್ಗಾವಣೆ ನಿಯಂತ್ರಣ ಕಾಯಿದೆಯನ್ನು ತಂದಿದ್ದೀರಿ. ಇಂತಿಷ್ಟು ವರ್ಷಗಳು ಮಾತ್ರ ಅಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದೀರಿ, ಅದಾದ ಮೇಲೆ ಕಡ್ಡಾಯವಾಗಿ ವರ್ಗಾವಣೆ ಆಗಬೇಕೆಂದು ಹೇಳಿದ್ದೀರಿ. ಸಚಿವಾಲಯದ ಅಧಿಕಾರಿಗಳಿಗೆ, ನೌಕರರಿಗೆ ಈ ಆದೇಶ ಏತಕ್ಕೆ ಅನ್ವಯವಾಗುವುದಿಲ್ಲ? ಇದು ಮೊದಲನೆಯದು. ಎರಡನೆಯದಾಗಿ ಇಲ್ಲಿ ಪ್ರಭಾವವನ್ನು ಬಳಸಿ ಒಂದೇ ಇಲಾಖೆಯಲ್ಲಿ, ಒಂದೇ ಸೆಕ್ಷನ್‌ನಲ್ಲಿ ಹತ್ತಾರು ವರ್ಷಗಳ ಕಾಲ ಕೆಲಸ ಮಾಡಿಕೊಂಡು, ಭ್ರಷ್ಟಾಚಾರಕ್ಕೆ ಎಡೆಮಾಡಿಕೊಟ್ಟು ಅಲ್ಲಿ ಬಿಡ್ಡುಗಟ್ಟಿದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಏತಕ್ಕೆ ನೀವು ಅವರನ್ನು ರಕ್ಷಣೆ ಮಾಡುವುದಕ್ಕೆ ಹೋಗುತ್ತಿದ್ದೀರಿ? ಸರ್ಕಾರಕ್ಕೆ ನೇರವಾಗಿ ಕೇಳುತ್ತಿದ್ದೇನೆ, ಡಿ.ಪಿ.ಎ.ಆರ್. ಕೈ ಕೆಳಗೆ ಬರುವ ಈ ಇಲಾಖೆಗೆ ಎಷ್ಟು ಸಲ ಪ್ರಗತಿ ಪರಿಶೀಲನೆ ಮಾಡಿದ್ದೀರಿ? ನನಗೆ ಎರಡು ವರ್ಷಗಳ ವಿವರ ಕೊಡಿ. ಎರಡು ವರ್ಷದ ಅವಧಿಯಲ್ಲಿ ಮುಖ್ಯಮಂತ್ರಿಯವರಾಗಿರಬಹುದು, ಡಿ.ಪಿ.ಎ.ಆರ್.ನ ಪ್ರಧಾನ ಕಾರ್ಯದರ್ಶಿಯವರಾಗಿರಬಹುದು, ಮುಖ್ಯ ಕಾರ್ಯದರ್ಶಿಯವರಾಗಿರಬಹುದು ಎಷ್ಟು ಸಲ ಅವರ ಪ್ರಗತಿ ಪರಿಶೀಲನೆಯನ್ನು ಮಾಡಿದ್ದಾರೆ ಎಂಬ ಅಂಕಿ-ಅಂಶಗಳನ್ನು ಕೊಡಬೇಕೆಂದು ಕೋರುತ್ತೇನೆ. ಮೂರನೆಯದಾಗಿ, ಈ ಸಚಿವಾಲಯದ ನೌಕರರಿಗೆ 'ಸಕಾಲ' ಎನ್ನುವ ಕಾಯಿದೆ ಅನ್ವಯವಾಗುತ್ತದೆಯೋ ಇಲ್ಲವೋ? ಆದರೆ 'ಸಕಾಲ'ದ ಅಡಿಯಲ್ಲಿ ಕೆಲಸ ಮಾಡದೇ ಇರುವ ನೌಕರರ ವಿರುದ್ಧ ಏನು ಕ್ರಮ ಕೈಗೊಂಡಿದ್ದಾರೆ? ನಾಲ್ಕನೆಯದಾಗಿ, ನೀವು ಕಾಲಮಿತಿ ನಿಗದಿ ಮಾಡಿದ್ದೀರಿ. ಏನೆಂದರೆ, 3 ರಿಂದ 5 ವರ್ಷ ಒಂದು ವರ್ಗಕ್ಕೆ, 5 ರಿಂದ 7 ವರ್ಷ ಒಂದು ವರ್ಗಕ್ಕೆ ಅಷ್ಟು ವರ್ಷ ಕೆಲಸ ಮಾಡಲೇಬೇಕೆಂದು ನಿಗದಿ ಮಾಡಿದ್ದೀರಿ. ಇದನ್ನು ಬೇರೆ ವರ್ಗಾವಣೆ ನಿಯಂತ್ರಣ ಕಾಯಿದೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ಬೇರೆ ಇಲಾಖೆಯ ನೌಕರರ ತರಹ ಇಲ್ಲಿಯೂ ಏಕೆ ಮಾಡುವುದಕ್ಕಾಗುವುದಿಲ್ಲ ಎನ್ನುವ ಪ್ರಶ್ನೆಗಳನ್ನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ಅವರ ಪ್ರಶ್ನೆ ಬಹಳ ಸ್ಪಷ್ಟವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಕೇಳಿದ ಪ್ರಶ್ನೆ ಬಹಳ ಗಂಭೀರವಾಗಿದೆ. ತಮ್ಮ ಗಮನಕ್ಕೂ ಬಂದಿರಬೇಕು, ನಾವು ಮೊದಲು ಮಾತನಾಡುವಾಗ ಒಂದು ಸಲ ಸಚಿವಾಲಯದಲ್ಲಿರುವಂತಹ ಸಿಬ್ಬಂದಿಗಳ ವರ್ಗಾವಣೆಯನ್ನು ಚಲನವಲನವಾಗಿ ಪರಿವರ್ತನೆ ಮಾಡಿದ್ದಕ್ಕೋಸ್ಕರ ಕೆಲವು ಸಮಸ್ಯೆಗಳಾಗುತ್ತಿದೆ ಎಂದು ಹಿಂದೆ ಇದನ್ನು ನಾವೇ ಹೇಳಿದ್ದೆವು. ಈಗ ಅವರು ಕೇಳಿರುವ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಟ್ಟಿದ್ದೇನೆ. ಆದರೆ ಚಲನವಲನ ಉದ್ದೇಶಗಳನ್ನು ನಿಯಂತ್ರಿಸಬೇಕು ಮತ್ತು ಪಾರದರ್ಶಕತೆ ತರಬೇಕು. 'ಸಕಾಲ' ಅವರಿಗೆ ಅನ್ವಯಿಸುತ್ತದೋ ಇಲ್ಲವೋ ಎನ್ನುವ ಮಾತನ್ನು ಕೇಳಿದ್ದಾರೆ. ಸಕಾಲ ಅವರಿಗೆ ಅನ್ವಯಿಸುತ್ತದೆ. ಚಲನವಲನ ಎನ್ನುವ ವಿಚಾರದಲ್ಲಿ ಎಂ.ಎಸ್.ಬಿಲ್ಡಿಂಗ್, ವಿಧಾನಸೌಧ ಮತ್ತು ವಿಕಾಸಸೌಧಗಳಲ್ಲಿ ಮಾತ್ರ ಅವರಿಗೆ ವರ್ಗಾವಣೆಯಾಗುತ್ತದೆ, ಹೊರಗಡೆ ಅವರ ವರ್ಗಾವಣೆಯಾಗುವುದಿಲ್ಲ. ಹಾಗಾಗಿ ಭ್ರಷ್ಟಾಚಾರಕ್ಕೆ ಇದು ಕಾರಣವಾಗುತ್ತದೆ ಎನ್ನುವ ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಯಾರ್ಯಾರು ದುರ್ನಡತೆ ಮಾಡುತ್ತಾರೆ, ಯಾರ ಮೇಲೆ ಆರೋಪವಿದೆ ಆ ಎಲ್ಲಾ ಸಿಬ್ಬಂದಿಗಳ ಮೇಲೆ ತನಿಖೆ ನಡೆಸುವಂತಹ ಕ್ರಮ ಇಲ್ಲಿಯೂ ಕೂಡ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(273) 04-03-2021/ 12-20/ ಕೆಹೆಚ್-ಆರ್ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಯಾರು ತಪ್ಪು ಮಾಡಿದ್ದಾರೋ, ಅವರ ಮೇಲೆ ಶಿಸ್ತು ಮತ್ತು ಕಠಿಣವಾದ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿರುತ್ತದೆ. ಇನ್ನು ಚಲನವಲನವನ್ನು ನಿಯಂತ್ರಿಸಬೇಕೆಂಬುದು ಪ್ರತ್ಯೇಕವಾದ ವಿಚಾರವಾಗಿರುವುದರಿಂದ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ಇದರ ಬಗ್ಗೆ ಏನಾದರೂ ಪ್ರಗತಿ ಪರಿಶೀಲನೆ ಮಾಡಿದ್ದಾರೆಯೇ, ಕರ್ನಾಟಕ ರಾಜ್ಯದ ಸಚಿವಾಲಯದಲ್ಲಿ 2269 ಅಧಿಕಾರಿ/ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದು, ಇದು ಡಿ.ಪಿ.ಎ.ಆರ್. ಅಡಿಯಲ್ಲಿ ಬರುತ್ತದೆ. ಇದನ್ನು ಪರಿಶೀಲನೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಸಮಯ ಇದೆಯೇ, ಇಲ್ಲಿ ಏನು ಕೆಲಸವಾಗುತ್ತಿದೆ ಎಂಬುದು ತಮಗೆ ಏನಾದರೂ ಗೊತ್ತಿದೆಯೇ, ಈ ವಿಚಾರದ ಬಗ್ಗೆ ನಾನು ಹೇಳುತ್ತಿದ್ದೇನೆ. ಬೇರೆ ಯಾರು ಹೇಳುತ್ತಿಲ್ಲ ಅಷ್ಟೇ. ವಿಧಾನಸೌಧ, ವಿಕಾಸಸೌಧ ಮತ್ತು ಎಂ.ಎಸ್.ಬಿಲ್ಡಿಂಗ್‌ನ ಕಛೇರಿಗಳಲ್ಲಿ ಹಣ ಕೊಡದೇ ಕಡತಗಳು ಮೂವ್‌ವಾಗುವುದಿಲ್ಲವೆಂಬುದು ತಮಗೆ ಗೊತ್ತಿಲ್ಲ. ಹೊಸದಾಗಿ ಆನ್‌ಲೈನ್‌ನಲ್ಲಿ ಕಡತಗಳನ್ನು ಮೂವ್ ಮಾಡುವುದನ್ನು ತರಲಾಗಿದೆ. ಆನ್‌ಲೈನ್ ಮೂಲಕ ಕಡತಗಳನ್ನು ಪಾಸ್ ಮಾಡುತ್ತಾರೆ. ಆದರೆ, ಆ ಕಡತಗಳು ಎಲ್ಲಿಗೆ ಹೋಗಿದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ, ಇವರು ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತಾರೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ದುಡ್ಡು ಕೊಟ್ಟರೆ ಕಡತ ಮೂವ್ ಆಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಾಗಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವ ಇಲಾಖೆಯಲ್ಲಿ ಹಣ ಕೊಡದೇ ಕಡತಗಳು ಮೂವ್ ಆಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಚಿವಾಲಯದಲ್ಲಿ ಪ್ರತಿಯೊಂದು ಕೆಲಸಕ್ಕೂ ಅವರ ಹಿಂದೆ ಬಿದ್ದು ಕಡತಗಳನ್ನು ಮುಂದೆ ಕಳುಹಿಸಬೇಕಾದರೆ ಬಹಳ ಶ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಪರಿಶೀಲನೆ ಮಾಡಿ, ಅವರಿಗೆ ಚುರುಕು ಮೂಡಿಸದೇ ಇದ್ದರೆ ಈ ರಾಜ್ಯದ ಪ್ರಗತಿ ಹೇಗಾಗುತ್ತದೆ?

**ಸಭಾಪತಿಯವರು:–** ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರೇ, ಮಾನ್ಯ ಸದಸ್ಯರಿಗೆ ಸ್ಪಷ್ಟವಾದ ಉತ್ತರವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಪಷ್ಟವಾದ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಹಿರಿಯ ಸದಸ್ಯರು ಕೂಡ ಇದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಈ ಪರಂಪರೆಯಿಂದ ಚಲನವಲನ ಎನ್ನುವಂತಹ ವ್ಯವಸ್ಥೆಗಳು ನಡೆಯುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಯವರ ಜೊತೆ ಚರ್ಚೆ ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳಿ. ಯಾವ ಯಾವ ಕಾಲದಿಂದ ಇದು ನಡೆದುಕೊಂಡು ಬಂದಿದೆ ಎಂಬುದು ನಮಗೆಲ್ಲಾ ಗೊತ್ತಿರುವ ವಿಷಯವಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಸದನದಲ್ಲಿ ಗಂಭೀರವಾದ ಆರೋಪಗಳನ್ನು ಗಮನದಲ್ಲಿಟ್ಟುಕೊಂಡು . . .

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇವರು ಎರಡನೇ ಸದಸ್ಯರು. ಮಾನ್ಯ ಅಡಗೂರು ಹೆಚ್.ವಿಶ್ವನಾಥ್‌ರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳುತ್ತಿದ್ದಾರೆ. ಆ ಕಡೆ, ಈ ಕಡೆ ಎಂದು ರಾಜಕಾರಣ ಹೇಳುತ್ತೀರಿ. ತಮ್ಮವರೇ ‘ಕಾಂಚಾಣಂ ಕಾರ್ಯಸಿದ್ದಿ’ ಎಂದು ಹೇಳುತ್ತಾರೆ. ಕಡತಗಳು ಮೂವ್ ಆಗಬೇಕಾದರೆ ಕಾಂಚಾಣ ಬೇಕೆಂದು ಮಾನ್ಯ ಅಡಗೂರು ಹೆಚ್.ವಿಶ್ವನಾಥ್‌ರವರು ಈಗಾಗಲೇ ಹೇಳಿದ್ದಾರೆ. ಇವತ್ತಿನ ದಿವಸ ಸದನದಲ್ಲಿ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಗಂಭೀರವಾದ ವಿಚಾರಗಳನ್ನು ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದು ಆದಷ್ಟು ಬೇಗ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಕ್ಕೆ ಮತ್ತು ಯಾವ ಯಾವ ಅಧಿಕಾರಿಗಳು ತಪ್ಪು ಮಾಡುತ್ತಿದ್ದಾರೆ. ಅವರುಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಕ್ಕೆ ಬೇಕಾಗಿರುವಂತಹ ವ್ಯವಸ್ಥೆ ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 666**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರ ಕೆಲವೊಂದು ಅಂಶಗಳ ಮೇಲೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. 2015-16ನೇ ಸಾಲಿನ ಮೂಲ ವರ್ಷವನ್ನು ಆಧಾರವಾಗಿಟ್ಟುಕೊಂಡು ಆ ವರ್ಷ ನಮ್ಮ ರಾಜ್ಯಸ್ವ ತೆರಿಗೆ ಸಂಗ್ರಹಣೆ 36144 ಕೋಟಿ ರೂಪಾಯಿಗಳು ಇತ್ತು. ತದನಂತರ ಜಿಎಸ್‌ಟಿ ಕಾಯ್ದೆ ಬಂದಿತು. ಶೇಕಡಾ 14 ರಷ್ಟು ತೆರಿಗೆ ಬೆಳವಣಿಗೆಯಾಗುತ್ತದೆ ಎಂದು projection ಕೊಟ್ಟಿರುವ ಬಗ್ಗೆ ಉತ್ತರದಲ್ಲಿಯೇ ಇದೆ. 2020-21ನೇ ಸಾಲಿಗೆ 69593 ಕೋಟಿ ರೂಪಾಯಿಗಳು ಮತ್ತು 2021-2022ನೇ ಸಾಲಿಗೆ 79336 ಕೋಟಿ ರೂಪಾಯಿಗಳಷ್ಟು ಮೊತ್ತ ಸಂಗ್ರಹಣೆ ಆಗಬೇಕು. ಒಂದು ವೇಳೆ ಶೇಕಡಾ 14 ರಷ್ಟು ತೆರಿಗೆ ಬೆಳವಣಿಗೆಯಾಗದೇ ಇದ್ದರೆ, ರಾಜ್ಯ ಸರ್ಕಾರಕ್ಕೆ GST Compensation State Act 2017 ಮತ್ತು GST Compensation Act 2017 ಅಡಿಯಲ್ಲಿ ಕೇಂದ್ರ ಸರ್ಕಾರ ನಷ್ಟ ಪರಿಹಾರ ಮತ್ತು ಪರಿಹಾರ ಸಾಲದ ರೂಪದಲ್ಲಿ ಕೊಡುತ್ತದೆ. ಇದುವರೆಗೂ ಕೂಡ ಏನೇನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿದೆ. ಇದರಲ್ಲಿ ಒಂದು ತೊಂದರೆ ಏನಾಗಿದೆ ಎಂದರೆ, ಈಗ 2022ನೇ ಸಾಲಿಗೆ GST Compensation Cess Act ಮುಗಿದು ಹೋಗುತ್ತದೆ. ಕೇಂದ್ರ ಸರ್ಕಾರ ಮುಂಬರುವ 5 ವರ್ಷಗಳಿಗೆ ವಿಸ್ತರಣೆ ಮಾಡುವುದಕ್ಕೆ ಸರ್ಕಾರಕ್ಕೆ ಏನಾದರೂ ಭರವಸೆ ಕೊಟ್ಟಿದೆಯೇ? 15ನೇ ಹಣಕಾಸು ಆಯೋಗಕ್ಕೆ ಏನಾದರೂ ಶಿಫಾರಸ್ಸು ಮಾಡಲಾಗಿದೆಯೇ? ಈ ಎರಡು ಕಾಯ್ದೆಗಳಿಗೆ ತಿದ್ದುಪಡಿ ತರದೇ ಇದ್ದರೆ ಬಹುಶಃ ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಪರಿಹಾರ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಈಗ special window system ನಲ್ಲಿ ಸಾಲವನ್ನು ಆರ್.ಬಿ.ಐ., ಮುಖೇನ ಕೇಂದ್ರ ಸರ್ಕಾರ ರಾಜ್ಯಗಳಿಗೆ ಕೊಡುತ್ತದೆ. ಇದಕ್ಕೆ back to back ಲೋನ್ ಆಗುತ್ತದೆ. ಆ ರೀತಿ ಎಂದರೆ, ಕೇಂದ್ರ ಸರ್ಕಾರ ಪಡೆದುಕೊಂಡಿರುವುದನ್ನು ರಾಜ್ಯ ಸರ್ಕಾರಗಳಿಗೆ ಕೊಡುತ್ತದೆ. ಎಲ್ಲಾ ಸಾಲ ಮತ್ತು ಬಡ್ಡಿಯನ್ನು ತೀರುವಳಿ ಮಾಡುತ್ತದೆ. ಇದರಲ್ಲಿ ಏನಾಗುತ್ತದೆಯೆಂದರೆ, ಈ Fiscal Deficit ಶೇಕಡಾ 5 ರಷ್ಟು ಸಾಲ ತೆಗೆಯುವುದಕ್ಕೆ ಅವಕಾಶ ಇರುತ್ತದೆ. ಬಹುಶಃ ಕೇಂದ್ರ ಸರ್ಕಾರ ಈ ರೀತಿ ತೆಗೆದುಕೊಟ್ಟಿರುವಂತಹ ಶೇಕಡಾ 5 ರಷ್ಟು ಸಾಲ ಮುಗಿದು ಹೋಗಿರುತ್ತದೆ. ತದನಂತರ ದಿನಗಳಲ್ಲಿ ನಮ್ಮ ಮೂಲಭೂತ ಸೌಕರ್ಯ ಮತ್ತು ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡಬೇಕಾದರೆ ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಸಾಲ ತೆಗೆಯುವುದಕ್ಕೆ ಆಗುವುದಿಲ್ಲ. ನಮ್ಮದೇ ರೀತಿಯಲ್ಲಿ ನಮ್ಮ ಸಂಪನ್ಮೂಲಗಳನ್ನು own tax and non-tax revenue ಮುಖಾಂತರ ಮಾಡಬೇಕಾಗುತ್ತದೆ. ಇದಕ್ಕೆ ಸರ್ಕಾರ ಮಾಡಿಕೊಟ್ಟಿರುವ ವ್ಯವಸ್ಥೆ ಏನು ಎಂಬುದರ ಬಗ್ಗೆ ಮಾಹಿತಿಯನ್ನು ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಕರಾರುವಕ್ಕಾಗಿ ಜಿಎಸ್‌ಟಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಕೂಡ ಉತ್ತರವನ್ನು ಈಗಾಗಲೇ ಕೊಟ್ಟಿದ್ದೇವೆ. 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ರಾಜ್ಯಕ್ಕೆ ಬಿಡುಗಡೆಯಾಗಬೇಕಾದಂತಹ ಮೊತ್ತವನ್ನು ಉಲ್ಲೇಖ ಮಾಡಿದ್ದೇವೆ. ಅದೆಲ್ಲವನ್ನೂ ಕೇಂದ್ರ ಸರ್ಕಾರ ಚುಕ್ತಾ ಮಾಡಿದೆ. 2020-21ನೇ ಸಾಲಿನಲ್ಲಿ 27292.38 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಅದರಲ್ಲಿ 15936.43 ಕೋಟಿ ರೂಪಾಯಿಗಳು ಮಾತ್ರ ಬಂದಿದೆ. ಇನ್ನು 11355.95 ಕೋಟಿ ರೂಪಾಯಿಗಳಷ್ಟು ಮೊತ್ತ ಬಾಕಿ ಇದೆ. ಕೋವಿಡ್ ಕಾರಣ ಎನ್ನುವ ಹೆಸರಿನಲ್ಲಿ ಜಿಎಸ್‌ಟಿ ನಷ್ಟ ಪರಿಹಾರವನ್ನು ಜಿಎಸ್‌ಟಿ ಸೆಸ್ ಸಂಗ್ರಹಣೆ ಮೂಲಕ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಭರಿಸುವಂತಹ ರೂಢಿ ಇದೆ. ಅದರಲ್ಲಿ ಸಾಲ ಸೌಲಭ್ಯಗಳು ಕೂಡ ಸೇರಿರುತ್ತದೆ. ಈಗ ಮುಂದಿನ ವರ್ಷಗಳಲ್ಲಿ ಸೆಸ್ ಸಂಗ್ರಹಣೆ ಮೂಲಕ ರಾಜ್ಯಗಳಿಗೆ ಭರಿಸಲಾಗುವುದೆಂದು ಕೇಂದ್ರ ಸರ್ಕಾರವು ತಿಳಿಸಿರುತ್ತದೆ. ಕೇಂದ್ರ ಸರ್ಕಾರದಿಂದ ಪರಿಹಾರ ರೂಪದಲ್ಲಿ ರಾಜ್ಯಕ್ಕೆ ನೀಡಬೇಕಾದ ಈ ಮೊತ್ತ ಏರಿಕೆಯಾಗುತ್ತಿದೆ. ಅದನ್ನು ಕೇಂದ್ರ ಸರ್ಕಾರ ಸೆಸ್ ಸಂಗ್ರಹಣೆಯಿಂದ ಭರಿಸುವಂತಹ ಒಂದು ಸಂಪ್ರದಾಯವು ಕೂಡ ಇದೆ. ಆದರೆ, 2020-21ನೇ ಸಾಲಿನಲ್ಲಿ ಕೋವಿಡ್ ಕಾರಣದಿಂದ ಒಟ್ಟಾರೆ ಕೊರತೆಯಾಗಿರುವುದರಿಂದಾಗಿ ಸೆಸ್ ಜೊತೆಗೆ ಸಾಲದ ಮೂಲಕ ಕೇಂದ್ರ ಸರ್ಕಾರ ಪರಿಹಾರವನ್ನು ಭರಿಸುತ್ತಿದೆ. ಪರಿಹಾರದ ಮೊತ್ತ ಬಂದೇ ಬರುತ್ತದೆ. ಇದರ ಬಗ್ಗೆ ಯಾವುದೇ ಗೊಂದಲಗಳು ಬೇಡ. ಕೇಂದ್ರ ಸರ್ಕಾರ ಯಾವುದೇ ಬಾಕಿಯನ್ನು ಇಟ್ಟುಕೊಳ್ಳುವುದಿಲ್ಲ. ಇನ್ನು ಸಾಕಷ್ಟು ಮಾಹಿತಿಗಳು ನಮ್ಮ ಹತ್ತಿರ ಲಭ್ಯ ಇದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಅಗತ್ಯವಿದ್ದರೆ ನಮ್ಮ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, 15ನೇ ಹಣಕಾಸು ಆಯೋಗ 2022ನೇ ಸಾಲಿಗೆ ಮುಗಿದು ಹೋಗುತ್ತದೆ. ಕೇಂದ್ರ ಸರ್ಕಾರ ಇದರ ಬಗ್ಗೆ ತಿದ್ದುಪಡಿ ಮಾಡಬೇಕು. ತಾವು ಏನಾದರೂ ಪ್ರಪೋಸಲ್ ಕಳುಹಿಸಿದ್ದರೆ ಅದರ ಬಗ್ಗೆ ಒತ್ತಾಯ ಮಾಡಬೇಕು. ತಾವು ಒತ್ತಾಯ ಮಾಡದಿದ್ದರೆ ಶೇಕಡಾ 14 ರಷ್ಟು ತೆರಿಗೆ ಸಂಗ್ರಹಣೆ ಆಗುತ್ತಿಲ್ಲ. ನಮ್ಮಲ್ಲಿರುವ ಆರ್ಥಿಕ ಕೊರತೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿದೂಗಿಸಬೇಕೆಂದರೆ ಶೇಕಡಾ 21 ರಷ್ಟು ಮತ್ತು ಶೇಕಡಾ 22 ರಷ್ಟು ಜಿಎಸ್‌ಟಿ ಸಂಗ್ರಹಣೆಯಾಗಬೇಕು. ಆ ರೀತಿಯಾಗುವುದಕ್ಕೆ ಸಾಧ್ಯ ಇಲ್ಲ. ಅದಕ್ಕೋಸ್ಕರ ಇದನ್ನು extend ಮಾಡಬೇಕು. ದಯಮಾಡಿ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಈ ಮೂಲಕ ತಿಳಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರೇ, ಆಯಿತು. ಇದನ್ನು ಸರಿದೂಗಿಸುವಂತಹ ಕೆಲಸವನ್ನು ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 701**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿನ ಕಾಫಿ ಬೆಳೆಗಾರರು ತಮ್ಮ ಕಾಫಿ ಬೆಳೆಗೆ ಸ್ಪ್ರಿಂಕ್ಲರ್ ಮಾಡಲು ವರ್ಷದಲ್ಲಿ 3 ತಿಂಗಳು ಮಾತ್ರ ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ ಇಡೀ ವರ್ಷಕ್ಕೆ ಅನ್ವಯಿಸುವಂತೆ ಕನಿಷ್ಠ ದರ ನಿಗದಿ ಮಾಡಿ ಹಣ ವಸೂಲಿ ಮಾಡುತ್ತಿರುವುದರಿಂದ, ಈಗಾಗಲೇ ನಷ್ಟದಲ್ಲಿರುವ ಕಾಫಿ ಬೆಳೆಗಾರರು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಮಾನ್ಯ ಸಚಿವರು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿದ್ದು, ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಉತ್ತರವನ್ನು ಒದಗಿಸಿದ್ದಾರೆ. ಇವತ್ತಿನ ದಿವಸ ಕಾಫಿ ಬೆಳೆಗಾರರ ಪರಿಸ್ಥಿತಿ ಏನಾಗಿದೆ ಎಂಬುದು ಎಲ್ಲರಿಗೂ ಸಹ ಗೊತ್ತಿದೆ. ನಾನು ಕೊಡಗು ಜಿಲ್ಲೆಯ ಬಗ್ಗೆ ಮಾತನಾಡುವುದಾದರೆ, ಅಕಾಲಿಕ ಮಳೆ ಬಂದಂತಹ ಸಂದರ್ಭದಲ್ಲಿ ಮತ್ತು ಇದರ ಜೊತೆಗೆ ಕಾಡಾನೆ, ನರಿಯ ಉಪಟಳದಿಂದ ಅಲ್ಲಿನ ಕಾರ್ಮಿಕರು ಕೂಡ ಕೊಡಗು ಜಿಲ್ಲೆಯಲ್ಲಿ ವಾಸ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಅಂತಹ ಒಂದು ಪರಿಸ್ಥಿತಿ ಇದೆ. ಜೊತೆಗೆ ಕೇವಲ ಎರಡು ತಿಂಗಳು ಮಾತ್ರ ಕಾಫಿ ಬೆಳೆಗಾರರು ಪಂಪ್‌ಸೆಟ್‌ಗಳನ್ನು ಉಪಯೋಗ ಮಾಡುತ್ತಾರೆ. ಆದರೆ, ಇಡೀ ವರ್ಷ ಅದರ ಕನಿಷ್ಠ ಶುಲ್ಕವನ್ನು ಕಟ್ಟಬೇಕಾಗುತ್ತದೆ. ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 10 ಹೆಚ್‌ಪಿ ಪಂಪ್‌ಸೆಟ್ ಒಳಗಡೆ ಇರುವ ಇತರೆ ಎಲ್ಲಾ ಬೆಳೆಗಳಿಗೂ ಕೂಡ ಉಚಿತ ವಿದ್ಯುತ್‌ಚ್ಛಕ್ತಿ ನೀಡುತ್ತಿದ್ದು, ಇದರಿಂದ ಕಾಫಿ ಬೆಳೆಗಾರರನ್ನು ಹೊರದೂಡಲ್ಪಟ್ಟಿದೆ. ಇದರಿಂದ ಕಾಫಿ ಬೆಳೆಗಾರರಿಗೆ ಅನ್ಯಾಯವಾಗುವ ವಿಚಾರ ನಿಜವಾಗಿಯೂ ಸರ್ಕಾರದ ಗಮನಕ್ಕೆ ಬರುವುದಿಲ್ಲವೇ ಎಂಬ ಪ್ರಶ್ನೆಯನ್ನು ಕೂಡ ನಾನು ಕೇಳಬೇಕಾಗುತ್ತದೆ. ರಾಜ್ಯದಲ್ಲಿ ಸುಮಾರು 30 ಲಕ್ಷ IP Set ಗಳಿಗೆ ಉಚಿತ ವಿದ್ಯುತ್ ನೀಡುತ್ತಿದ್ದು, ಕೇವಲ 10 ಸಾವಿರ ಪಂಪ್‌ಸೆಟ್‌ಗಳಿಗೆ ಮಾತ್ರ ತಾರತಮ್ಯವಾಗುತ್ತಿದೆ ಈ ಅಂಶವು ಕೂಡ ಸರ್ಕಾರದ ಗಮನಕ್ಕೆ ಬರುವುದಿಲ್ಲವೇ ಎಂಬ ಮಾತನ್ನು ಕೂಡ ನಾನು ಕೇಳುತ್ತಿದ್ದೇನೆ. ಇತ್ತೀಚೆಗೆ ಕೊಡಗು ಜಿಲ್ಲೆಯಲ್ಲಿ ಆದಂತಹ ಅನಾಹುತಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ತಾವು ನೋಡಿರಬಹುದು. ಸುಮಾರು 15 ದಿವಸಗಳ ಹಿಂದೆ ಹುಲಿಯ ಹಾವಳಿಯಿಂದ ಇಬ್ಬರು ಕಾರ್ಮಿಕರ ಜೀವ ಹೋಗಿದೆ. ಇದರ ಜೊತೆಗೆ ಆನೆಯ ಉಪಟಳದಿಂದ ಅಲ್ಲಿಯ ಪರಿಸ್ಥಿತಿ ವಿಚಿತ್ರವಾಗಿದೆ. ಆದರೂ ಕೂಡ ನನಗೆ ಅಸಮಾಧಾನ ಏನೆಂದರೆ, ಕೊಡಗು ಜಿಲ್ಲೆಯಲ್ಲಿ ಆ ರೀತಿಯ ಅನಾಹುತಗಳು ಆಗುತ್ತಿದ್ದರೂ ಕೂಡ ಮತ್ತು ಈ ಅರಣ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯ ಸಿಬ್ಬಂದಿಗಳು ಕೆಲಸ ಮಾಡಿದ್ದರೂ ಕೂಡ ಮಾನ್ಯ ಅರಣ್ಯ ಸಚಿವರು ಒಂದು ಬಾರಿಯೂ ಕೂಡ ಕೊಡಗು ಜಿಲ್ಲೆಗೆ ಭೇಟಿ ಕೊಟ್ಟಿಲ್ಲ.

(ಮುಂದು)

**(274) 04/03/2021/ಎಸ್‌ಪಿಆರ್/ಆರ್‌ಎನ್/12:30**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ಮುಂದು):-**
ಅವರಿಗೆ ಸಾಂತ್ವನ ಹೇಳುವ ಪರಿಸ್ಥಿತಿಯಲ್ಲಿಯೂ ಸಹ ಸರ್ಕಾರವು ಇಲ್ಲವೆಂದರೆ ಅದು ತುಂಬಾ ಅನ್ಯಾಯವಾಗುತ್ತದೆ. ಹೀಗಾಗಿ ಇವತ್ತಿನ ದಿವಸ ಕೊಡಗಿನಲ್ಲಿರುವ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರವು ಲಿಖಿತ ಉತ್ತರದಲ್ಲಿ 'ರಾಜ್ಯ ಸರ್ಕಾರವು 2020-21 ನೇ ಸಾಲಿನ ಆಯವ್ಯಯದ ಕಂಡಿಕೆ – 197 ರಲ್ಲಿ ಸಣ್ಣ ಮತ್ತು ಮಧ್ಯಮ ಕಾಫಿ ಮತ್ತು ಟೀ ಬೆಳೆಗಾರರ 10 ಹೆಚ್.ಪಿ. ವರೆಗಿನ ಪಂಪ್‌ಸೆಟ್ಟುಗಳ ವಿದ್ಯುತ್ ಶುಲ್ಕವನ್ನು ಮರುಪಾವತಿಸಲು ಒಂದು ಯೋಜನೆಯನ್ನು ರೂಪಿಸಲಾಗುವುದು ಎಂದು ಘೋಷಿಸಲಾಗಿದೆ. ಆದರೆ ರಾಜ್ಯದಲ್ಲಿ ಕೋವಿಡ್-19 ನಿಂದ ಉಂಟಾಗಿರುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸಲು ವೆಚ್ಚ ಬಾಬ್ತಿನಲ್ಲಿ ಮಿತವ್ಯಯವನ್ನು ಪಾಲಿಸುವುದು ಅನಿವಾರ್ಯವಾಗಿದೆ ಮತ್ತು ಈಗಾಗಲೇ ರೈತರಿಗೆ ಪಿ.ಎಂ.ಕೆ.ಎಸ್.ವೈ. ನಂತಹ ಹಲವು ಯೋಜನೆಗಳನ್ನು ಘೋಷಿಸಲಾಗಿರುವುದರಿಂದ ಸದರಿ ಘೋಷಣೆಯನ್ನು ಕೈಬಿಡಲಾಗಿರುತ್ತದೆ' ಎಂಬುದಾಗಿ ತಿಳಿಸಿದೆ. ಇದು ಯಾವ ರೀತಿಯ ನ್ಯಾಯವೆಂದು ನಾನು ಸರ್ಕಾರವನ್ನು ಕೇಳುತ್ತೇನೆ. ಕಾಫಿ ಬೆಳೆಗಾರರು ರಾಜ್ಯ ಸರ್ಕಾರಕ್ಕೆ ಯಾವ ಅನ್ಯಾಯವನ್ನು ಮಾಡಿದ್ದಾರೆ? ಯಾವುದೇ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದರೂ ಸಹಾ ಕಾಫಿ ಬೆಳೆಗಾರರ ನೆರವಿಗೆ ಬಂದಿರುವುದಿಲ್ಲ. ಕಾಫಿ ಬೆಳೆಗಾರರು ತುಂಬಾ ಕಷ್ಟದಲ್ಲಿದ್ದಾರೆ. ಹೀಗಾಗಿ ಸರ್ಕಾರವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಿತ ಒಟ್ಟು ಯೋಜನೆ ಏನೆಂದರೆ, ಕಾಫಿ ಬೆಳೆಗಾರರು ಸಿಂಪರಣೆಯ ಮೂಲಕ ಮೂರು ತಿಂಗಳುಗಳ ಕಾಲ ಮಾತ್ರವೇ ಪಂಪ್‌ಸೆಟ್‌ಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಗಿಸುತ್ತಾರೆ. ಇತರೆ ಬೆಳೆಗಾರರಂತೆ ಇವರಿಗೂ ಸಹ 10 ಹೆಚ್‌ಪಿ ಒಳಗಿನ ಪಂಪ್‌ಸೆಟ್ಟುಗಳ ವಿದ್ಯುತ್ ಶುಲ್ಕದ ರಿಯಾಯಿತಿಯನ್ನು ಕೊಡಬೇಕೆನ್ನುವುದು ವಾದವಾಗಿತ್ತು. 2020-21 ನೇ ಸಾಲಿನ ಆಯವ್ಯಯದ ಕಂಡಿಕೆ – 197 ರಲ್ಲಿ ಸಣ್ಣ ಮತ್ತು ಮಧ್ಯಮ ಕಾಫಿ ಮತ್ತು ಟೀ ಬೆಳೆಗಾರರ 10 ಹೆಚ್.ಪಿ.ವರೆಗಿನ ಪಂಪ್‌ಸೆಟ್ಟುಗಳ ವಿದ್ಯುತ್ ಶುಲ್ಕವನ್ನು ಮರುಪಾವತಿಸಲು ಒಂದು ಯೋಜನೆಯನ್ನು ರೂಪಿಸಲಾಗುವುದು ಎಂದು ಘೋಷಿಸಲಾಗಿತ್ತು. ಆದರೆ, ಕೋವಿಡ್-19 ನಿಂದಾಗಿ ಉಂಟಾದ ಆರ್ಥಿಕ ಹಿನ್ನಡೆಯಿಂದಾಗಿ ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರಲಿಲ್ಲ. ಈ ಅಂಶವನ್ನೂ ಸಹ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶವನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಗಮನಕ್ಕೆ ತರುವ ಪ್ರಯತ್ನಗಳನ್ನು ಮಾಡುತ್ತೇವೆ. ಕಳೆದ ಬಾರಿಯ ಆಯವ್ಯಯದಲ್ಲಿ ಘೋಷಿಸಿದಂತೆ ಪ್ರಶ್ನಿತ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಿದೆಯೇ ಎಂದು ಸದಸ್ಯರು ಕೇಳಿದ್ದು, ಇದನ್ನು ಪರಿಶೀಲಿಸಲಾಗುವುದು.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ, ಸರ್ಕಾರವು ಲಿಖಿತ ಉತ್ತರದಲ್ಲಿ 'ರಾಜ್ಯದಲ್ಲಿನ ಎಲ್ಲಾ ವಿದ್ಯುತ್ ಗ್ರಾಹಕರು ಬಳಸುವ ವಿವಿಧ ರೀತಿಯ ವಿದ್ಯುತ್ ಬಳಕೆಗೆ ಜಕಾತಿಗಳನ್ನು ನಿಗದಿಪಡಿಸಿ ವಿದ್ಯುತ್ ದರಗಳನ್ನು ನಿಗದಿಪಡಿಸುವುದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿದ್ದು, ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ' ಎಂಬುದಾಗಿ ತಿಳಿಸಿದೆ. ಅಂದರೆ, ಆಯೋಗದವರು ಏನು ಮಾಡುತ್ತಿದ್ದಾರೆ? ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಕೊಡಗು ಜಿಲ್ಲೆಯಲ್ಲಿ ಬಹಳಷ್ಟು ಪಂಪ್‌ಸೆಟ್ಟುಗಳಿವೆ. ಅದರ ಬಗ್ಗೆ ಸರ್ಕಾರವು ನೇರವಾಗಿ ಹೊಣೆಯನ್ನು ಹೊರದೇ ಇರುವುದರಿಂದ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಡುವುದರಿಂದ ತುಂಬಾ ಅನ್ಯಾಯವಾಗುತ್ತಿದೆ. ಹೀಗಾಗಿ ಜಿಲ್ಲೆಯ ಉಸ್ತುವಾರಿ ಸಚಿವರನ್ನೊಳಗೊಂಡಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರೊಂದಿಗೆ ಸಭೆಯನ್ನು ಕರೆಯಬೇಕಾಗಿರುತ್ತದೆ. ಈ ವಿಚಾರದಲ್ಲಿ ನನಗೆ ಆದ ಅನುಭವವನ್ನು ಇಲ್ಲಿ ಹೇಳಲಿಚ್ಛಿಸುವುದಿಲ್ಲ. ಅಲ್ಲಿ ಕೇವಲ 10, 20 ಹೆಚ್.ಪಿ. ಪಂಪ್‌ಸೆಟ್ಟುಗಳಿದ್ದರೂ ಸಹ 30 ಹೆಚ್.ಪಿ. ಪಂಪ್‌ಸೆಟ್ಟು ಇದೆ ಎಂದು ಹೇಳುತ್ತಾರೆ. ಈ ಹಿಂದೆ 2018-19 ನೇ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ ಭೀಕರವಾದ ಪ್ರವಾಹವುಂಟಾಗಿತ್ತು. ಇದರಿಂದಾಗಿ ನಾವು ಒಂದೆರೆಡು ವರ್ಷಗಳ ಕಾಲ ಪಂಪ್‌ಸೆಟ್ಟುಗಳನ್ನು ಉಪಯೋಗಿಸಿಕೊಳ್ಳುವುದಕ್ಕಾಗಿಲ್ಲ. ಇದಕ್ಕೆ 5-7 ಲಕ್ಷ ರೂಪಾಯಿಗಳವರೆಗೆ ಕನಿಷ್ಠ ಶುಲ್ಕವನ್ನು ವಿಧಿಸಿದ್ದಾರೆ. ಇದರ ಬಗ್ಗೆ ನಾವು ಯಾರನ್ನು ಕೇಳಬೇಕು? ಈ ಕಾರಣಕ್ಕಾಗಿ ಈ ಅಂಶದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಕಾಫಿ ಬೆಳೆಗಾರರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಿಯಂತ್ರಣ ಆಯೋಗದವರ ಸಭೆಯನ್ನು ಏರ್ಪಡಿಸುವುದಕ್ಕೆ ಸರ್ಕಾರವು ಕ್ರಮ ವಹಿಸಿಬೇಕೆಂದು ನಾನು ಹೇಳುತ್ತೇನೆ.

**ಸಭಾಪತಿಯವರು:–** ಸಭಾನಾಯಕರೇ, ಸದಸ್ಯರು ಹೇಳುವ ವಿಚಾರದಲ್ಲಿ ನ್ಯಾಯವಿದೆ. ಹೀಗಾಗಿ ಈ ವಿಚಾರವನ್ನು ಪರಿಶೀಲಿಸಿ, ಸಭೆ ಕರೆದು ತೀರ್ಮಾನ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಅಭಿಪ್ರಾಯದಂತೆ ಜಿಲ್ಲಾ ಉಸ್ತುವಾರಿ ಸಚಿವರ ಸಮಕ್ಷಮದಲ್ಲಿ ಸಭೆಯನ್ನು ಕರೆಯುವ ಏರ್ಪಾಡು ಮಾಡಲಾಗುವುದು.

**ಸಭಾಪತಿಯವರು:–** ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 04ನೇ ಮಾರ್ಚ್ 2021, ಗುರುವಾರದಂದು ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 92 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

**(ಉತ್ತರಗಳನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ) ವಿಷಯ:- ಗದಗ ಜಿಲ್ಲೆಯಲ್ಲಿನ ಪಶು ಚಿಕಿತ್ಸಾಲಯಕ್ಕೆ ಪಶು ವೈದ್ಯರ ಕೊರತೆಯಿಂದ ಚಿಕಿತ್ಸಾಲಯದಲ್ಲಿ ಪಶುಗಳ ಚಿಕಿತ್ಸೆಗೆ ತೊಂದರೆಯಾಗಿರುವ ಬಗ್ಗೆ**

* * *

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯಲ್ಲಿ ಪಶು ಚಿಕಿತ್ಸಾಲಯಕ್ಕೆ ವೈದ್ಯರ ಬರ ಮತ್ತು ಖಾಲಿ ಹುದ್ದೆ ಭರ್ತಿಗೆ ಸರ್ಕಾರದ ನಿರಾಸಕ್ತಿ ಮುಂತಾದ ತಲೆಬರಹದಡಿ ವಿಜಯವಾಣಿ, ಪ್ರಜಾವಾಣಿ ಮುಂತಾದ ದಿನಪತ್ರಿಕೆಗಳಲ್ಲಿ ವರದಿಯಾಗಿರುವ ಮಾಹಿತಿಯನ್ನು ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಗದಗ ಜಿಲ್ಲೆಯಲ್ಲಿ ಒಟ್ಟು 88 ಪಶು ಆಸ್ಪತ್ರೆಗಳು ಹಾಗೂ ಪಶು ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಈ ಆಸ್ಪತ್ರೆಗಳಿಗೆ ಪಶು ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ಒಟ್ಟು 384 ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 135 ಹುದ್ದೆಗಳು ಮಾತ್ರವೇ ಭರ್ತಿಯಾಗಿದ್ದು, 249 ಹುದ್ದೆಗಳು ಖಾಲಿ ಇರುತ್ತವೆ. ಪಶು ಆಸ್ಪತ್ರೆಗಳಲ್ಲಿ ಶೇಕಡ 70 ರಷ್ಟು ಹುದ್ದೆಗಳು ಖಾಲಿ ಇರುವುದರಿಂದ ಜಾನುವಾರುಗಳ ಚಿಕಿತ್ಸೆಗೆ ಸಿಬ್ಬಂದಿ ಕೊರತೆಯಿಂದ ಸೂಕ್ತ ಚಿಕಿತ್ಸೆ ಲಭಿಸುತ್ತಿಲ್ಲ, ಇದರಿಂದಾಗಿ ಜಿಲ್ಲೆಯಲ್ಲಿ ಅನೇಕ ರೈತರು ತಮ್ಮ ಜಾನುವಾರುಗಳನ್ನು ಕಳೆದುಕೊಂಡಿರುವ ಘಟನೆಗಳು ನಡೆದಿವೆ.

ಪಶು ಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇದ್ದರೂ ಕೂಡ ಪಶು ವೈದ್ಯರಾಗಿ ನೇಮಕಗೊಂಡ ವೈದ್ಯರುಗಳನ್ನು ಜಿಲ್ಲೆಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನಾಗಿ ನಿಯೋಜನೆ ಮಾಡಿದ್ದು, ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ನಿಯೋಜನೆಗೊಂಡಂತಹ ಪಶು ವೈದ್ಯರನ್ನು ಪುನಃ ಮಾತೃ ಇಲಾಖೆಗೆ ವಾಪಸ್ಸು ಕರೆಸಿಕೊಳ್ಳಲು ರೈತರು ಒತ್ತಾಯಿಸಿರುತ್ತಾರೆ. ಒಟ್ಟಾರೆ ಪಶುಸಂಗೋಪನೆ ಇಲಾಖೆಯಲ್ಲಿ ಖಾಲಿ ಇರುವ ಪಶು ವೈದ್ಯರ, ಜಾನುವಾರು ಅಭಿವೃದ್ಧಿ ಅಧಿಕಾರಿಗಳ, ಪಶು ವೈದ್ಯಕೀಯ ಪರೀಕ್ಷಕರ ಮುಂತಾದ ಹುದ್ದೆಗಳನ್ನು ಸರ್ಕಾರ ಕೂಡಲೇ ತುಂಬಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಪಶು ವೈದ್ಯರನ್ನು ಮತ್ತೊಂದು ಇಲಾಖೆಗೆ ನಿಯೋಜನೆ ಮಾಡಿರುವುದನ್ನು ತಕ್ಷಣ ರದ್ದುಪಡಿಸಿ ಮಾತೃ ಇಲಾಖೆಗೆ ವಾಪಸ್ಸು ಕರೆಸಿಕೊಳ್ಳಲು ಕ್ರಮ ಜರುಗಿಸಲು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಪಶುಸಂಗೋಪನೆ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಪ್ರಶ್ನೆಗಳಿಗೆ ಸರ್ಕಾರವು ಎರಡು ದಿನಗಳಲ್ಲಿಯೇ ಉತ್ತರವನ್ನು ಒದಗಿಸಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:- ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಬಗ್ಗೆ**

* * *

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದರು):-** ಮಾನ್ಯ ಸಭಾಪತಿಯವರೇ, ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಕುರಿತು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಭಾರತೀಯ ಭಾಷಾ ಸಂಸ್ಥಾನವನ್ನೇ ಭಾರತೀಯ ಭಾಷಾ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸುವ ಮೂಲಕ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಭಾರತೀಯ ಭಾಷಾ ವಿಶ್ವವಿದ್ಯಾಲಯದ ಒಂದು ಭಾಗವನ್ನಾಗಿ ಮಾಡಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ವ್ಯಾಪ್ತಿಯನ್ನು ಕುಗ್ಗಿಸುವ ಪ್ರಯತ್ನವಾಗುತ್ತಿರುವುದು ಕನ್ನಡ ಭಾಷಿಗರಿಗೆ ಆದ ಆಘಾತವೇ ಸರಿ. ಸಂಸ್ಕೃತ, ತಮಿಳು, ತೆಲುಗು, ಕನ್ನಡ, ಮಲಯಾಳಂ ಮತ್ತು ಒಡಿಯಾ ಭಾಷೆಗಳು ಮಾತ್ರವೇ ಇದುವರೆಗೆ ಶಾಸ್ತ್ರೀಯ ಸ್ಥಾನ ಮಾನವನ್ನು ಪಡೆದಿವೆ. ಅದರಲ್ಲಿ ತಮಿಳು ಶಾಸ್ತ್ರೀಯ ಅತ್ಯುನ್ನತ ಅಧ್ಯಯನ ಕೇಂದ್ರ ಮಾತ್ರವೇ ಸ್ವಾಯತ್ತ ಸಂಸ್ಥೆಯಾಗಿ ಚೆನ್ನೈನಲ್ಲಿ ಕಾರ್ಯನಿರ್ವಹಿಸುತ್ತದೆ. 2500 ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತು 12 ವರ್ಷಗಳೇ ಕಳೆದರೂ ಇಲ್ಲಿಯವರೆಗೂ ಸ್ವಾಯತ್ತತೆ ಇಲ್ಲದೆ ಭಾರತೀಯ ಭಾಷಾ ಸಂಸ್ಥಾನದ ನೆರಳಿನಲ್ಲೇ ಇರುವಂತಾಗಿದೆ. ತಮಿಳು ಭಾಷೆಗೆ ಸ್ವಾಯತ್ತತೆ ದೊರೆತಿರುವುದರಿಂದ ತಮಿಳಿಗೆ ಕೇಂದ್ರ ಸರ್ಕಾರ 25.04 ಕೋಟಿ ರೂಪಾಯಿಗಳ ಅನುದಾನ ನೀಡಿದ್ದು, ಕನ್ನಡ ಭಾಷಾ ಅಭಿವೃದ್ಧಿಗೆ ಕೇವಲ 3.06 ಕೋಟಿ ರೂಪಾಯಿಗಳ ಅನುದಾನ ನೀಡಿರುವುದಾಗಿದೆ. ಸ್ವಾಯತ್ತ ಸ್ಥಾನಮಾನ ಪಡೆಯಲು ಮೈಸೂರು ವಿ.ವಿ.ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಒಂದು ಕಟ್ಟಡ ಹಾಗೂ 4 ಎಕರೆ ಭೂಮಿಯನ್ನು ನೀಡಿದೆ. ಅಲ್ಲದೇ ಭಾರತೀಯ ಭಾಷಾ ಸಂಸ್ಥಾನದ ಕಛೇರಿ ಕೂಡ ನಮ್ಮ ರಾಜ್ಯದ ಮೈಸೂರಿನಲ್ಲೇ ಇರುವುದಾಗಿದೆ. ಈ ಎಲ್ಲಾ ಅಂಶಗಳನ್ನು ಹಾಗೂ ಕನ್ನಡ ಭಾಷೆಯ ಇತಿಹಾಸ ಮತ್ತು ವಿವಿಧತೆಯನ್ನು ಗಮನಿಸಿ ಕನ್ನಡವನ್ನೂ ಸಹ ಸ್ವಾಯತ್ತಗೊಳಿಸಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನ ಪಡೆದುಕೊಳ್ಳುವ ಮೂಲಕ ಕನ್ನಡ ಭಾಷೆಯನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಮಂಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಕಾರ್ಯದರ್ಶಿಯವರ ವರದಿ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಶೂನ್ಯವೇಳೆ ಪ್ರಸ್ತಾವನೆಯನ್ನು ಕೈಗೆತ್ತಿಕೊಂಡಿಲ್ಲ.

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ. ನೀವು ನನ್ನೊಂದಿಗೆ ಚರ್ಚೆ ಮಾಡಿ. ಆಗ ನಾನು ನಿಮಗೆ ಹೇಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಅದನ್ನು ಈಗ ತೆಗೆದುಕೊಳ್ಳಿ.

**ಸಭಾಪತಿಯವರು:-** ಅದನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ನೀಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ನನಗೆ ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಅದರ ಬಗ್ಗೆ ನಾನು ನಿಮಗೆ ಹೇಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ಅಥವಾ ಹಿಂದುಳಿದ ವರ್ಗದ ಕವಿ ಏನಾದರೂ ಈ ರೀತಿಯಾಗಿ ಮಾತನಾಡಿದ್ದರೆ, ನೀವು ಇದಕ್ಕೆ ಬೇರೆ ರೀತಿಯಾಗಿ ಅರ್ಥವನ್ನು ಕೊಡುತ್ತಿದ್ದೀರಿ.

**ಸಭಾಪತಿಯವರು:-** ನೀವು ಎಲ್ಲಾ ತಿಳುವಳಿಕೆಯನ್ನು ಹೊಂದಿದ್ದೀರಿ. ಈ ವಿಚಾರದಲ್ಲಿ ನಾನು ನಿಮಗೆ ಹೇಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಸಮುದಾಯಕ್ಕೆ ಗೌರವವನ್ನು ತರದೇ ಇರುವ ಒಬ್ಬ ಕವಿ ಇಂತಹ ಹೇಳಿಕೆಗಳನ್ನು ನೀಡಿದಾಗ . . .

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆಯನ್ನು ಮಾಡಬೇಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾವು ಮಾತನಾಡುವುದಕ್ಕೆ ನೀವು ಬಿಡುತ್ತಿಲ್ಲ ಎಂದರೆ ಏನರ್ಥ? ಇದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಇದರ ಬಗ್ಗೆ ನೀವು ನನ್ನೊಂದಿಗೆ ಮಾತನಾಡಿ. ಆಗ ನಾನು ಹೇಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಏಕೆ ತೆಗೆದುಕೊಳ್ಳುತ್ತಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ನೀವು pick and choose ಮಾಡುತ್ತಿದ್ದೀರಿ.

**ಸಭಾಪತಿಯವರು:-** ಇದರ ಬಗ್ಗೆ ನಾನು ನಿಮಗೆ ಹೇಳುತ್ತೇನೆ. ಇದನ್ನು ಒಪ್ಪಿದರೆ ಮುಗಿಯಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಿಮ್ಮ ಕೊಠಡಿಯಲ್ಲಿ ಮಾತನಾಡೋಣ. ಆದರೆ ಇದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಏಕೆ ಆಗುತ್ತಿಲ್ಲ?

**ಸಭಾಪತಿಯವರು:-** ನೀವು ನನ್ನ ಮಾತನ್ನು ಒಪ್ಪಿದರೆ, ನಾನು ಹೇಳುತ್ತೇನೆ. ಹೀಗಾಗಿ ನೀವು ನನ್ನೊಂದಿಗೆ ಮಾತನಾಡಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಬಿಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ಮನವಿಯನ್ನು ನೀಡಿದ್ದೇನೆ.

**ಸಭಾಪತಿಯವರು:-** ಕಾರ್ಯದರ್ಶಿಯವರೇ, ತಾವು ಮುಂದುವರೆಸಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ದಯಮಾಡಿ ನನ್ನ ಪ್ರಸ್ತಾವನೆಯನ್ನು ತೆಗೆದುಕೊಳ್ಳಿ. ನಾನು ಮನವಿಯನ್ನು ನೀಡಿದ್ದೇನೆ.

**ಸಭಾಪತಿಯವರು:-** ಈ ಹಂತದಲ್ಲಿ ಸದಸ್ಯರು ಮಾತನಾಡುವುದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಮಾತನಾಡಿದ್ದು ಕಡತಕ್ಕೆ ಹೋಗಬಾರದೆಂದು ಸಭಾಪತಿಯವರು ತಿಳಿಸಿದ್ದರಿಂದ ಯಾವುದನ್ನೂ ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ:

ಘನತೆವೆತ್ತ ರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ

ವಿಧಾನ ಸಭೆಯ ವಿಧೇಯಕಗಳು

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1. | ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020<br>The Karnataka Prevention of Slaughter and Preservation of Cattle Bill, 2020 | 12.02.2021 | ರಾಜ್ಯಪಾಲರು |
| 2. | ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020<br>The Karnataka Protection of Interest of Depositors in Financial Establishments (Amendment) Bill, 2020 | 17.02.2021 | ರಾಜ್ಯಪಾಲರು |
| 3. | ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021<br>The Karnataka Municipalities and Certain Other Law (Amendment) Bill, 2021 | 17.02.2021 | ರಾಜ್ಯಪಾಲರು |
| 4. | ಕರ್ನಾಟಕ ಪೌರಸಭೆಗಳು (ಎರಡನೇ ತಿದ್ದುಪಡಿ) ವಿಧೇಯಕ, 2021<br>The Karnataka Municipalities (Second Amendment) Bill, 2021 | 17.02.2021 | ರಾಜ್ಯಪಾಲರು |

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

| | | | |
|---|---|---|---|
| 5. | ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2021<br>The Karnataka Municipalities Corporations (Amendment) Bill, 2021 | 17.02.2021 | ರಾಜ್ಯಪಾಲರು |
| 6. | ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020<br>The Karnataka Epidemic Diseases (Amendment) Bill, 2020 | 17.02.2021 | ರಾಜ್ಯಪಾಲರು |
| 7. | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Shops and Commercial Establishments (Second Amendment) Bill, 2020 | 17.02.2021 | ರಾಜ್ಯಪಾಲರು |
| 8. | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Motor Vehicles Taxation (Second Amendment) Bill, 2020 | 20.02.2021 | ರಾಜ್ಯಪಾಲರು |

**ಸಭಾಪತಿಯವರು:–** ಮಂಡಿಸಲಾಯಿತು. ಈಗ ಮಾನ್ಯ ಶ್ರೀಕಂಠೇಗೌಡರು, ಶ್ರೀ ಮರಿತಿಬ್ಬೇಗೌಡರು ಹಾಗೂ ಮಾನ್ಯ ಪುಟ್ಟಣ್ಣನವರುಗಳು ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(275)04-03-2021(12-40)ಬಿಎಸ್‌ಡಿ-ವಿಕೆ

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಗೌರವ ಕೊಡಿ.

**ಸಭಾಪತಿಯವರು:–** ನಾನು ಅದರ ಬಗ್ಗೆ ಹೇಳುತ್ತೇನೆ. ನಾನು ಹೇಳುತ್ತಿದ್ದರೂ ತಾವು ಕೇಳುವುದಿಲ್ಲ ಎಂದರೆ ಏನು ಹೇಳಬೇಕು. ಇದರ ಬಗ್ಗೆ ಮಾತನಾಡಿ, ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ಪ್ರಕಟಣೆಗಳು

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ ೯ರ ಮೇರೆಗೆ ಮಾನ್ಯ ಸಭಾಪತಿಯವರ ಹಾಗೂ ಮಾನ್ಯ ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಈ ಕೆಳಗಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

1) ಶ್ರೀ ಕೆ.ಸಿ. ಕೊಂಡಯ್ಯ
2) ಶ್ರೀ ಅಡಗೂರು ಹೆಚ್ ವಿಶ್ವನಾಥ್
3) ಶ್ರೀ ಮರಿತಿಬ್ಬೇಗೌಡ
4) ಶ್ರೀ ಪುಟ್ಟಣ್ಣ

ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಹೆಸರು ಈ ಕೆಳಕಂಡಂತಿರುತ್ತದೆ.

1) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
2) ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು)
3) ಶ್ರೀ ಆರ್. ಅಶೋಕ್ (ಕಂದಾಯ ಸಚಿವರು)
4) ಶ್ರೀ ಉಮೇಶ್ ವಿ. ಕತ್ತಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)
5) ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು)
6) ಶ್ರೀ ಆರ್. ಶಂಕರ್ (ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)
7) ಶ್ರೀ ಶ್ರೀಮಂತ್ ಬಾಳಾ ಸಾಹೇಬ್ ಪಾಟೀಲ್ (ಜವಳಿ ಸಚಿವರು)
8) ಶ್ರೀ ಆನಂದ್ ಸಿಂಗ್ (ಮೂಲಭೂತ ಸೌಲಭ್ಯಗಳ ಮಂತ್ರಿಗಳು)

ಸದನದಲ್ಲಿ ಬೆಳಗ್ಗೆ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳ ಹೆಸರು ಈ ಕೆಳಕಂಡಂತಿರುತ್ತದೆ.

1) ಶ್ರೀ ರಾಜೇಂದ್ರ ಚೋಳನ್, ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಶ್ರೀ ರಣದೀಪ್, ಐಎಎಸ್., ವಿಶೇಷ ಆಯುಕ್ತರು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3) ಶ್ರೀ ಶೇಖರ್, ಉಪ ಕಾರ್ಯದರ್ಶಿ (ಆಡಳಿತ), ಶಿಕ್ಷಣ ಇಲಾಖೆ

4) ಶ್ರೀಮತಿ ಶಬನಾ, ಶಾಖಾಧಿಕಾರಿ, ವೈದ್ಯಕೀಯ ಶಿಕ್ಷಣ ಇಲಾಖೆ

ಸದನದಲ್ಲಿ ಮಧ್ಯಾಹ್ನ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳ ಹೆಸರು ಈ ಕೆಳಕಂಡಂತಿರುತ್ತದೆ.

1) ಶ್ರೀ ಉಮೇಶ್ ಕುಮಾರ್, ಐಪಿಎಸ್

2) ಶ್ರೀಮತಿ ಎಸ್. ಮಂಜುಳ

3) ಶ್ರೀ ಎಸ್.ವಿ. ಪ್ರಶಾಂತ್ ಕುಮಾರ್

4) ಶ್ರೀಮತಿ ಜಯಲಕ್ಷ್ಮಿ

ನಾನು ಪ್ರಸ್ತಾಪಿಸಿದ ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಬೆಳಗ್ಗೆ ಹಾಜರಿರಬೇಕಾದ ಅಧಿಕಾರಿಗಳ ಹೆಸರುಗಳನ್ನು ಪ್ರಸ್ತಾಪಿಸಿದ್ದು, ಒಬ್ಬರೂ ಹಾಜರಿಲ್ಲ. Intimation ಕೊಟ್ಟಿಲ್ಲವೇ?

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಿಡುತ್ತಿಲ್ಲ ಎಂದರೆ ಇದೇನು ಸಭೆ, ನನಗೇನೂ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:–** ನಾನು ಮೊದಲು ಹೇಳುವ ವಿಚಾರ ಕೇಳಿ. ನಾನು ಹೇಳಿದ ಅಧಿಕಾರಿಗಳು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು, ಇಲ್ಲದಿದ್ದರೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸಚಿವರೆಲ್ಲರೂ ಕಡ್ಡಾಯವಾಗಿ ಸದನದಲ್ಲಿ ಇರಬೇಕು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು restrictions ಏನಿದೆ?

**ಸಭಾಪತಿಯವರು:–** ನಾನು ಮಾನ್ಯ ಸದಸ್ಯರ ಜೊತೆ ಮಾತನಾಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಇಲ್ಲಿ ಮಾತನಾಡಲು restrictions ಏನಿದೆ? ಇಡೀ ಸಭೆಗೆ ಗೊತ್ತಾಗಬೇಕಲ್ಲವೇ?

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್. ರಮೇಶ್:-** ವಿಚಾರ ಸಭೆ ಮುಂದೆ ಬರಲಿ. ಹಿಂದುಳಿದವರ ಬಗ್ಗೆ ...... ಮಾತನಾಡಿದರೆ ...... ಬಿಡುತ್ತಿದ್ದರಾ?

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಯಾವ ಕಾರಣದಿಂದ ಆಗುವುದಿಲ್ಲ ಎಂಬುದನ್ನು ಹೇಳಬೇಕಲ್ಲವೇ?

**ಶ್ರೀ ಪಿ.ಆರ್. ರಮೇಶ್:-** ಇದಕ್ಕೆ ಅವಕಾಶ ಕೊಡುವುದಿಲ್ಲವೇ......

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಪಿ.ಆರ್. ರಮೇಶ್:-** ಅರ್ರೇ, ಇದೇನ್ರೀ!

**ಸಭಾಪತಿಯವರು:-** ನಾನು ನಿಮ್ಮ ಸೂಚನೆಯನ್ನು ಓದಿದ್ದು, ಅದರ ಬಗ್ಗೆ ನಿಮ್ಮ ಜೊತೆ ಮಾತನಾಡುತ್ತೇನೆ. ಅದನ್ನು ಬೇರೆ ರೀತಿಯಲ್ಲಿ ಚರ್ಚೆ ಮಾಡೋಣ ಎಂದು ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ತಾವು allow ಮಾಡಿದರೆ ಓದಿಬಿಡುತ್ತಾರೆ.

**ಸಭಾಪತಿಯವರು:-** ಅದನ್ನು ತಾವು ನೋಡಿ.

**ಶ್ರೀ ಪಿ.ಆರ್. ರಮೇಶ್:-** ಅವರೊಬ್ಬರಿಗೇ ದೇವರಿದ್ದಾನೆಯೇ? ನಮಗಿಲ್ಲವೇ?

**Sri NASEER AHMED:-** Public interest ಇರುವಾಗ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಅವಕಾಶ ಕೊಡದೇ ಇರುವುದಕ್ಕೆ ಕಾರಣ ಬೇಕಲ್ಲವೇ?

**ಸಭಾಪತಿಯವರು:-** ದಯಮಾಡಿ ವಿರೋಧ ಪಕ್ಷದ ನಾಯಕರು ಅವರ ಸದಸ್ಯರಿಗೆ ಹೇಳಬೇಕು. ನಾನು ಅರ್ಥ ಮಾಡಿಕೊಂಡಿದ್ದೇನೆ. ನಿಮಗೆ ಸೂಚನೆ ಕಳುಹಿಸಿದ್ದೇನೆ. ಇದರ ಬಗ್ಗೆ reason ಹೇಳುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್‌ಃ–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡುವುದು ಏನಿದೆ? ಒಬ್ಬ ಗೌರವಾನ್ವಿತ ಸದಸ್ಯರಿಗೆ ಮಾತನಾಡಲು ಅವಕಾಶ ಇಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರುಃ–** ಕೊಟ್ಟ ಸೂಚನೆಗಳೆಲ್ಲವನ್ನು ತೆಗೆದುಕೊಳ್ಳಬೇಕೆಂಬ ಕಾನೂನು ಇಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಃ–** ಏಕೆ ತೆಗೆದುಕೊಳ್ಳಬಾರದು ಎಂಬುದನ್ನು ಹೇಳಬೇಕಲ್ಲವೇ?

**ಸಭಾಪತಿಯವರುಃ–** ಅದು ಸಮುದಾಯದ ವಿಷಯ ಇದೆ, ಚರ್ಚೆ ಆಗಬೇಕಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್‌ಃ–** ಚರ್ಚೆಯಾಗಲು ಅವಕಾಶ ಬೇಕು.

**(ಗೊಂದಲ)**

**ಸಭಾಪತಿಯವರುಃ–** ನಾನು ಚರ್ಚೆ ಮಾಡುವ ಬಗ್ಗೆ ಚೀಟಿ ಕಳುಹಿಸಿದ್ದೇನೆ. ಅದನ್ನು ಚರ್ಚೆ ಮಾಡಿ ತೆಗೆದುಕೊಳ್ಳಬೇಕೆಂದು ಇದ್ದೇನೆ. ನಾನು–ನೀವು ಮಾತನಾಡಿದ ನಂತರ ಬೇರೆಯವರಿಗೆ ಕೊಡುತ್ತೇನೆ. ನಾನು ಖಂಡಿತವಾಗಿ ಕೊಡುತ್ತೇನೆ.

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್‌ಃ–** ಅವಕಾಶ ಮಾಡಿಕೊಡಿ.

**ಸಭಾಪತಿಯವರುಃ–** ಕೊಡುತ್ತೇನೆ ಎಂದು ಹೇಳಿದ್ದೇನೆ. ಮಾನ್ಯ ರಮೇಶ್‌ರವರೇ, ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ನೀವು ಹೇಳಿದಂತೆ ಮಾಡಬೇಕೆಂದೇನೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಲಿ. ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ನಾನು ಅವರೊಡನೆ ಇದರ ಬಗ್ಗೆ ಚರ್ಚೆ ಮಾಡಿ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್‌ಃ–** ಚರ್ಚೆ ಮಾಡಿ ಅವಕಾಶ ಕೊಡಿ.

**ಸಭಾಪತಿಯವರುಃ–** ಒಬ್ಬೊಬ್ಬರು ಮಾತನಾಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಅವರೇ ಹೇಳಿಕೊಂಡು ಪ್ರಚಾರ ಮಾಡುತ್ತಿದ್ದಾರೆ ಎನ್ನುವಂತೆ ಆಗಿದೆ.

**ಶ್ರೀ ಎಸ್.ಆರ್. ಪಾಟೀಲ್ಃ–** ಅವರು ಮೇಲೆ ಕುಳಿತು ಕೆಳಭಾಗದಿಂದ ಹೇಳುತ್ತಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಃ–** ಇಂತಹ ನಿಯಮದಡಿ ಪ್ರಸ್ತಾಪ ಮಾಡಲು ಆಗುವುದಿಲ್ಲ ಎಂದು ಸಕಾರಣವನ್ನು ಕೊಟ್ಟು, ಈ ಕಾರಣದಿಂದ ಮಾಡಲು ಆಗುವುದಿಲ್ಲ ಎಂದು ಹೇಳಬೇಕಲ್ಲವೇ? ಇದು ಸದನದಲ್ಲಿ ಪ್ರಕಟವಾಗಬಾರದೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೆ, ಹತ್ತಾರು ವಿಚಾರಗಳನ್ನು ಶೂನ್ಯವೇಳೆಯಲ್ಲಿ ಕೊಟ್ಟಿರುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಎಂದು ಯೋಚನೆ ಮಾಡಬೇಕು. ಪ್ರಸ್ತಾಪವಾಗದಿದ್ದಾಗ ಕೇಳಬಹುದು.

**ಶ್ರೀ ಎಸ್.ಆರ್. ಪಾಟೀಲ್ಃ–** ಕೆಲವು……

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಃ–** ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್‌ರವರು Mayor ಆಗಿ ಕೆಲಸ ಮಾಡಿದ್ದು, ಎಲ್ಲವೂ ಅವರಿಗೆ ಗೊತ್ತಿದೆ. ಗೊತ್ತಿಲ್ಲ ಎಂದು ತಿಳಿದುಕೊಳ್ಳಬಾರದು.

**ಸಭಾಪತಿಯವರುಃ–** ನಾನು ಸೂಚನೆಯನ್ನು ಓದಿದ್ದು, ಅವರೊಡನೆ ಚರ್ಚೆ ಮಾಡಿ ಬೇರೆ ರೀತಿಯಲ್ಲಿ ತೆಗೆದುಕೊಳ್ಳುವ ಬಗ್ಗೆ ಹೇಳಿದ್ದೇನೆ. ಮಧ್ಯಾಹ್ನದ ನಂತರ ನಾನು ನಿರ್ಣಯವನ್ನು ಕೊಡುತ್ತೇನೆ. ನಾನು ಚರ್ಚೆ ಮಾಡಿ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ಃ–** ಇವತ್ತು ತಾವು final ಮಾಡಿಬಿಡಿ.

**Mr. CHAIRMAN:-** Yes. ನಾನು ಹೇಳುತ್ತೇನೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ರಮೇಶ್ ರವರೊಡನೆ ಮಾತನಾಡಿದ ನಂತರ ತಿಳಿಸುತ್ತೇನೆ. ತಾವುಗಳು ಸಹಕಾರ ಕೊಡಬೇಕು. ನನಗೆ ಅನಿಸಿದ್ದನ್ನು ನಾನು ಹೇಳುತ್ತೇನೆ. ಇಲ್ಲದಿದ್ದರೆ ತಮ್ಮೊಡನೆ ಚರ್ಚೆ ಮಾಡಿ, Yes ಎಂದರೆ ನನ್ನ ತಕರಾರೇನೂ ಇಲ್ಲ. ನಾನು ಅವರೊಡನೆ ಮಾತನಾಡುವ ಬಗ್ಗೆ ಹೇಳಿದ್ದೇನೆ.

**Sri S.R.PATIL:-** Lunch hour ಆದಮೇಲೆ ಚರ್ಚೆ ಮಾಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Mr. CHAIRMAN:-** Yes. ನಾನು ತಮಗೆ ಹೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗಳ 3 ವಿಷಯಗಳಿಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಂದಿಲ್ಲ, ನಾಳೆ ತೆಗೆದುಕೊಳ್ಳಬೇಕು. ಮಾನ್ಯ ಸಭಾಪತಿಯವರೇ, agenda ದಲ್ಲಿ " ಒಂದು ರಾಷ್ಟ್ರ, ಒಂದು ಚುನಾವಣೆ" ಎಂಬ ಮುಖ್ಯವಾದ ವಿಷಯ ಇದೆ. ಕೆಳಮನೆಯಲ್ಲಿ ಚರ್ಚೆ ನಡೆದಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಿಂದಲೂ ಈ ವಿಚಾರ ಪ್ರಸ್ತಾಪ ಮಾಡಲು ಪ್ರಯತ್ನಿಸುತ್ತಿದ್ದು, ಸರ್ಕಾರವು ಸಹಕಾರ ನೀಡುತ್ತಿಲ್ಲ. ಸ್ಪಂದನೆ ಮಾಡುತ್ತಿಲ್ಲ. ಗಮನ ಸೆಳೆಯುವ ಸೂಚನೆ ವಿಷಯ ನನ್ನದಿದೆ.

**Sri S.R.PATIL:-** We have to go by agenda and skip ಮಾಡುವುದು ಬೇಡ.

**(ಗೊಂದಲ)**

**ಸಭಾಪತಿಯವರುಃ–** ಮಾನ್ಯ ಸಭಾನಾಯಕರೇ, advance ಆಗಿ Notice ಕಳುಹಿಸಿರುತ್ತಾರೆ. ಅದಕ್ಕೆ ಉತ್ತರ ಕೊಡದಿದ್ದರೆ ಮಾನ್ಯ ಸದಸ್ಯರು ಏನು ಮಾಡಬೇಕು.

**Sri K.T. SRIKANTEGOWDA:-** Adjourn ಮಾಡಿ, Session ಏಕೆ? ಕಳೆದ ಅಧಿವೇಶನದಿಂದ ನಾನು ಕಾಯುತ್ತಿದ್ದೇನೆ. ನಾವು ಮೂರು ಅಧಿವೇಶನದಿಂದಲೂ ಕಾಯುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರುಃ–** ಇಲ್ಲ, ಈಗ agenda ದಲ್ಲಿ ಬಂದಾಗ, ನಾವು agenda ಕಳುಹಿಸಿದ್ದು, agenda ದಲ್ಲಿ ಇರುವಂತೆ ಮಾನ್ಯ ಸದಸ್ಯರಿಗೆ ಉತ್ತರ ಹೇಳಬೇಕಲ್ಲವೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸದನ ಕರೆಯುವ ಅವಶ್ಯಕತೆ ಏನಿರುತ್ತದೆ, study ಮಾಡಬೇಕು, ವಿಚಾರ ಮಾಡಬೇಕು, ಉತ್ತರ ಹೇಳಬೇಕು......

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಕನಿಷ್ಟ ಶಿಕ್ಷಣ ಮಂತ್ರಿಯವರು ಇರಬೇಕಲ್ಲವೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಃ–** ಈ ಒಂದು ರಾಷ್ಟ್ರ, ಒಂದು ಚುನಾವಣೆ ಎಲ್ಲಿಂದ ಬಂತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ನಾನು ಏನು ಹೇಳಿದೆ ಎಂದರೆ, ಈ agenda ಕ್ಕೆ ಉತ್ತರ ಬಂದಿಲ್ಲದಿರುವುದರಿಂದ ಆ ವಿಚಾರವನ್ನು ಕೈಗೆತ್ತಿಕೊಂಡರೆ ಆಗಬಹುದೇ ಎಂದು ಕೇಳಿದೆ. ಅವರು ಬೇಡ ಎಂದರೆ ನನ್ನ ಆಕ್ಷೇಪ ಏನೂ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಒಂದು ದೇಶ ಒಂದು ಚುನಾವಣೆಗೆ.......

**ಶ್ರೀ ಯು.ಬಿ. ವೆಂಕಟೇಶ್ಃ–** ಮೊದಲು ...... meeting ಮಾಡಿ, ಇಬ್ಬರು ನಾಯಕರು.......

**(ಗೊಂದಲ)**

**ಸಭಾಪತಿಯವರುಃ–** ಒಬ್ಬರು ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ತಾವು ಸದನದ ಅತ್ಯಂತ ಹಿರಿಯ ಸದಸ್ಯರಾಗಿ ಸಭಾಪತಿಯವರಾದ ಮೇಲೆ ಬಹಳ ಶಿಸ್ತಿನಿಂದ ಸದನ ನಡೆಯುತ್ತದೆ ಎಂದು ನಿರೀಕ್ಷೆ ಮಾಡಿದ್ದೇವೆ. ಈಗ ದಯಮಾಡಿ agenda ವನ್ನು ಪೂರ್ಣ ಮಾಡಿ. ಈ ವಿಷಯವನ್ನು ಕಳೆದ ಅಧಿವೇಶನದಿಂದಲೂ ಪ್ರಸ್ತಾಪ ಮಾಡುತ್ತಿದ್ದೇವೆ. ಅಕ್ಷರಶಃ ಶಿಕ್ಷಕರು ಬೀದಿಗೆ ಬಿದ್ದಿದ್ದಾರೆ. ಬದುಕಲು ಆಗದೇ ತತ್ತರಿಸಿ ಹೋಗಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾವು ಕಳೆದ ಎರಡು ತಿಂಗಳುಗಳಿಂದ ವಿಚಾರವನ್ನು ಪ್ರಸ್ತಾಪ ಮಾಡಲು ಪಕ್ಷಬೇಧ ಮರೆತು ತಯಾರಿದ್ದೇವೆ. ಈ ವಿಚಾರದ ಚರ್ಚೆಗೆ ಅವಕಾಶ ಇಲ್ಲ, ಉತ್ತರ ಇಲ್ಲ ಎಂದರೆ ನಾವು ಏನು ಮಾಡೋಣ. ಅಧಿವೇಶನ ನಡೆಸುವ ಉದ್ದೇಶ ಏನು? ಗಮನ ಸೆಳೆಯುವ ಸೂಚನೆಯ ಅವಕಾಶ ಏನು? ಮಾನ್ಯ ಮುಖ್ಯಮಂತ್ರಿಗಳು ಇಲ್ಲದಿದ್ದರೆ ಮಾನ್ಯ ಶಿಕ್ಷಣ ಸಚಿವರಾದರೂ ಬರಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(276)/04.03.2021/12.50/ಹೆಚ್‌ವಿಃವಿಕೆ**

**ಸಭಾಪತಿಯವರುಃ–** ಮಾನ್ಯ ಶ್ರೀಕಂಠೇಗೌಡರೆ, ಮಾನ್ಯ ಸಭಾನಾಯಕರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ನಾವು ಉತ್ತರವನ್ನು ಕೊಟ್ಟಿದ್ದೇವೆ ಮತ್ತು ಅವರುಗಳನ್ನು ಸಂತೋಷಪಡಿಸಿದ್ದೇವೆ. ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಿ, ಶಿಕ್ಷಣ ಸಚಿವರಾದರೂ ಉತ್ತರವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ತಾವು ಸ್ವಲ್ಪ ಕಾಲಾವಕಾಶವನ್ನು ನೀಡಿದರೆ ಸಂಬಂಧಪಟ್ಟ ಸಚಿವರನ್ನು ಕರೆಯಿಸುತ್ತೇನೆ.

**ಸಭಾಪತಿಯವರುಃ–** ಮಾನ್ಯ ಸಭಾನಾಯಕರೇ, ಸರ್ಕಾರ ಉತ್ತರವನ್ನು ಕೊಡಬೇಕೆಂದರೆ, ಸಂಬಂಧಪಟ್ಟ ಸಚಿವರು ಸದನಕ್ಕೆ ಬರಬೇಕಲ್ಲವೇ? ಬಹಳ ಮಹತ್ವಪೂರ್ಣವಾಗಿರುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಯಾವಾಗ ಉತ್ತರವನ್ನು ಕೊಡಲಾಗುತ್ತದೆಂದು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಡಿಸುತ್ತೇನೆ. ಆದರೆ, ಸ್ವಲ್ಪ ವಿಳಂಬವಾಗುತ್ತದೆಂದು ಹೇಳುತ್ತೇನೆ.

**ಸಭಾಪತಿಯವರುಃ–** ವಿಳಂಬವಾಗುವುದು ಬೇಡ ಈಗಲೇ ಉತ್ತರವನ್ನು ನೀಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಶಿಕ್ಷಣ ಸಚಿವರು ಉತ್ತರವನ್ನು ಕೊಡಬಹುದು. ನಾನು ಶಿಕ್ಷಣ ಸಚಿವರನ್ನು ಈ ಸದನಕ್ಕೆ ಕರೆಯಿಸುತ್ತೇನೆ. ಅಲ್ಲಿಯವರೆಗೆ ನಿಯಮ 330ರಡಿಯಲ್ಲಿರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಿ. ಆನಂತರ ಈ ವಿಚಾರವನ್ನು ಕೈಗೆತ್ತಿಕೊಳ್ಳಿ ಎನ್ನುವುದು ತಮ್ಮಲ್ಲಿ ನನ್ನ ಮನವಿಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಈ ದಿನ ಪ್ರಸ್ತಾಪ ಮಾಡಿದ ಶೂನ್ಯವೇಳೆಯ ಪ್ರಸ್ತಾವಗಳಿಗೆ ಉತ್ತರಗಳೇ ಬಂದಿಲ್ಲ. ಏನಾಗಿದೆ ಎನ್ನುವುದು ಗೊತ್ತಾಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಬಹಳ ಗಂಭೀರವಾಗಿರುವ ಚರ್ಚೆ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಉಪಸ್ಥಿತರಿದ್ದಾರೆ. ಸಂಬಂಧಪಟ್ಟ ಮಂತ್ರಿಗಳನ್ನು ನಾನು ಕರೆಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಯಾವುದೇ ಚರ್ಚೆ ನಡೆಯುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಅಗತ್ಯ ಬಿದ್ದರೆ, ನಾನು ಮಾನ್ಯ ಮಂತ್ರಿಗಳನ್ನು ಕರೆಯಿಸುತ್ತೇನೆ. ಈಗ ಭೋಜನ ವಿರಾಮಕ್ಕಾಗಿ ತಾವು ಸದನವನ್ನು ಮುಂದೂಡಿ, ಭೋಜನ ವಿರಾಮದ ನಂತರ ಮಾನ್ಯ ಮಂತ್ರಿಗಳು ಬಂದರೆ ಅವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಸರಿ, ಮುಂದಿನ ಗಮನಸೆಳೆಯುವ ಸೂಚನೆ ಮಾನ್ಯ ಪುಟ್ಟಣ್ಣನವರದು ಅವರು ಇಂದು ಸದನಕ್ಕೆ ಗೈರು ಹಾಜರಾಗಿದ್ದಾರೆ. ನಂತರದ ಗಮನಸೆಳೆಯುವ ಸೂಚನೆಯನ್ನು ಶ್ರೀಯುತರುಗಳಾದ ಕೆ.ಸಿ.ಕೊಂಡಯ್ಯ, ಕೆ.ಪಿ.ನಂಜುಂಡಿ ವಿಶ್ವಕರ್ಮ, ಎಸ್.ಆರ್.ಪಾಟೀಲ್ ಮಾನ್ಯ ವಿರೋಧ ಪಕ್ಷದ ನಾಯಕರು, ಅಡಗೂರು ಹೆಚ್.ವಿಶ್ವನಾಥ್ ಮತ್ತು ಮರಿತಿಬ್ಬೇಗೌಡರು ಕೊಟ್ಟಿದ್ದಾರೆ. ಇದೂ ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವ ವಿಚಾರವಾಗಿದೆ. ಆದ್ದರಿಂದ ಈಗ ನಿಯಮ 330 ಅನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಮೂರು ಗಮನಸೆಳೆಯುವ ಸೂಚನೆಗಳು ಲಿಸ್ಟ್ ಆಗಿವೆ. ಈ ಮೂರೂ ಗಮನಸೆಳೆಯುವ ಸೂಚನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಬೇಕಾಗಿದೆ. ಈ ವಿಚಾರಗಳು ಬಹಳ ಮಹತ್ವಪೂರ್ಣದ್ದಾಗಿವೆ. ಸರ್ಕಾರ ನೀಡುವ ಹಾರಿಕೆ ಉತ್ತರಗಳನ್ನು ಕೇಳುವುದಕ್ಕಾಗಿ ನಾವು ಪ್ರಶ್ನೆಗಳನ್ನು ಕೇಳಬೇಕೇ? ಸದನವನ್ನು ಮುಂದೂಡಿ. ಬೆಳಿಗ್ಗೆ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪೈಕಿ 5 ಪ್ರಶ್ನೆಗಳಿಗೆ ಉತ್ತರವನ್ನು ನೀಡಲು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರಲಿಲ್ಲ. ಈಗ 03 ಗಮನಸೆಳೆಯುವ ಸೂಚನೆಗಳಿಗೂ ಅವರೇ ಉತ್ತರವನ್ನು ನೀಡಬೇಕಾಗಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಸದನ ನಡೆಸುವುದರಲ್ಲಿ ಅರ್ಥವಿಲ್ಲ. ಸದನದಲ್ಲಿ ಉತ್ತರಿಸಲು ಸಂಬಂಧಪಟ್ಟ ಮಂತ್ರಿಗಳು ಉಪಸ್ಥಿತರಿಲ್ಲ. ಯಾರೋ ಸಚಿವರು ಹೇಳಬೇಕಾಗಿರುವ ಉತ್ತರಕ್ಕೆ ಮತ್ತ್ಯಾರೋ ಸಚಿವರು ಉತ್ತರವನ್ನು ನೀಡುವುದು ಸರಿಯಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಬಹಳ ಗಂಭೀರವಾಗಿರುವ ಚರ್ಚೆ ನಡೆಯುತ್ತಿದೆ. ಸದನದಲ್ಲಿ ಎಲ್ಲ ಸಚಿವರು ಹಾಜರಿರಬೇಕೆನ್ನುವ ಸೂಚನೆಯನ್ನು ಮಾನ್ಯ ಸಭಾಧ್ಯಕ್ಷರು ನೀಡಿದ್ದಾರೆ. ನಮ್ಮ ಸದನದಲ್ಲಿಯೂ ಅದೇ ಅಜೆಂಡಾವನ್ನು ಕೈಗೆತ್ತಿಕೊಳ್ಳಿ ಎಂದು ಹೇಳಿದ್ದರು. ಆದರೆ, ತಾವು ಇಲ್ಲ, ನಾವು ಬೇರೆ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡು ಮಧ್ಯಾಹ್ನದ ಮೇಲೆ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರ ಹಿಂಭಾಗದಲ್ಲಿ ಕುಳಿತಿರುವ ಮಾನ್ಯ ಹೆಚ್.ವಿಶ್ವನಾಥ್‌ರವರು ನೇರ ನಡೆನುಡಿಯನ್ನು ಹೊಂದಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಸಭಾ ನಾಯಕರು ನೇರ ನಡೆನುಡಿಯನ್ನು ಹೊಂದಿರಬೇಕಾಗುತ್ತದೆ. ಮಾನ್ಯ ಸಭಾ ನಾಯಕರು ಮಜುಗರ ಪಟ್ಟುಕೊಳ್ಳದೇ ಮಾತನಾಡಬೇಕಾಗಿದೆ. Speak the truth.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನನಗೆ ಮುಜುಗರವೇನೂ ಇಲ್ಲ. ನನಗೆ ಈ ಸ್ಥಾನವನ್ನು ಬಿಟ್ಟುಕೊಟ್ಟಿರುವುದೇ ನೇರವಾಗಿ ಮಾತನಾಡುವುದಕ್ಕೆ, ಅದೇ ರೀತಿ ನಾನು ನೇರ ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಮಗೆ ಜನರ ಯೋಗಕ್ಷೇಮ ಮತ್ತು ಅವರ ಕಲ್ಯಾಣ ಮಹತ್ವದ ವಿಚಾರವಾಗಿದೆ. ಮಾನ್ಯ ಹೆಚ್.ವಿಶ್ವನಾಥ್‌ರವರು ನೇರವಾಗಿ ಮಾತನಾಡುತ್ತಾರೆ. I appreciate him.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಈಗ ಸದನವನ್ನು 2.30 ಗಂಟೆಗಳವರೆಗೆ ಭೋಜನ ವಿರಾಮಕ್ಕಾಗಿ ಮುಂದೂಡಿದರೆ, ಭೋಜನ ವಿರಾಮದ ನಂತರ ಸದನಕ್ಕೆ ನಾನು ಮಾನ್ಯ ಮಂತ್ರಿಗಳನ್ನು ಕರೆಯಿಸುತ್ತೇನೆ ಅವರು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಮಾಡುವುದಾದರೆ, ಸರ್ಕಾರ ಸದನವನ್ನು ಏತಕ್ಕೋಸ್ಕರ ಕರೆಯಬೇಕಾಗಿತ್ತು? ಮೂರು ಗಮನ ಸೆಳೆಯುವ ಸೂಚನೆಗಳಿಗೆ ಉತ್ತರ ಬಂದಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಎಷ್ಟೊಂದು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಮಂತ್ರಿಗಳು ಮೇಲ್ಮನೆಗೆ ಬರುವುದಿಲ್ಲವೆಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಎಲ್ಲ ಸಚಿವರು ಹಾಜರಿರಬೇಕೆಂದು ಮಾನ್ಯ ಸಭಾಧ್ಯಕ್ಷರು ಸೂಚನೆಯನ್ನು ನೀಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಕೆಳಮನೆಯ ಕಾರಣವನ್ನು ಯಾಕೆ ಹೇಳುತ್ತಿದ್ದಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಕೆಳಮನೆಯ ಕಾರ್ಯಕಲಾಪಗಳು ನಡೆಯಬೇಕು, ಮೇಲ್ಮನೆಯ ಕಾರ್ಯಕಲಾಪಗಳು ನಡೆಯಬೇಡವೇ?

**ಸಭಾಪತಿಯವರು:–** ಆ ಸದನದಲ್ಲಿ ಯಾವಯಾವ ಮಂತ್ರಿಗಳು ಉಪಸ್ಥಿತರಿರಬೇಕೆಂದು ಲಿಸ್ಟ್ ಆಗಿದೆ, ಅವರುಗಳನ್ನು ಬಿಟ್ಟು ಬೇರೆ ಮಂತ್ರಿಗಳು ಈ ಸದನದಲ್ಲಿ ಹಾಜರಿರಬೇಕೆಂದು ನಾನು ಹೇಳಿದ್ದೇನೆ. ಸದನ ನಡೆಯಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬರಲಿಲ್ಲವೆಂದರೆ ಹೇಗೆ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಯಾವಯಾವ ಸಚಿವರು ಉಪಸ್ಥಿತರಿರಬೇಕೆಂದು ಮತ್ತು ಅಧಿಕಾರಿಗಳು ಯಾರ್‍ಯಾರು ಇರಬೇಕೆನ್ನುವುದರ ಬಗ್ಗೆ ತಾವು ಹೇಳಿದ್ದೀರಿ, ಆದರೆ, ಯಾರೂ ಸದನದಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಈಗ ತಾವು ಭೋಜನ ವಿರಾಮಕ್ಕಾಗಿ ಸದನವನ್ನು ಮುಂದೂಡಿದರೆ, ಭೋಜನ ವಿರಾಮದ ನಂತರ ಕಾರ್ಯಕಲಾಪಗಳ ಪಟ್ಟಿಯನ್ನು ಕೈಗೆತ್ತಿಕೊಳ್ಳೋಣ. ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಯಾವಯಾವ ಸಚಿವರು ಮತ್ತು ಅಧಿಕಾರಿಗಳು ಇವತ್ತಿನ ಸದನದಲ್ಲಿ ಹಾಜರಿರಬೇಕಾಗಿತ್ತು ಅವರುಗಳನ್ನು ಕರೆಯಿಸಿ.

**ಸಭಾಪತಿಯವರು:–** ಯಾರ್‍ಯಾರು ಮಂತ್ರಿಗಳು ಆ ಸದನದಲ್ಲಿ ಇರುತ್ತಾರೆ ಎನ್ನುವುದನ್ನು ವಿಚಾರ ಮಾಡಿ, ಅವರನ್ನು ಬಿಟ್ಟು ಬೇರೆಯವರು ಈ ಸದನದಲ್ಲಿ ಇರಬೇಕೆಂದು ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ತೆಗೆದುಕೊಂಡಿದ್ದೇನೆ. ಉತ್ತರ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ.

**(ಗೊಂದಲ)**

**ಶ್ರಿ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಒಂದೇ ಅಜೆಂಡಾವನ್ನು ತೆಗೆದುಕೊಳ್ಳಬೇಕೆನ್ನುವ ನಿರ್ಧಾರವಾಗಿತ್ತು. ಆದರೆ, ಈ ಮನೆಯಲ್ಲಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಾಯಿತು. ಆಗ ಕೆಲವು ಮಂತ್ರಿಗಳು ಇರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈಗ ಸಮಯ ಒಂದು ಗಂಟೆ, ಊಟದ ಸಮಯವಾಗುತ್ತಿದೆ. ಈಗ ಒಬ್ಬೊಬ್ಬರೇ ಅಧಿಕಾರಿಗಳು ಸದನಕ್ಕೆ ಬರುತ್ತಿದ್ದಾರೆ. ಇವರುಗಳಿಗೆ ಜವಾಬ್ದಾರಿ ಇದೆಯೇ–ಇಲ್ಲವೇ? ಮಂತ್ರಿಗಳು ಮತ್ತು ಅಧಿಕಾರಿಗಳು ಸದನದಲ್ಲಿ ಹಾಜರಿರುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಸರ್ಕಾರದ ಮುಖ್ಯ ಸಚೇತಕರು ಸದನದಲ್ಲಿ ಹಾಜರಿಲ್ಲ, ಮಂತ್ರಿಗಳಿಲ್ಲ, ಉತ್ತರ ಕೊಡುವವರು ಇಲ್ಲ. ಈ ರೀತಿಯ ಬೇಜವಾಬ್ದಾರಿತನವನ್ನು ನಾನು ನೋಡಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಮಂತ್ರಿಗಳು ಸದನದಲ್ಲಿ ಹಾಜರಿದ್ದಾರೆ. ತಾವು ಭೋಜನ ವಿರಾಮಕ್ಕಾಗಿ ಸದನವನ್ನು ಮುಂದೂಡಿದರೆ, ಭೋಜನ ವಿರಾಮದ ನಂತರ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರೇ, ವಾದವಿವಾದ ಮಾಡುವುದರಲ್ಲಿ ಅರ್ಥವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ನಾವು ಒಪ್ಪಬಹುದು. ಆದರೆ, ಸದನ ಸುಗಮವಾಗಿ ನಡೆಯಬೇಕಾದರೆ, ಇವತ್ತಿನ ದಿವಸ ಯಾವಯಾವ ಮಂತ್ರಿಗಳು ಮತ್ತು ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕೆಂದು ಇದೆ ಅವರುಗಳು ಸದನದಲ್ಲಿ ಇರಬೇಕಾಗುತ್ತದೆ. ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ನಾಳೆಯಿಂದ ಈ ರೀತಿ ಆಗಬಾರದೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಾವು ಚರ್ಚೆ ಮಾಡಿ ನನಗೆ ಹೇಳಿ, ಆಯಾಯ ಮಂತ್ರಿಗಳೇ ಉತ್ತರವನ್ನು ಹೇಳಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರೇ, regarding this I will take the responsibility.

**<u>ಪ್ರಕಟಣೆಗಳು</u>**

**ಸಭಾಪತಿಯವರು:–** ಅ) ಮಾನ್ಯ ಶಾಸಕರಾದ ಶ್ರೀ ಕೆ.ವಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ 143ನೇ ಅಧಿವೇಶನದ ಮುಂದುವರೆದ ಉಪವೇಶನದಲ್ಲಿ ದಿನಾಂಕ 25 ಮಾರ್ಚ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

2021ರವರೆಗೆ ಭಾಗವಹಿಸಲು ಸಾಧ್ಯವಾಗದೇ ಇರುವ ಕಾರಣ ಹಾಜರಾತಿಯಲ್ಲಿ ವಿನಾಯಿತಿ ನೀಡಬೇಕೆಂದು ಕೋರಿರುತ್ತಾರೆ, ಸದರಿಯವರ ಗೈರು ಹಾಜರಿಗೆ ಸದನದ ಒಪ್ಪಿಗೆ ಇರುತ್ತದೆಂದು ಭಾವಿಸುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 220ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಕೆಳಕಂಡಂತೆ ಪುನರ್ ರಚಿಸಲಾಗಿದೆ;

1. ಶ್ರೀ ಎಂ.ಕೆ.ಪ್ರಾಣೇಶ್ : ಉಪ ಸಭಾಪತಿಯವರು
2. ಶ್ರೀ ಕೋಟ ಶ್ರೀನಿವಾಸ ಪೂಜಾರಿ : ಮುಜರಾಯಿ ಸಚಿವರು
3. ಶ್ರೀ ಎಸ್.ಆರ್.ಪಾಟೀಲ್ : ವಿರೋಧ ಪಕ್ಷದ ನಾಯಕರು
4. ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ : ಸರ್ಕಾರದ ಮುಖ್ಯ ಸಚೇತಕರು
5. ಶ್ರೀ ಎಂ.ನಾರಾಯಣಸ್ವಾಮಿ : ವಿರೋಧ ಪಕ್ಷದ ಮುಖ್ಯ ಸಚೇತಕರು
6. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ : ವಿರೋಧ ಪಕ್ಷದ ಸದಸ್ಯರು
7. ಶ್ರೀ ಬಿ.ಕೆ.ಹರಿಪ್ರಸಾದ್ : ವಿರೋಧ ಪಕ್ಷದ ಸದಸ್ಯರು
8. ಶ್ರೀ ಶಶಿಲ್ ಜಿ.ನಮೋಶಿ : ವಿಧಾನ ಪರಿಷತ್ತಿನ ಸದಸ್ಯರು
9. ಶ್ರೀ ಮರಿತಿಬ್ಬೇಗೌಡರು : ವಿಧಾನ ಪರಿಷತ್ತಿನ ಸದಸ್ಯರು

**ವಿಶೇಷ ಆಹ್ವಾನಿತರು:**

1. ಶ್ರೀ ಬಿ.ಎಸ್.ಯಡಿಯೂರಪ್ಪ : ಮುಖ್ಯಮಂತ್ರಿಗಳು
2. ಶ್ರೀ ಎಸ್.ಆರ್.ಬೊಮ್ಮಾಯಿ : ಗೃಹ ಸಚಿವರು

**ಸಭಾಪತಿಯವರು:–** ಈಗ ನಿಯಮ 330ರ ಮೇರೆಗೆ ಚರ್ಚೆ ಮಾನ್ಯ ಎನ್.ರವಿಕುಮಾರ್‌ರವರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಸದನಕ್ಕೆ ಆಗಮಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನನ್ನದೊಂದು point of order ಇದೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದಕ್ಕೂ ಮೊದಲು ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಹರಿಪ್ರಸಾದ್‌ರವರು point of order ಎತ್ತಿದ್ದಾರೆ. ಅವರು ಮಾತನಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ನನ್ನ point of order ಏನೆಂದರೆ, ನಿಯಮ 330ರಡಿಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಲು ಹೊರಟಿರುವ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಮುಂದಿನ 8ನೇ ತಾರೀಖಿಗೆ ವಿಚಾರಣೆಗೆ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಈ ವಿಚಾರವನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಒಂದು ವೇಳೆ ಚರ್ಚೆಗೆ ತೆಗೆದುಕೊಂಡರೆ, ಅದು ನ್ಯಾಯಾಂಗ ನಿಂದನೆ ಆಗುವುದಿಲ್ಲವೇ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ ಆ ವಿಚಾರ ಯಾವ ಹಂತದಲ್ಲಿದೆ ಎಂದು ಹೇಳಿದ ಮೇಲೆ ......

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ನ್ಯಾಯಾಂಗ ನಿಂದನೆ ಆಗುತ್ತದೆಯೇ, ಇಲ್ಲವೇ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ವಿಷಯವನ್ನು ಅವರು ಪ್ರಸ್ತಾಪ ಮಾಡಲಿ. ವಿಷಯ ಏನು ಎನ್ನುವುದು ನಮಗೆ ಗೊತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, Sri B.K.Hariprasad is on point of order. If any matter is pending before any Court of Law or Quasi-Judicial Authority, such matter cannot be taken up for discussion. ಎಂದು ನಾವೇ ಮಾಡಿಕೊಂಡಿರುವಂತಹ ನಿಯಮಗಳಲ್ಲಿ ಇದೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹಿರಿಯ ಸದಸ್ಯರು ಜೊತೆಗೆ ರಾಜ್ಯಸಭಾ ಸದಸ್ಯರಾಗಿಯೂ ಅನುಭವ ಹೊಂದಿರುವವರು. ಅವರು ಇದು ನ್ಯಾಯಾಂಗ ನಿಂದನೆಯ ವ್ಯಾಪ್ತಿಗೆ ಬರುತ್ತದೆ ಎಂದರೆ, this matter is pending before the Apex Court of India.

**ಸಭಾಪತಿಯವರು:-** ವಿಷಯವನ್ನು ಸದನದ ಗಮನಕ್ಕೆ ತರಲಿ ಎನ್ನುವ ಉದ್ದೇಶದಿಂದ ನಾನು ಅವರ ಹೆಸರನ್ನು ಕರೆದಿದ್ದೇನೆ. ಅವರು ಮಾತನಾಡಿದ ನಂತರ ತಮ್ಮ ವಿಚಾರದ ಬಗ್ಗೆ ನೋಡೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ನ್ಯಾಯಾಂಗ ನಿಂದನೆಯಾಗುವಂತಹ ವಿಚಾರದ ಮೇಲೆ ಚರ್ಚೆ ಮಾಡುವಂತಹ ಸಂಪ್ರದಾಯವಿಲ್ಲ. ಈ ವಿಚಾರ ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆಯ ಹಂತದಲ್ಲಿದ್ದರೂ ಸಹ ನಾವು ಇಲ್ಲಿ ಚರ್ಚೆ ಮಾಡಬಹುದು, ಅದರಿಂದ ನ್ಯಾಯಾಂಗ ನಿಂದನೆಯಾಗುವುದಿಲ್ಲವೆಂದು ತಾವು ರೂಲಿಂಗ್ ಕೊಟ್ಟರೆ, ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ಆದರೆ, ಸದನದ ಸಂಪ್ರದಾಯ ಮತ್ತು rules and regulations ನ ಪ್ರಕಾರ ಸುಪ್ರೀಂ ಕೋರ್ಟಿನಲ್ಲಿರುವ ವಿಚಾರವನ್ನು ಸದನದೊಳಗೆ ಚರ್ಚೆಗೆ ತೆಗೆದುಕೊಳ್ಳುವುದು ನ್ಯಾಯಾಂಗ ನಿಂದನೆ ಆಗುತ್ತದೆಯೇ ಇಲ್ಲವೇ ಎಂದು ತಾವು ಹೇಳಿದರೆ ಸಾಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(277) 4.3.2021 1.00 ಪಿಕೆ:ಬಿಎನ್‌ಎಸ್

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್**:- ಅವರು ಪ್ರಸ್ತಾಪ ಮಾಡುವುದರ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಆದರೆ ಇರುವ ವ್ಯವಸ್ಥೆ ಬಗ್ಗೆ ಕೇಳುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, the matter is not ceased by Court of law ಎನ್ನುವ ಹಿನ್ನಲೆಯಲ್ಲಿ ಮಾನ್ಯ ಸಭಾಪತಿಯವರು ಅವಕಾಶ ಕೊಡಬಹುದು ಆದರೆ, he cannot reply unless ruling has been given by the Chair.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಡಿ.

(ಗೊಂದಲ)

**ಸಭಾಪತಿಯವರು**:- ಒಂದು ನಿಮಿಷ ಇರಿ. ಬೇರೆಯವರ ಅಭಿಪ್ರಾಯವನ್ನು ಕೇಳಬಾರದೇ? ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಮಾನ್ಯ ಸಚಿವರು ಏನು ಹೇಳುತ್ತಾರೋ ಕೇಳೋಣ. ಅವರು ಉತ್ತರ ಕೊಡುವುದಿಲ್ಲ. ತಮ್ಮ ಅಭಿಪ್ರಾಯ ತಿಳಿಸುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್‌ಗೆ ತಾವು ರೂಲಿಂಗ್ ಕೊಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ**:- ಸುಪ್ರೀಂ ಕೋರ್ಟ್‌ನಲ್ಲಿರುವ ವಿಷಯಕ್ಕೆ ಮಾನ್ಯ ಸಚಿವರು . . .

(ಗೊಂದಲ)

**ಸಭಾಪತಿಯವರು**:- ಎಲ್ಲರೂ ಏಕೆ ಮಾತನಾಡುತ್ತೀರಿ? ಎಲ್ಲರೂ ಒಂದೇ ಸಲ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನಾನು ಮಾನ್ಯ ಸಚಿವರಿಗೆ ಉತ್ತರ ಕೊಡಲು ಹೇಳುತ್ತಿಲ್ಲ. ಈ ವಿಚಾರದಲ್ಲಿ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ ಎನ್ನುವುದನ್ನು ಕೇಳುತ್ತೇನೆ. ಅವರ ಮಾತನ್ನು ಕೇಳದೆ ನಾವು ಹೇಗೆ ಮುಂದುವರೆಯುವುದಕ್ಕೆ ಆಗುತ್ತದೆ?

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಹರಿಪ್ರಸಾದ್‌ರವರು ಪ್ರಸ್ತಾಪಿಸಿರುವಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, sub judice ಆಗದ ಹಾಗೆ ನನ್ನ ಹೇಳಿಕೆಯನ್ನು ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ . . . .

**ಸಭಾಪತಿಯವರು:-** ಉತ್ತರ ಹೇಳಬೇಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, sub judice ಆಗದ ಹಾಗೆ ಉತ್ತರ ಕೊಡುತ್ತೇನೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. That matter cannot be taken up for discussion. ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಆರ್.ಅಶೋಕ್:-** ನಾವು ಯಾವುದೇ ತೀರ್ಪು ಕೊಡುವ ರೀತಿಯಲ್ಲಿ ಹೇಳುವುದಕ್ಕೆ ಹೋಗುತ್ತಿಲ್ಲ . . .

(ಗೊಂದಲ)

**ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ :-** ಕೋರ್ಟ್‌ನಲ್ಲಿ ಇರುವ ವಿಷಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯೇ? ಇದೆ ಎನ್ನುವುದಾದರೆ ಪ್ರಸ್ತಾಪ ಮಾಡಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಅನೇಕ ವಿಷಯಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿದ್ದಾಗ ಅಂತಹ ವಿಷಯಗಳು ಇಲ್ಲಿ ಚರ್ಚೆಯಾಗಿದೆ. ದಯವಿಟ್ಟು ದಾಖಲೆ ತೆಗೆದು ನೋಡಿ ಗೊತ್ತಾಗುತ್ತದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿದ್ದ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಲಾಗಿದೆ. ಹಾಗಿರುವಾಗ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಏಕೆ ಅವಕಾಶ ಮಾಡಿಕೊಡಬಾರದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್**:– ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಿರುವುದಿಲ್ಲ; ಸಭಾಪತಿಯವರ ಗಮನಕ್ಕೆ ಆ ವಿಷಯವನ್ನು ತಂದಿರಲಿಕ್ಕಿಲ್ಲ. ಹಾಗಾಗಿ ಇಲ್ಲಿ ಚರ್ಚೆಗಳಾಗಿರಬಹುದು, ಇಲ್ಲ ಎಂದು ಹೇಳುತ್ತಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:**– ಮಾನ್ಯ ಸಭಾಪತಿಯವರೇ, ಈ ಕುರಿತು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**–ಮಾನ್ಯ ಸಭಾಪತಿಯವರೇ, ಕಾಲ ಕಾಲದಲ್ಲಿ ನಾವು ಚರ್ಚೆಗಳನ್ನು ಮಾಡುವಾಗ, ಕೋರ್ಟ್‌ನಲ್ಲಿರುವ ವಿಚಾರದ ಬಗ್ಗೆ ಚರ್ಚೆ ಮಾಡಬಾರದು ಎಂದೇನಿಲ್ಲ. ಕೋರ್ಟ್‌ನ ತೀರ್ಪಿನ ವಿರುದ್ಧ ನಿರ್ಣಯಗಳು ಮಾಡಬಾರದು ಎಂದಿದೆ. ನಾವೆಲ್ಲರೂ ಹೀಗೆ ಮಾಡಿಕೊಂಡು ಬಂದಿದ್ದೇವೆ. ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಸಭಾಪತಿಯವರಾಗಿದ್ದಾಗ ಇಂಥದ್ದಕ್ಕೆ ಅವಕಾಶ ಕೊಟ್ಟಿದ್ದರು. ಆ ಕಡೆಗೆ ಹೋದ ತಕ್ಷಣ ಈ ನಿಯಮ ಬದಲಾವಣೆ ಆಗುತ್ತದೆ ಎಂದರೆ ಏನು ಮಾಡಬೇಕು?

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:**– ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ ಸರ್ಕಾರದ ವಿರುದ್ಧವಾಗಿ ಕೋರ್ಟ್‌ಗೆ ಹೋಗಿದ್ದಾರೆ. ಸರ್ಕಾರದಲ್ಲಿರುವ ಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟರೆ ಇದು sub judice ಆಗುವುದಿಲ್ಲವೇ? ತಾವು ತೀರ್ಮಾನ ಕೊಡುವುದಕ್ಕಾಗುವುದಿಲ್ಲ. ಕೋರ್ಟ್‌ನಿಂದ ತೀರ್ಮಾನ ಬರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**– ಹಾಗೆಂದು ಚರ್ಚೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ . . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್**:- ತಾವು ರನ್ನಿಂಗ್ ಕಾಮೆಂಟ್ರಿ ಮಾಡಬೇಡಿ. ನಾನು ಹೇಳುವುದನ್ನು ದಯವಿಟ್ಟು ಕೇಳಿ.

ಸಭಾಪತಿಯವರು:- ಮಾನ್ಯ ಸಭಾನಾಯಕರೇ ದಯವಿಟ್ಟು ಕೇಳಿ. ***"A matter does not become sub judice if any Writ Petition for admission is pending before the Court."*** ಎಂದಿದೆ. ಈ ಹಿನ್ನೆಲೆಯಲ್ಲಿ, ಕೋರ್ಟ್‌ನ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ಮಾತನಾಡದಂತೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಬೇಕು, ನಂತರ ಸಚಿವರು ಉತ್ತರವನ್ನು ಕೊಡಬೇಕು.

**7. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ**

ವಿಷಯ: ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ ಐದು ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿರುವ ಕುರಿತು.

**ಶ್ರೀ ಎನ್. ರವಿಕುಮಾರ್(ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸ.ನಂ. 63ರಲ್ಲಿ 5 ಎಕರೆ ಜಾಗದಲ್ಲಿ, "ಇದು ಸರ್ಕಾರಿ ಜಾಗ" ಎಂದು ನಾಮ ಫಲಕವನ್ನು ಅಳವಡಿಸಿರುವ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಒತ್ತುವರಿ ಮಾಡಿಕೊಂಡಿರುವ ಜಾಗ 5 ಎಕರೆ. ಆ ಸ್ಥಳದಲ್ಲಿ ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ್ದಾರೆ. ಈ ಜಾಗ ಸರ್ಕಾರದ ಜಾಗ. ಸರ್ಕಾರದ ಜಾಗದಲ್ಲಿ ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂದು ಫಲಕ ಹಾಕುವುದಕ್ಕೆ ಹೇಗೆ ಅವಕಾಶ ಕೊಡಲಾಯಿತು? ಈ ಇನ್ಸ್‌ಟಿಟ್ಯೂಷನ್ನನ್ನು ಆರಂಭ ಮಾಡಬಹುದು, ಸ್ಥಾಪನೆ ಮಾಡಬಹುದು ಎಂದು ಯಾವ ಅಧಿಕಾರಿ ಅನುಮತಿ ಕೊಟ್ಟರು ಎನ್ನುವ ಉತ್ತರ ಬೇಕು. ಸುಳ್ಳು ದಾಖಲೆ ಮತ್ತು ತಪ್ಪು ಮಾಹಿತಿ ನೀಡಿ ಸರ್ಕಾರಕ್ಕೆ ಕಾಲೇಜಿನ ಅನುಮತಿಯನ್ನು ಪಡೆಯುವುದಕ್ಕೆ ದಾಖಲು ಪತ್ರಗಳನ್ನು ಸಲ್ಲಿಸಿದ್ದಾರೆ. ಆ ದಾಖಲು ಪತ್ರಗಳನ್ನು ಜಗಜ್ಜಾಹೀರು ಮಾಡಬೇಕು. ಸರ್ಕಾರ ಕೈಗೊಂಡಿರುವ ಕ್ರಮಗಳು ಅಂದರೆ, 1.10.2016ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಏನಿದೆ, ಅಲ್ಲಿ 63 ಸರ್ವೆ ನಂಬರ್‌ನ 5 ಎಕರೆ ಜಾಗ ಸರ್ಕಾರಿ ಜಾಗ ಎನ್ನುವುದರ ಬಗ್ಗೆ ಕಂದಾಯ ಇಲಾಖೆಯಲ್ಲಿ ಅಧಿಕೃತವಾದ ಮಾಹಿತಿ ಇದೆ, ಈ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಶಿಕ್ಷಣ ಇಲಾಖೆ ಹೇಗೆ ಅನುಮತಿಯನ್ನು ನೀಡಿತು? ಇದಕ್ಕೆ ಸಂಬಂಧಪಟ್ಟಂತೆ ನನಗೆ ಉತ್ತರಬೇಕು. ಈ ರೀತಿ ಅನುಮತಿ ಕೊಟ್ಟ ಅಧಿಕಾರಿ ಯಾರು ಎಂದು ತಿಳಿಸಬೇಕು. ಹೈಕೋರ್ಟ್‌ನಿಂದ ಇತ್ತೀಚಿಗೆ ತೀರ್ಮಾನ ಬಂದ ಸಂದರ್ಭದಲ್ಲೂ ಕೂಡ, ಸರ್ಕಾರ ವಶಪಡಿಸಿಕೊಳ್ಳಬೇಕೆಂದು High Court verdict ಕೊಡುತ್ತದೆ. ಈ verdict ಬಂದಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದರ ಬಗ್ಗೆ ಉತ್ತರ ಕೊಡಬೇಕು. ಸುಪ್ರೀಂ ಕೋರ್ಟ್‌ಗೆ ಹೋಗಿರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ, ಹೈಕೋರ್ಟ್, ಈ 5 ಎಕರೆ ಜಾಗ ಸರ್ಕಾರದ್ದು ಎಂದು ತೀರ್ಮಾನ ಕೊಟ್ಟ ಮೇಲೆ, ಇದನ್ನು ಹೇಗೆ occupy ಮಾಡಿಕೊಂಡರು? ಅಲ್ಲಿ ಇನ್ಸ್‌ಟಿಟ್ಯೂಷನ್ನನು ಹೇಗೆ ಸ್ಥಾಪನೆ ಮಾಡಿದರು? ಸರ್ಕಾರ ಏಕೆ ಸುಮ್ಮನಿದೆ? ಹೈಕೋರ್ಟ್ ತೀರ್ಮಾನ ಬಂದಮೇಲೂ ಆ ಜಾಗವನ್ನು ಸರ್ಕಾರ ಏಕೆ ಸುಪರ್ದಿಗೆ ತೆಗೆದುಕೊಳ್ಳಲಿಲ್ಲ? ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆಯೇ? ಏಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ ಎನ್ನುವುದರ ಬಗ್ಗೆ ನನಗೆ ಉತ್ತರ ಬೇಕು.

**ಶ್ರೀ ನಜೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಕೊಡಲಿ. ನಂತರ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಈಗಾಗಲೇ ಏನು ಪ್ರಸ್ತಾಪ ಮಾಡಿದ್ದಾರೋ. . . .

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ, ಮಾನ್ಯ ಸದಸ್ಯರು ಮಾತನಾಡುತ್ತಾ, ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿರುವುದು ನನಗೆ ಗೊತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ಹೈಕೋರ್ಟ್‌ನಿಂದ ಬಂದ ತೀರ್ಮಾನದ ಹಿನ್ನೆಲೆಯಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದ್ದಾರೆ. ಇದು ಸುಪ್ರಿಂ ಕೋರ್ಟ್‌ನಲ್ಲಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೋ ಇಲ್ಲವೋ ಹೇಳಬೇಕು.

**ಶ್ರೀ ಎನ್.ರವಿಕುಮಾರ್:–** ಆ ವಿಚಾರ ನನಗೆ ಗೊತ್ತಿಲ್ಲ. ಸರ್ಕಾರ ಅದಕ್ಕೆ ಉತ್ತರ ಕೊಡಲಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ,

(ಅಚಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರವಿಕುಮಾರ್‌ರವರು, ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸ.ನಂ.63ರಲ್ಲಿ 5 ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಿರುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಹೈಕೋರ್ಟ್‌ನಿಂದ, ಈ ಜಾಗ ಸರ್ಕಾರಿ ಜಾಗವಾಗಿದೆ ಎಂದು ತೀರ್ಪು ಬಂದಿದೆ. ಈ ಜಾಗವನ್ನು ಸರ್ಕಾರಕ್ಕೆ ಕೊಡಬೇಕು, ಆದರೆ ತಕ್ಷಣಕ್ಕೆ ಯಾವುದೇ demolition ಮಾಡಬಾರದು ಎಂದು ಹೇಳಿದ್ದಾರೆ. ಇದರ ಮೇಲೆ ಇಸ್ಲಾಮಿಯ ತಾಂತ್ರಿಕ ಶಿಕ್ಷಣ ಸಂಸ್ಥೆಯವರು ಸುಪ್ರಿಂ ಕೋರ್ಟ್‌ಗೆ ಅಪೀಲ್ ಹೋಗಿದ್ದಾರೆ.

(ಮುಂದು . . .)

(278) 04-03-2021 1.10 ಡಿಎಸ್-ಬಿಎನ್‌ಎಸ್

**ಶ್ರೀ ಆರ್.ಅಶೋಕ್(ಮುಂದು):-**

ಈಗಾಗಲೇ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿರುವುದರಿಂದ ವಿಚಾರಣೆ ಹಂತದಲ್ಲಿದ್ದು, ಸುಪ್ರೀಂ ಕೋರ್ಟ್‌ನಲ್ಲಿ 8ನೇ ತಾರೀಖು ವಿಚಾರಣೆಗೆ ಬರುತ್ತಿದೆ. ಇದಾದ ಮೇಲೆ ಇಸ್ಲಾಮಿಯ ಸಂಸ್ಥೆಯವರು ಈ ಜಾಗವನ್ನು ನಮಗೆ ಕೊಡಿ ಎಂದು ನಮಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಅದು ನಮ್ಮ ಹತ್ತಿರ ಪೆಂಡಿಂಗ್ ಇದೆ. ಸುಪ್ರೀಂ ಕೋರ್ಟ್‌ನಲ್ಲೂ ಪೆಂಡಿಂಗ್ ಇದೆ. ಸಭಾಪತಿಯವರು ತೀರ್ಪು ಕೊಡಬೇಕೋ ಬೇಡವೋ ಎನ್ನುವುದರ ಬಗ್ಗೆ ಏನು ಹೇಳುತ್ತಾರೆಯೋ ಅದೇ ರೀತಿ ನಾವು ಮುಂದುವರೆಯುತ್ತೇವೆ. ಸರ್ಕಾರ ಅದಕ್ಕೆ ಅಫಿಡವಿಟ್ ಹಾಕಿದ ಮೇಲೆ ಇದು ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಬೇಕಾಗಿದೆ. ಅವರು ಕೂಡ ಜಾಗ ಮಂಜೂರಾತಿಗೆ ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಇವೆರಡು ವಸ್ತು ಸ್ಥಿತಿ ಇರುವುದರಿಂದ ತಾವು ಹೇಗೆ ಹೇಳಿದರೆ ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ಸದನದ ಗಮನಕ್ಕೆ ತರುವುದೇನೆಂದರೆ, ಈ ಕಾಲೇಜು ನಿನ್ನೆ ಮೊನ್ನೆ ಬಂದಿರುವಂಥದ್ದು ಅಲ್ಲ. ಸುಮಾರು 1979-80ನೇ ಇಸವಿಯಲ್ಲಿ ಪ್ರಾರಂಭವಾಗಿರುವಂತಹ ಕಾಲೇಜು. ಇಡೀ ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ಸೇರಿರತಕ್ಕಂಥ ಮೊದಲನೇ ಇಂಜಿನಿಯರಿಂಗ್ ಕಾಲೇಜು ಯಾವುದಾದರೂ ಇದ್ದರೆ ಇದೇ ಕಾಲೇಜು. ಈ ಕಾಲೇಜಿನ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈ ಜಾಗವನ್ನು ನೋಟಿಫೈ ಮಾಡುವುದಕ್ಕೆ 1980 ರಲ್ಲಿ Preliminary Notification ಆಗಿದೆ. ಆ Preliminary Notification ಕಾಪಿ ನನ್ನ ಹತ್ತಿರ ಇದೆ. ಆ ಕಾಲದಲ್ಲಿ ಸರ್ಕಾರಕ್ಕೆ 5,85,000 ರೂಪಾಯಿ ಹಣವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೂಡ ಕಟ್ಟಿದ್ದಾರೆ. Preliminary Notification ಆದಮೇಲೆ Final Notification ವರೆಗಿನ ಹಂತಕ್ಕೆ ಹೋಗಿಲ್ಲ. ಅದು ಏಕೆ ಹೋಗಿಲ್ಲ ಎಂಬುದರ ಬಗ್ಗೆ ಸರ್ಕಾರ ನಮಗೆ ಯಾವುದೇ ತಿಳುವಳಿಕೆ ನೀಡಿಲ್ಲ. ಅಸಿಸ್ಟೆಂಟ್ ಕಮೀಷನರ್‌ರವರು ಡೆಪ್ಯೂಟಿ ಕಮೀಷನರ್‌ರವರಿಗೆ ಒಂದು ಪತ್ರ ಬರೆಯುತ್ತಾರೆ. ಅದರಲ್ಲಿ ವಿವರವಾಗಿ ಹೇಳುತ್ತಾರೆ. ಬೇಗೂರು ಹೋಬಳಿ ಹುಳಿಮಾವು ಗ್ರಾಮದ ಸರ್ವೆ ನಂ.63 ರಲ್ಲಿ 12 ಎಕರೆ 10 ಗುಂಟೆ ಸರ್ಕಾರಿ ಮುಫತ್ ಕಾವಲ್ ಎಂದು ವರ್ಗೀಕೃತಗೊಂಡ ಸರ್ಕಾರಿ ಜಮೀನಾಗಿದ್ದು, ಈ ಜಮೀನಿನ ಪೈಕಿ ಪಹಣಿಯಂತೆ ಶ್ರೀಮತಿ ಸುಶೀಲಮ್ಮ ಎನ್. ರೆಡ್ಡಿ ಕೋಂ ಲೇ. ನಾರಾಯಣ ರೆಡ್ಡಿಯವರಿಗೆ ಕೊಟ್ಟಿದ್ದಾರೆ. 1 ಎಕರೆ ಬಿಲ್ವ ಅಸೋಸಿಯೇಷನ್ ರವರಿಗೆ ಕೊಟ್ಟಿದ್ದಾರೆ. 20 ಗುಂಟೆ ಎಲ್.ಮುತ್ತಪ್ಪ ಎಂಬುವವರಿಗೆ ಕೊಟ್ಟಿದ್ದಾರೆ. ಮತ್ತೆ ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಯವರು 1979-80 ರಿಂದ ಅಲ್ಲಿ occupation ನಲ್ಲಿದ್ದಾರೆಂದು ತಿಳಿಸಿದ್ದಾರೆ. ಸರ್ಕಾರದ ಆದೇಶ ಇದೆ. ಯಾವುದೇ ಜಾಗದಲ್ಲಿ ಸುಮಾರು 30 ವರ್ಷ ಏನಾದರೂ possession ನಲ್ಲಿದ್ದರೆ, that becomes adverse possession. ಅದು ಸರ್ಕಾರದ ಆದೇಶ. 1979-80 ರಿಂದ ಇದೆ ಎಂದು ಅಸಿಸ್ಟೆಂಟ್ ಕಮೀಷನರ್ ಡೆಪ್ಯುಟಿ ಕಮೀಷನರ್‌ಗೆ ವರದಿ ಕೊಡುತ್ತಾರೆ. ಇದು ಸಹ ಇದೆ. ಬರೀ ಒಂದು part ಹೇಳಿದರೆ ಸರಿಯಾಗುವುದಿಲ್ಲ. ಅಲ್ಲಿ ಪರೀಕ್ಷೆ ನಡೆಯುತ್ತಿರಬೇಕಾದರೆ ಅನಿರೀಕ್ಷಿತವಾಗಿ ಅಲ್ಲಿಗೆ ಡೆಪ್ಯುಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್ ಹೋಗಿ ಆ ಕಾಲೇಜಿಗೆ ಬೀಗ ಹಾಕುತ್ತಾರೆ. ಬೀಗ ಹಾಕಿ ವಾಪಸ್ ಬರಬೇಕಾದರೆ ಈ ವಿಷಯ ಹೈಕೋರ್ಟ್‌ಗೆ ಹೋಗುತ್ತದೆ. ಹೈಕೋರ್ಟ್‌ನವರು ಒಂದು .ಔಜಿಜಿಇಖಿಂ ಔಜಿಜಿಜ ಅಂದರೆ, ತಹಸೀಲ್ದಾರ್‌ರವರಿಗೆ ಕರೆಯಿಸಿ ಅವರಿಗೆ humanitarian consideration ಬೇಡವೇ, Government of India, Home Ministry ಆದೇಶ ಇದೆ, ಸುತ್ತೋಲೆ ಇದೆ, ಈ pandemic, ಕೋವಿಡ್-19 ಅವಧಿಯಲ್ಲಿ ಯಾವುದೇ ಒಂದು tenant ಅವರು ಬಾಡಿಗೆ ಕೊಡದಿದ್ದರೂ ಅವರನ್ನು ಖಾಲಿ ಮಾಡಿಸಬಾರದೆಂದು ಆದೇಶ ಆಗಿದೆ. ಕಾಲೇಜು ನಡೆಯುತ್ತಿದೆ, ಪರೀಕ್ಷೆ ನಡೆಯುತ್ತಿದೆ, ಅದನ್ನು ಖಾಲಿ ಮಾಡಿಸುವುದಕ್ಕೆ ಯಾರು ಅನುಮತಿ ಕೊಟ್ಟಿದ್ದಾರೆಂದು ಹೇಳಿ, ತಕ್ಷಣವೇ ಹೋಗಿ ಆ ಕಾಲೇಜನ್ನು ಓಪನ್ ಮಾಡಿ ಅವರಿಗೆ ಪರೀಕ್ಷೆ ಬರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದಾಗ, ನಾಳೆಯೇ ಹೋಗಿ ಅವರು ಓಪನ್ ಮಾಡುತ್ತಾರೆ. ಮತ್ತೆ against the interim order ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಹೋದಾಗ ಅಲ್ಲೂ ಕೊಟ್ಟಿರುವಂತಹ ಆದೇಶ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿಯೇ ಇದೆ. *'In unauthorized occupation'* ಎಂದು ಇದ್ದರೂ ಸಹ *'the latest application has not been considered as yet.'* ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಅವರು ಅಪ್ಲಿಕೇಶನ್ ಇನ್ನು consider ಮಾಡಲಿಲ್ಲ. '*Secondly, we also think that from the practical point of view and bearing in mind the interest of the students, time ought to be given till 28.02.2021 for the respondent to vacate and surrender possession to the State and its Authorities by removing all movables from the buildings.*' ಎಂದು ಇದೆ. ಅದೇ ಆರ್ಡರ್‌ನಲ್ಲಿ ಮುಂದೆ ಹೋಗಿ ಜಸ್ಟೀಸ್‌ನವರು ಹೇಳುತ್ತಾರೆ, application dated 25th August 2020 ಸರ್ಕಾರದ ಮುಂದೆ ಪೆಂಡಿಂಗ್ ಇದೆ. ಸರ್ಕಾರ ಯಾವುದೇ ರೀತಿ precipitate ಮಾಡಬಾರದು. ಕಟ್ಟಡವನ್ನು ಡೆಮಾಲಿಷ್ ಮಾಡಬಾರದು, till the application is considered, ಎಂದು ಹೈಕೋರ್ಟ್ ಆದೇಶವಿದೆ. ಆ ಆದೇಶದ ಪ್ರಕಾರ ಈ ಸಂಸ್ಥೆಯವರು ಉಚ್ಛ ನ್ಯಾಯಾಲಯದಲ್ಲಿ ಅಫಿಡವಿಟ್ ಫೈಲ್ ಮಾಡಿದ್ದಾರೆ. ಮತ್ತೆ SLP (Special Leave Petition) ಹಾಕಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ಸಲ ಚರ್ಚೆಯಾಗಿದೆ. ನಾವು ಮುಂದೆ ಹಾಕಬೇಕೆಂದು ಪ್ರಯತ್ನ ಮಾಡಿದ್ದೇವೆ. ಸರ್ಕಾರವೂ ಅಫಿಡವಿಟ್ ಹಾಕಬೇಕೆಂದು ಕಾಲಾವಕಾಶ ಕೇಳಿದೆ. That matter is coming on 8th March 2021. ಅದರ ಜೊತೆಗೆ ಈಗಾಗಲೇ ತಾರತಮ್ಯವಾಗಿದೆ ಎಂದು ಹೇಳಿದರೂ ತಪ್ಪಾಗಲಾರದು. ನಮ್ಮ ಅರ್ಜಿ 5 ಎಕರೆ ಜಮೀನು ಹಂಚಿಕೆ ಮಾಡುವುದಕ್ಕೆ 2018-19 ರಿಂದ ಪೆಂಡಿಂಗ್ ಇದೆ. ಸರ್ಕಾರದ ಮತ್ತೊಂದು ಆದೇಶವಿದೆ. ಇಲ್ಲಿರತಕ್ಕಂಥ ಎರಡು-ಮೂರು ಶಿಕ್ಷಣ ಸಂಸ್ಥೆಗಳಿಗೆ ಮೇ 2020 ರಲ್ಲಿ ಅರ್ಜಿಯನ್ನು ಕೊಡುತ್ತಾರೆ. ಜುಲೈ 2020 ಕ್ಕೆ 5 ಎಕರೆ, 9 ಎಕರೆ ಜಮೀನು ಹಂಚಿಕೆಯಾಗುತ್ತದೆ. ನಾವು 40 ವರ್ಷಗಳ ಹಿಂದೆ ಕೊಟ್ಟಿರುವಂಥದ್ದು ಇವತ್ತಿನವರೆಗೂ ಹಂಚಿಕೆಯಾಗುವುದಿಲ್ಲ. Is it not a discrimination? ನಾವು ಎಲ್ಲಿ ಹೋಗಬೇಕು? These are all the issues involved in it. Let the Supreme Court decide on the merit of the case. Till such time, let us not discuss on this matter. Thank you sir.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಆಯ್ಕೆಯಾದವರು)**:- ಮಾನ್ಯ ಸಭಾಪತಿಯವರೇ, ಇಂಜಿನಿಯರ್ ಕಾಲೇಜಿಗೆ ಅಥವಾ ಯಾವುದೇ ಶಿಕ್ಷಣ ಸಂಸ್ಥೆಗೆ ಅನುಮತಿ ಕೊಡಬೇಕೆಂದರೆ, certain rules and regulations ಇರುತ್ತದೆ, ನಿಯಮಗಳಿರುತ್ತದೆ. ಅದಕ್ಕೆ ಇಂತಿಷ್ಟು ಸಿಬ್ಬಂದಿಗಳಿರಬೇಕು, ಇಂತಿಷ್ಟು ಮಕ್ಕಳು ಅಡ್ಮಿಷನ್ ಆಗಿರಬೇಕು, ಇಂತಿಷ್ಟು ಜಾಗ ಇರಬೇಕು, ಆ ಜಾಗ ಸಂಸ್ಥೆಯ ಹೆಸರಿನಲ್ಲಿರಬೇಕು, ಈ ರೀತಿ ನಿಯಮಗಳಿವೆ. ಹಾಗಾಗಿಯೇ ಆ ಕಾಲೇಜಿಗೆ ಅನುಮತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಕ್ಕಿದೆ. ನಮ್ಮ ಸದಸ್ಯರು ಹೇಳಿದ ಹಾಗೆ ಬಹಳಷ್ಟು ವರ್ಷಗಳಿಂದ ಆ ಕಾಲೇಜು ನಡೆಯುತ್ತಿದೆ. ಆ ಕಾಲೇಜನ್ನು ನಡೆಸುತ್ತಿರುವಂತಹ ಸಂದರ್ಭದಲ್ಲಿ ಮತ್ತೆ 5 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡಿರುವುದು ಏಕೆ? ಅದು ಸರ್ಕಾರದ ಜಾಗ ಎಂದು ನಾಮಫಲಕ ಇದೆ. ಅದನ್ನು ಏಕೆ ಸ್ವಾಧೀನಪಡಿಸಿಕೊಂಡರು? ಇದು ಕಾನೂನು ಬಾಹಿರ ಆಗುವುದಿಲ್ಲವೇ ಎಂದು ಸರ್ಕಾರ ಕೋರ್ಟ್‌ಗೆ ಹೋಗುತ್ತದೆ. ಹೈಕೋರ್ಟ್‌ಗೆ ಹೋದಂತಹ ಸಂದರ್ಭದಲ್ಲಿ ಕೋರ್ಟ್‌ನಲ್ಲಿ ಸಾಕಷ್ಟು ವಾದ–ವಿವಾದಗಳು ನಡೆದಾದ ಮೇಲೆ ಇದು ಸರ್ಕಾರದ ಜಾಗ ನೀವು ಕಸ್ಟಡಿಗೆ ತೆಗೆದುಕೊಳ್ಳಿ ಎಂದು ಅಂತಿಮವಾಗಿ ಜಡ್ಜ್‌ಮೆಂಟ್ ಬರುತ್ತದೆ. ಈ ಸರ್ಕಾರಕ್ಕೆ ಹೈಕೋರ್ಟ್ ತೀರ್ಪು ಕೊಟ್ಟಂತಹ ಸಂದರ್ಭದಲ್ಲಿ ಸರ್ಕಾರ ಹೈಕೋರ್ಟ್ ತೀರ್ಪನ್ನು ಪಾಲನೆ ಮಾಡಬೇಕೋ ಮಾಡಬಾರದೋ? ಅಕಸ್ಮಾತ್ ಮಾಡದಿದ್ದಾಗ contempt of Court ಆಗುವುದಿಲ್ಲವೇ? ಅವರು ಸುಪ್ರೀಂ ಕೋರ್ಟ್‌ಗೆ ಹೋಗಿರಬಹುದು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ಗೆ ಸರ್ಕಾರ ಬದ್ಧವಾಗಿರುತ್ತದೆ. ಆದರೆ ಸುಪ್ರೀಂ ಕೋರ್ಟ್ ತೀರ್ಪು ಬರುವವರೆಗೆ ಹೈಕೋರ್ಟ್ ಜಡ್ಜ್‌ಮೆಂಟ್ ಜಾರಿಯಲ್ಲಿರುತ್ತದೆ. ಹಾಗಾಗಿ ತಮ್ಮ ಮೂಲಕ ನಾನು ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ. ಈ ಜಮೀನು ಸರ್ಕಾರದ ಜಮೀನು. ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಅವರು ಶಿಕ್ಷಣ ಸಂಸ್ಥೆಯನ್ನು ಸರ್ಕಾರ ಅನುಮತಿ ಕೊಟ್ಟಾದ ಮೇಲೆ ನಡೆಸುತ್ತಿದ್ದಾರೆ. ಅಲ್ಲಿ ಬಹಳಷ್ಟು ಪರೀಕ್ಷೆಗಳನ್ನು ನಡೆಸಿದ್ದಾರೆ. ಕೋವಿಡ್–19 ಸಂದರ್ಭದಲ್ಲಿ ಯಾವುದೇ ಪರೀಕ್ಷೆಗಳನ್ನು ನಡೆಸುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿರುವುದಿಲ್ಲ. ಈ ರೀತಿ ಸುಳ್ಳು ಮಾಹಿತಿಯನ್ನು ರಾಜ್ಯಕ್ಕೆ ಸದನಕ್ಕೆ ಕೊಡುತ್ತಿದ್ದಾರೆ. ಆ ಜಾಗವನ್ನು ಹೈಕೋರ್ಟ್ ಕೊಟ್ಟಿರುವ ಜಡ್ಜ್‌ಮೆಂಟ್‌ನ್ನು ಆಧಾರಿಸಿ ಕಸ್ಟಡಿಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್**:– ಮಾನ್ಯ ಸಭಾಪತಿಯವರೇ, I am on point of order. ಪರೀಕ್ಷೆ ನಡೆಸುವುದಕ್ಕೆ ವಿಶ್ವವಿದ್ಯಾಲಯದಿಂದ ಟೈಮ್‌ಟೇಬಲ್ ಬರುತ್ತದೆ. ಟೈಮ್‌ಟೇಬಲ್‌ನ್ನು ನಾನು ಸದನಕ್ಕೆ ಕೊಡುವುದಕ್ಕೆ ತಯಾರಿದ್ದೇನೆ. ಅವರು ಸುಳ್ಳು ಎಂದು ಹೇಳಿದರು.

**ಸಭಾಪತಿಯವರು**:– ಮಾನ್ಯ ನಸೀರ್ ಅಹ್ಮದ್‌ರವರೇ, ಈಗ ಮಾನ್ಯ ಸಚಿವರು ಉತ್ತರ ಹೇಳಲಿ.

(ಮುಂದು)

279/4-3-2021/1-20/bkp-gr

**ಸಭಾಪತಿಯವರು (ಮುಂದು:–**

ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು, ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್( ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ವತಿಯಿಂದ ಹಲವಾರು ಸದಸ್ಯರು ಮಾತನಾಡಿದ್ದಾರೆ. ಮತ್ತೆ ಸದಸ್ಯರಾದ ಶ್ರೀ ಎನ್. ರವಿಕುಮಾರ್ ರವರು ಮಾತನಾಡಿದ್ದಾರೆ, ಇದು ಸರ್ಕಾರದ್ದು ಎಂದು ಹೈಕೋರ್ಟ್‌ನಲ್ಲಿ ಹೇಳಿರುವುದು ಸತ್ಯ ಇದೆ. ಅದರಲ್ಲಿ ಎರಡು ಮಾತಿಲ್ಲ. ಈಗ ಸುಪ್ರೀಂ ಕೋರ್ಟ್‌ಗೆ ಹೋಗಿ ಅಪೀಲ್ ಹಾಕಿರುವುದರಿಂದ ಅದು ಅಲ್ಲಿ ಬರುವುದರಿಂದ ಈಗ ಸರ್ಕಾರ ಅಫಿಡವಿಟ್ ಹಾಕಬೇಕು. ಆ ಒಂದು ಹಂತದಲ್ಲಿ ನಾವು ಇದ್ದೇವೆ. ಆದ್ದರಿಂದ, ಈಗ ನಾವು ಅಫಿಡವಿಟ್ ಹಾಕಿದ ಮೇಲೆ ಏನು ವಿಚಾರವೆಂದು ನಂತರ ಹೇಳುತ್ತೇನೆ. ಅದು ಇಲಾಖೆಯ ಒಂದು ತೀರ್ಮಾನವಾಗುತ್ತದೆ. ಆದ್ದರಿಂದ ಅಫಿಡವಿಟ್ ಹಾಕುತ್ತೇವೆ. ಹೈಕೋರ್ಟ್ ಆದೇಶ ಏನಿದೆ, ಅದರ ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆ.

**ಸಭಾಪತಿಯವರು:** ಆಯಿತು, ಒಟ್ಟಿನಲ್ಲಿ ಯಾವುದೇ ರೀತಿಯಲ್ಲಿ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಸದನದಲ್ಲಿ ಹಾಜರಿರುವುದಿಲ್ಲ. ಮತ್ತೆ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ನೀಡಿರುವ ಶೂನ್ಯ ವೇಳೆಯ ವಿಚಾರವನ್ನು ನಾನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದು, ಸದರಿ ವಿಚಾರವನ್ನು ಸದನದಲ್ಲಿ ಓದುವುದು.

**8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಇ)ಮೈಸೂರಿನ ಸಮಾರಂಭವೊಂದರಲ್ಲಿ ಹಿರಿಯ ಸಾಹಿತಿ ಶ್ರೀ ಎಸ್.ಎಲ್. ಭೈರಪ್ಪನವರು ತಿಗಳ(ವಹ್ನಿಕುಲ) ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಕುರಿತು ಮಾತನಾಡಿರುವರೆನ್ನಲಾದ ಅವಹೇಳನಕಾರಿ ಮಾತುಗಳ ಬಗ್ಗೆ.**

---------

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಅಂತು, ಇಂತು ಮಾನ್ಯ ಸಭಾಪತಿಯವರಿಗೆ ಮನಸ್ಸು, ಕರುಣೆ ಎಲ್ಲಾ ಬಂದಿದೆ.

**ಸಭಾಪತಿಯವರು:-** ಈ ವಿಚಾರವಾಗಿ ನಾನು ನಿಮಗೆ ನಂತರ ಹೇಳುತ್ತೇನೆ.

**ಶ್ರೀ ಪಿ. ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ಇದು ಪೌರಾಣಿಕ ಹಿನ್ನೆಲೆ ಇರತಕ್ಕಂತಹ. .

**ಸಭಾಪತಿಯವರು:-** ಮಾನ್ಯ ಸದಸ್ಯರು ಭಾಷಣ ಮಾಡದೇ ಓದಬೇಕು. ಇದಕ್ಕಿರುವ ನಿಯಮವನ್ನು ಪಾಲಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಪಿಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ಸಾಹಿತಿ ಸನ್ಮಾನ್ಯ ಎಸ್.ಎಲ್. ಭೈರಪ್ಪನವರು ಮೈಸೂರಿನ ಸಮಾರಂಭವೊಂದರಲ್ಲಿ ದಿನಾಂಕ: 21-02-2021 ರಂದು ತಿಗಳ (ವಹ್ನಿಕುಲ)ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ದ್ರೌಪದಿ ಆದಿ ಪರಾಶಕ್ತಿಯಾಗಿದ್ದು, ಬೆಂಗಳೂರು ನಗರದ ದೈವಸಂಭೂತಳಾಗಿ, ನೂರಾರು ವರ್ಷಗಳಿಂದ ಗೌರವಿಸುತ್ತಾ ಹಾಗೂ ಆರಾಧಿಸುತ್ತಾ ಬಂದಿರುವ ರಾಜ್ಯದ ಜನತೆಯ ಭಾವನೆಗಳಿಗೆ ಧಕ್ಕೆ ಉಂಟಾಗಿದೆ.

8 ಜ್ಞಾನಪೀಠ ಪ್ರಶಸ್ತಿಗಳನ್ನು ಮುಡಿಗೇರಿಸಿರುವ ಕನ್ನಡ ಸಾರಸ್ವತ ಲೋಕಕ್ಕೆ ತನ್ನದೇ ಆದ ಹಿರಿಮೆ ಇದೆ. ಆದರೆ, ತಮ್ಮದೇ ಪರಿಕಲ್ಪನೆಯಲ್ಲಿ ತಮಗೆ ತೋಚಿದ್ದನ್ನು ತಮಗೆ ಬೇಕಾದ ರೀತಿಯಲ್ಲಿ ಚಿತ್ರಿಸುವ ಶ್ರೀಯುತ ಭೈರಪ್ಪನವರ ಹೇಳಿಕೆ ದಿನಾಂಕ 22-2-2021 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ **"ಹೊತ್ತೊಯ್ಯುವ ತಾಳ್ಮೆ ಇತ್ತೆ?"** ಎಂಬ ಶೀರ್ಷಿಕೆಯಲ್ಲಿ ' ದ್ರೌಪದಿಯು ಆಕರ್ಷಿತ ಹೆಣ್ಣು. . . . ಆಕೆಯ ಮೇಲೆ ಹತ್ತಾರು ಜನರ ಕಣ್ಣಿತ್ತು' ಎಂಬುದಾಗಿ ವಿಶ್ಲೇಷಿಸುತ್ತಾ ಅಸಹ್ಯ ಹಾಗೂ ಅವಹೇಳನ ಹೇಳಿಕೆಯೊಂದಿಗೆ ಹೆಣ್ಣು ಕುಲಕ್ಕೆ ಅಪಮಾನ ತೋರಿರುವ 90ರ ಸಾಹಿತಿಗೆ ಬುದ್ದಿ ಭ್ರಮಣೆಯಾಗಿದೆಯೇ?

ಶ್ರೇಷ್ಠ ಕುಲದವರಾದ ಇವರ ಕೃತಿಗಳು ದೇಶಿ ಹಾಗೂ ವಿದೇಶಿ ಭಾಷೆಗಳಿಗೆ ಭಾಷಾಂತರಗೊಂಡಿದ್ದು, ಇವರು ಹೇಳುವ ಅಸಂಬದ್ಧ, ವಿಕೃತ ಹೇಳಿಕೆಯಿಂದ ನಮ್ಮ ಶ್ರೇಷ್ಠ ಗ್ರಂಥಗಳಾದ ರಾಮಾಯಣ ಹಾಗೂ ಮಹಾಭಾರತದ ಬಗ್ಗೆ ವಿದೇಶಿ ಓದುಗರಲ್ಲಿ ಅಪಹಾಸ್ಯ ಮತ್ತು ಅಗೌರವ ಭಾವನೆ ಉಂಟಾಗುವುದಿಲ್ಲವೇ?

ದೈವ ಸ್ವರೂಪಿಯಾದ ದ್ರೌಪದಿ ಶಕ್ತಿ ಹಾಗೂ ಹೆಣ್ಣಿನ ಕುಲದ ಚಾರಿತ್ರ್ಯವನ್ನೇ ಅಣಕಿಸುವಂತಹ ಇವರ ಕೀಳು ಹೇಳಿಕೆ ಮಾಧ್ಯಮಗಳು ಹಾಗೂ ಸಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗಿದ್ದು, ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಭೈರಪ್ಪನವರ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಹಾಗೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ವಿಶ್ಲೇಷಣೆಯಿಂದ ಸಾರ್ವಜನಿಕರಲ್ಲಿ ಆಘಾತ ಉಂಟಾಗಿದೆ. ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಿದ್ದು, ಉದ್ದೇಶಪೂರ್ವಕ ಸಾರ್ವಜನಿಕ ಕಿಡಿಗೇಡಿತನದ ಕೃತ್ಯಕ್ಕೆ ಕಾನೂನಿನ ಕಡಿವಾಣವೇ ಸೂಕ್ತವಾಗಿದೆ. ಇಂತಹ ಕಲುಷಿತ ಹೇಳಿಕೆ ನೀಡಿರುವ ಶ್ರೀಯುತ ಭೈರಪ್ಪನವರ ವಿರುದ್ಧ ಐಪಿಸಿ ಸೆಕ್ಷನ್ 295-ಎ, 298, 505, 153-ಎ ಅನ್ವಯ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ಪ್ರಸ್ತಾಪಿಸಿ ಸೂಕ್ತ ಕ್ರಮಕ್ಕಾಗಿ ರಾಜ್ಯದ ಜನತೆಯ ಪರವಾಗಿ ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹಿರಿಯ ಎಸ್.ಎಲ್. ಶ್ರೀ ಭೈರಪ್ಪನವರ ಬಗ್ಗೆ ಏನು ಉಲ್ಲೇಖ ಮಾಡಿದ್ದಾರೆ, ಅದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:** ಆಗಬಹುದು. ಇದರ ಬಗ್ಗೆ ಯಾವುದೇ ಚರ್ಚೆ ಇಲ್ಲ.

## 9. ಗಮನ ಸೆಳೆಯುವ ಸೂಚನೆ

**ವಿಷಯ:** ಹಿಂದುಳಿದ ವರ್ಗಗಳ ಆಯೋಗವು 2014–15ನೇ ಸಾಲಿನಲ್ಲಿ ಕೈಗೊಂಡಿರುವ ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಸಲ್ಲಿಸದಿರುವ ಬಗ್ಗೆ.

– – – – –

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್(ನಾಮನಿರ್ದೇಶಿತರು):–**ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗವು 2014–15ನೇ ಸಾಲಿನಲ್ಲಿ ಕೈಗೊಂಡಿರುವ ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಸಲ್ಲಿಸದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ):–** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರ 2014–15ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ರಾಜ್ಯದ ಪ್ರತಿ ಕುಟುಂಬವಾರು ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಕೈಗೊಂಡಿದ್ದು, ಅದಕ್ಕಾಗಿ ಸುಮಾರು 160 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಸಮೀಕ್ಷೆಯ ವರದಿಯನ್ನು ನೀಡಬೇಕೆಂದು ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಸಿ.ಕೊಂಡಯ್ಯ, ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ, ಶ್ರೀ ಎಸ್.ಆರ್. ಪಾಟೀಲ್, ವಿರೋಧ ಪಕ್ಷದ ನಾಯಕರು, ಶ್ರೀ ಅಡಗೂರು ಹೆಚ್. ವಿಶ್ವನಾಥ್, ಶ್ರೀ ಮರಿತಿಬ್ಬೇಗೌಡ, ಶ್ರೀ ಆರ್ ಧರ್ಮಸೇನ ರವರು ಉಲ್ಲೇಖ ಮಾಡಿದ್ದಾರೆ, ಈಗಾಗಲೇ ಈ ಬಗ್ಗೆ ಸ್ಪಷ್ಟವಾದ ಮಾಹಿತಿಗಳಿವೆ. ಅದೇನೆಂದರೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಕುರಿತು 54 ಮಾನನದಂಡಗಳನ್ನೊಳಗೊಂಡ ಸುದೀರ್ಘ ಸಮೀಕ್ಷೆಯನ್ನು ಮಾಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ ಹಂತದಲ್ಲಿ ಮಾನ್ಯ ಸದಸ್ಯರ ಕೋರಿಕೆಯ ಮೇರೆಗೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸಚಿವರ ಲಿಖಿತ ಉತ್ತರವನ್ನು ಮಾನ್ಯ ಸದಸ್ಯರುಗಳಿಗೆ ನೀಡಲಾಯಿತು)

ಇದಕ್ಕೆ ಸುಮಾರು 1.33 ಲಕ್ಷ ಶಿಕ್ಷಕ ಗಣತಿದಾರರು 22190 ಮೇಲ್ವಿಚಾರಕರು, 2288 ತರಬೇತಿದಾರರು, 727 ಮುಖ್ಯಾಧಿಕಾರಿಗಳನ್ನೊಳಗೊಂಡಂತೆ ಒಟ್ಟು 1 ಲಕ್ಷದ 60 ಜನ ಅಧಿಕಾರಿಗಳು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ.

ಶ್ರೀ ಹೆಚ್.ಕಾಂತರಾಜು ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 2015 ರಲ್ಲಿ ಕೈಗೊಳ್ಳಲಾಗಿದ್ದು ಸಮೀಕ್ಷೆಯ ವರದಿಯನ್ನು ಸಿದ್ಧಪಡಿಸಿರುತ್ತದೆ. ಶ್ರೀ ಹೆಚ್. ಕಾಂತರಾಜುರವರ ನೇತೃತ್ವದ ಆಯೋಗದ ಪದಾವಧಿಯು ದಿನಾಂಕ 21.09.2019 ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಅಂದು ಸಲ್ಲಿಕೆಯಾಗಿರುವುದಿಲ್ಲ.

ಪ್ರಸ್ತುತ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ದಿನಾಂಕ23-11-2020 ರಂದು ಸರ್ಕಾರದಿಂದ ನೇಮಕಗೊಳಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಆಯೋಗದ ಜೊತೆಗೆ ಚರ್ಚೆ ಮಾಡಿ ವರದಿಯನ್ನು ತರಿಸಿಕೊಳ್ಳುವಂತಹ ಕೆಲಸಗಳನ್ನು ಮಾಡುವಂತಹ ಪ್ರಯತ್ನಗಳನ್ನು ಮಾಡುತ್ತೇವೆ ಎನ್ನುವಂತಹ ಉತ್ತರವನ್ನು ಕೊಡುತ್ತಿದ್ದೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ವಿಧಾನಸಭೆಯಿಂದ ಚುನಾಯಿತರಾದವರು):** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದನೆಗಳು. ನಾನು ಪ್ರಾರಂಭದಿಂದಲೂ ಕೂಡ ಈ ಜಾತಿವಾರು ಜನಗಣತಿಯ ವರದಿಯನ್ನು ಕೊಡಿ ಎಂದು ಕೇಳುತ್ತಲೇ ಬಂದಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿಯೂ ಕೂಡ ಈ ವರದಿಯನ್ನು ಬಹಿರಂಗಗೊಳಿಸಲಿಲ್ಲ. ಆ ಸಂದರ್ಭದಲ್ಲಿ ಅಲ್ಲಿ ಆವತ್ತಿನ ಸಚಿವರು ಆದಷ್ಟು ಬೇಗ ಕೊಡುತ್ತೇನೆಂದು ಹೇಳಿದ್ದರು. ನಂತರ ಸಮ್ಮಿಶ್ರ ಸರ್ಕಾರ ಬಂತು, ಆ ಸಮಯದಲ್ಲಿಯೂ ಕೂಡ ಆಗಲಿಲ್ಲ. ಅದು ಆದನಂತರ ಭಾರತೀಯ ಜನತಾ ಪಕ್ಷದ ಸರ್ಕಾರವಿದೆ. ಇದನ್ನು ಕೂಡ ನಾನು ಒಂದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಜಾತಿವಾರು ಜನಗಣತಿಗೆ ಎಷ್ಟೆಲ್ಲಾ ಖರ್ಚಾಗಿದೆ ಹಾಗೂ ಎಷ್ಟೆಲ್ಲಾ ಶ್ರಮವಾಗಿದೆ, ದೇಶದಲ್ಲಿಯೇ ಮಾಡದೇ ಇರತಕ್ಕಂತಹ ಒಂದು ಕಾರ್ಯಕ್ರಮವನ್ನು ಮಾಡಿದರೂ ಕೂಡ ಅದರ ವರದಿ ಬಂದಿಲ್ಲವೆನ್ನುವಂತಹ ಸಂದರ್ಭದಲ್ಲಿ ಕಳೆದ ಬಾರಿ ಅದರ ಆಯೋಗದ ಅಧ್ಯಕ್ಷರಾಗಲಿಲ್ಲ, ಅಧ್ಯಕ್ಷರಾದ ನಂತರ ಆ ವರದಿಯನ್ನು ಬಹಿರಂಗಪಡಿಸುತ್ತೇವೆ ಎನ್ನುವಂತಹ ಮಾತು ಬಂತು. ಮತ್ತೆ ಈಗ ಆಯೋಗದ ಅಧ್ಯಕ್ಷರಾಗಿ ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯ್ಕೆಯಾಗಿದ್ದಾರೆ. ನಮ್ಮ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರು ಕಳೆದ ಅಧಿವೇಶನದಲ್ಲಿ 'ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಈ ವಿಷಯವಾಗಿ ಚರ್ಚೆ ಮಾಡಿ ಆದಷ್ಟು ಬೇಗ ಬಹಿರಂಗಪಡಿಸುತ್ತೇನೆ' ಎಂದು ಹೇಳಿದರು. ಆದರೆ, ಚರ್ಚೆಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

(ಮುಂದು)

(280) 04.03.2021 01.30 ಎಸ್‌ವಿ-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ಮುಂದು):-**

ಅದರ ಚರ್ಚೆ ಆಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಈಗ ಇಡೀ ರಾಜ್ಯ ಮೀಸಲಾತಿಗಳ ಬಗ್ಗೆ ಹೋರಾಟವನ್ನು ಮಾಡುತ್ತಿದೆ. ಪಂಚಮಸಾಲಿ ಸಮಾಜದವರು ಹಿಂದುಳಿದ ವರ್ಗಕ್ಕೆ ಸೇರಬೇಕು ಎಂದು ರಾಜ್ಯಾದ್ಯಂತ ದೊಡ್ಡ ದೊಡ್ಡ ಹೋರಾಟಗಳನ್ನು ಮಾಡುತ್ತಿದ್ದಾರೆ. ಅದರೊಟ್ಟಿಗೆ ಹಿಂದುಳಿದ ವರ್ಗದಲ್ಲಿರುವ ಕುರುಬ ಸಮಾಜದವರೂ ಕೂಡ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಹೋರಾಟವನ್ನು ಮಾಡುತ್ತಿದ್ದಾರೆ. ಅವರೊಟ್ಟಿಗೆ ತಿಗಳರು, ದೇವಾಂಗದವರು, ಸವಿತಾ ಸಮಾಜದವರು, ವಿಶ್ವಕರ್ಮರು ಒಳಮೀಸಲಾತಿಯ ಜೊತೆಗೆ ಪರಿಶಿಷ್ಟ ಪಂಗಡಕ್ಕೆ ಹೋಗಬೇಕೆಂದು ಕೇಳುತ್ತಿದ್ದಾರೆ. ಈ ಎಲ್ಲಾ ಹೋರಾಟಗಳಿಗೂ ಪೂರ್ಣ ವಿರಾಮವನ್ನಿಡಬೇಕೆನ್ನುವುದಾದರೆ, ಗೊಂದಲಗಳುಂಟಾಗಬಾರದು ಎನ್ನುವುದಾದರೆ ಈ ವರದಿಯನ್ನು ಬಿಡುಗಡೆಗೊಳಿಸಬೇಕು. ಇದು ಕೇವಲ ಹಿಂದುಳಿದ ವರ್ಗಗಳಲ್ಲಿರುವ ಜಾತಿಯ ವಿಚಾರ ಮತ್ತು ಸಂಖ್ಯೆಯ ವಿಚಾರವಾಗಿಲ್ಲ. 6.5 ಕೋಟಿ ಜನಸಂಖ್ಯೆ ಇದ್ದು, ಯಾವ ಯಾವ ಜಾತಿಯ ಜನಸಂಖ್ಯೆ ಎಷ್ಟಿದೆ, ಎಷ್ಟು ಮೀಸಲಾತಿ ಇದೆ, ಯಾರಿಗೆ ಸರ್ಕಾರಗಳಲ್ಲಿ ಅವಕಾಶ ಸಿಕ್ಕಿದೆ? ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಯಾರು ಯಾವ ಸ್ಥಾನಗಳಲ್ಲಿದ್ದಾರೆ ಎಂಬುದು ಸ್ಪಷ್ಟವಾಗಿ ಎಲ್ಲರಿಗೂ ಮನವರಿಕೆಯಾಗುತ್ತದೆ. ಈ ವರದಿಯಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ. ಅದು ಬಿಟ್ಟು ವರದಿಯ ಸಲ್ಲಿಕೆಯನ್ನು ಮುಂದೆ ಹಾಕುತ್ತಾ ಹೋದಂತೆಲ್ಲಾ ನಮ್ಮ ನಮ್ಮ ಸಮಾಜಗಳಲ್ಲಿಯೇ ಗೊಂದಲಗಳು ಪ್ರಾರಂಭವಾಗುತ್ತವೆ. ಪಂಚಮಸಾಲಿ ಎನ್ನುವ ದೊಡ್ಡ ಸಮಾಜ ಹಿಂದುಳಿದ ವರ್ಗಕ್ಕೆ ಸೇರಬೇಕೆಂದು ಹೋರಾಟ ಮಾಡುತ್ತಿದೆ. 102 ಜಾತಿಗಳಿರುವ ಹಿಂದುಳಿದ ವರ್ಗಗಳಲ್ಲಿ ಸಣ್ಣ ಸಣ್ಣ ಸಮಾಜಗಳಿದ್ದು, ದುರ್ಬೀನು ಹಾಕಿ ನೋಡಿದರೂ ಆ ಸಮಾಜಗಳು ಎಲ್ಲಿದೆಯೆಂಬುದು ತಿಳಿಯುತ್ತಿಲ್ಲ. ಕೆಲವು ಜಾತಿಗಳ ಹೆಸರು ಅಧಿಕಾರಿಗಳಿಗೆ ತಿಳಿದಿಲ್ಲ ಎಂದು ನಾನು ಎಷ್ಟೋ ಬಾರಿ ಹೇಳಿದ್ದೇನೆ. ಆ ಜಾತಿಗಳ ಪವಾಡ ಪುರುಷರ ಭಾವಚಿತ್ರಗಳನ್ನು ತೋರಿಸಿದರೆ ಯಾರಿವರು ಎನ್ನುವಷ್ಟರ ಮಟ್ಟಿಗೆ ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಜಗಳು ನಿರ್ಲಕ್ಷ್ಯಕ್ಕೆ ಗುರಿಯಾಗಿವೆ. ಎಲ್ಲರೂ ಮೀಸಲಾತಿಗಾಗಿ ಹೋರಾಟ ಮಾಡುತ್ತಿರುವ ಈ ಸಂದರ್ಭದಲ್ಲಿ ಜಾತಿವಾರು ಗಣತಿಯ ವರದಿಯನ್ನು ನೀಡುವುದು ಬಹಳ ಒಳ್ಳೆಯ ಕೆಲಸ.

ಸರ್ಕಾರಕ್ಕೆ ಮುಜುಗರ ತರಬೇಕೆಂದು ನಾನು ಮಾತನಾಡುತ್ತಿಲ್ಲ. ಅವರು ಯಾರೇ ಆಗಿರಲಿ, ಎಷ್ಟೇ ಬಲಿಷ್ಠವಾಗಿರಲಿ, ರಾಜಕೀಯವಾಗಿ ಎಷ್ಟೇ ಬೆಳೆದಿರಲಿ, ಎಷ್ಟೇ ಅಧಿಕಾರ ಉಳ್ಳವರಾಗಿರಲಿ, ಸಣ್ಣ ಸಣ್ಣ ಸಮಾಜಗಳಿಗೆ ಸಾಮಾಜಿಕ ನ್ಯಾಯವನ್ನು ಕೊಡದೇ ಹೋದರೆ ಅದು ನಾವು ದೇಶಕ್ಕೆ ಮಾಡ್ತುವ ಅಪಚಾರವೆಂದು ನಾನು ಭಾವಿಸುತ್ತೇನೆ. ಎಲ್ಲರಂತೆಯೇ ನಾವೂ ಬದುಕಬೇಕೆನ್ನುವ ಅವಕಾಶ ಬೇಕೆಂದರೆ, ನಮ್ಮ ನಮ್ಮ ಸಮಾಜಗಳ ಜನಸಂಖ್ಯೆ ಎಷ್ಟಿದೆ ಎಂಬುದು ತಿಳಿದಾಗ ಮಾತ್ರ ಸಾಧ್ಯವಾಗುತ್ತದೆ. ಇದು ಕೇವಲ ನನ್ನೊಬ್ಬನ ಪ್ರಶ್ನೆಯಲ್ಲ. ಆ ವರದಿ ಬಿಡುಗಡೆಯಾಗಬೇಕೆಂದು ರಾಜ್ಯದ ಶೇ.99 ಜನ ಬಯಸುತ್ತಿದ್ದಾರೆ. ಯಾವ ಬಲಿಷ್ಠ ಕೈಗಳು ಅದನ್ನು ತಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನಮ್ಮಂತೆ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಸಮಾಜದವರಿಗೆ ಆ ವರದಿಯು ಬಹಳ ಮುಖ್ಯವಾಗುತ್ತದೆ. ಸಂವಿಧಾನದ ಆಶಯದಂತೆ ಎಲ್ಲರಿಗೂ ಅವಕಾಶಗಳು ಸಿಗಬೇಕು ಎನ್ನುವುದಾದರೆ ಈ ಜಾತಿವಾರು ಜನಗಣತಿಯನ್ನು ಬಹಿರಂಗಪಡಿಸಬೇಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾನಾಯಕರೇ, ಉತ್ತರ ಬಂದಿರುವುದಿಲ್ಲ. ನಮಗೆ ಉತ್ತರ ಬೇಡವೇ? ಬಹಳ tactful ಆಗಿ deal ಮಾಡಿದ್ದೀರಿ. ಉತ್ತರವನ್ನು ಕೊಡದೆ ಅರ್ಧ ಹೇಳಿ ಭಾಷಣ ಮಾಡುವುದಕ್ಕೆ ಬಿಟ್ಟಿದ್ದೀರಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದು ಗಮನ ಸೆಳೆಯುವ ಸೂಚನೆ. ಉತ್ತರ ಬಂದ ನಂತರ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕಲ್ಲವೇ? ಇನ್ನೂ ಏಕೆ ಉತ್ತರವನ್ನು ಕೊಟ್ಟಿಲ್ಲ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಷ್ಟೊಂದು ಮಹತ್ವವಾದ ವಿಚಾರದ ಬಗ್ಗೆ ಚರ್ಚೆಯಾಗುತ್ತಿದ್ದು, ಅನೇಕರು ಸಹಿ ಮಾಡಿದ್ದಾರೆ. ಇನ್ನೂ ಉತ್ತರವನ್ನೇ ಕೊಟ್ಟಿಲ್ಲ. ಈ ರೀತಿ ನಾನು ಎಲ್ಲಿಯೂ ನೋಡಿಲ್ಲ. ನಮಗೆ ಉತ್ತರವನ್ನು ಒದಗಿಸಿದ ನಂತರವೇ ಅದರ ಬಗ್ಗೆ ಚರ್ಚೆ ಮಾಡಲಾಗುತ್ತದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನು ಮಹತ್ವದ ವಿಷಯವೆಂದು ಪರಿಗಣಿಸಿ, ಜರೂರಾಗಿ ಉತ್ತರವನ್ನು ಒದಗಿಸಬೇಕೆಂದು ಹೇಳಿದ್ದೇನೆ. ಮಾನ್ಯ ಸಭಾನಾಯಕರೇ, ಬೇಗ ಉತ್ತರವನ್ನು ಒದಗಿಸಿ. ಈ ವಿಷಯವನ್ನು ಮಧ್ಯಾಹ್ನ ತೆಗೆದುಕೊಳ್ಳೋಣ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನನ್ನದೊಂದು ಪ್ರಾರ್ಥನೆ. ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ತೆಗೆದುಕೊಳ್ಳಿ. ಒಂದು ದೇಶ-ಒಂದು ಚುನಾವಣೆ ವಿಷಯವನ್ನು ಬಿಟ್ಟು, ಈ ವಿಷಯವನ್ನು ತೆಗೆದುಕೊಳ್ಳೋಣ.

**(ಈ ಹಂತದಲ್ಲಿ ಉತ್ತರಗಳ ಪ್ರತಿಗಳನ್ನು ಸದನಕ್ಕೆ ಒದಗಿಸಲಾಯಿತು.)**

**ಸಭಾಪತಿಯವರು**:- ಎಲ್ಲರಿಗೂ ಉತ್ತರದ ಪ್ರತಿಗಳನ್ನು ಕೊಡಿ. ಮಾನ್ಯ ವಿಶ್ವನಾಥ್ ಅವರೇ, ತಾವು ಮಾತನಾಡಿ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಈ ವಿಷಯದ ಚರ್ಚೆಗೆ ಬಹಳ ಸಮಯ ಬೇಕು.

**ಸಭಾಪತಿಯವರು**:- ಮಾನ್ಯ ವಿಶ್ವನಾಥ್ ಅವರೇ, ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ಆ ನಿಯಮದ ಪ್ರಕಾರ ಹೋಗಬೇಕು. ಈಗ ನೀವು ಮಾತನಾಡಿ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್**:- ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ನಂಜುಂಡಿಯವರು ಸದನದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬದುಕುತ್ತಿರುವ ಎಲ್ಲಾ ಜಾತಿ, ಜನಾಂಗ, ಧರ್ಮ ಹಾಗೂ ಭಾಷಿಕರ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಹಿಂದೆ ಇದ್ದಂತಹ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಕಾಂತರಾಜ್ ಆಯೋಗವನ್ನು ಮಾಡಿತ್ತು. ಆ ಆಯೋಗದ ವರದಿಯು ಇನ್ನೂ ಏಕೆ ಬಿಡುಗಡೆಯಾಗಲಿಲ್ಲ? ಏಕೆಂದರೆ ಈ ವಿಷಯ ಇಂದಿನ ದಿನಗಳಲ್ಲಿ ಬಹಳ ಪ್ರಸ್ತುತ. ಇಡೀ ರಾಜ್ಯವೇ ಇಂದು ಮೀಸಲಾತಿಯ ವಿಷಯದಲ್ಲಿ ಬೆಂದು ಹೋಗುತ್ತಿದೆ. ಮೇಲ್ವರ್ಗದವರಿಂದ ಹಿಡಿದು ಕೆಳವರ್ಗದವರ ತನಕ ಎಲ್ಲಾ ಸಮುದಾಯಗಳು ನೂರಾರು ಕಿಲೋಮೀಟರ್‌ಗಳ ಪಾದಯಾತ್ರೆಯನ್ನು ಮಾಡುತ್ತಿವೆ. ಪಂಚಮಸಾಲಿ ಸಮುದಾಯದ ಸ್ವಾಮೀಜಿಗಳು 680 ಕಿ.ಮೀ. ಪಾದಯಾತ್ರೆಯನ್ನು ಮಾಡಿದ್ದಾರೆ. ಕುರುಬ ಸಮುದಾಯದ ಸ್ವಾಮೀಜಿಗಳು 340 ಕಿ.ಮೀ. ಪಾದಯಾತ್ರೆಯನ್ನು ಮಾಡಿದ್ದಾರೆ. ಇಡೀ ರಾಜ್ಯವು ಇಂದು ಮೀಸಲಾತಿಯಲ್ಲಿ ಬೆಂದು ಹೋಗುತ್ತಿದೆ. ಅದನ್ನು ಶಮನ ಮಾಡಲು ಕಾಂತರಾಜ್ ಆಯೋಗದ ವರದಿಯನ್ನು ಸರ್ಕಾರ ಸ್ವೀಕಾರ ಮಾಡಬೇಕು. ಚರ್ಚೆಗೆ ಬಿಡಬೇಕು. ಅದರ ಮೇಲೆ ಕ್ರಮಗಳಾದರೆ ನಾವು ಯಾರು ಏನು ಕೇಳುತ್ತಿದ್ದೇವೆಯೋ ಅದಕ್ಕೆ ಉತ್ತರ ಸಿಗುತ್ತದೆ. ಅದು ವೀರಶೈವರಾಗಿರಬಹುದು, ಒಕ್ಕಲಿಗರಾಗಿರಬಹುದು, ದಲಿತರಲ್ಲಿ ಒಳ ಮೀಸಲಾತಿಯಿರಬಹುದು, ಕುರುಬರು ಇರಬಹುದು. ಆದರೆ ಏಕೋ ಏನೋ ಕಾಣೆ. ಕಾಂತರಾಜ್ ಆಯೋಗ ಬಹಳ ವೈಜ್ಞಾನಿಕವಾಗಿ ಸುಮಾರು ರೂ.165 ಕೋಟಿಗಳನ್ನು ಖರ್ಚು ಮಾಡಿ ದೇಶದಲ್ಲಿಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಥಮವಾಗಿ ಜಾತಿವಾರು ಜನಗಣತಿಯನ್ನು ರಾಜ್ಯದಲ್ಲಿ ಮಾಡಿದರು. ಅದನ್ನು ಸ್ವೀಕಾರ ಮಾಡಲಿಕ್ಕೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಹಿಂದೇಟು ಹಾಕಿತು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿ ಗೌಡ ಅವರು ಎದ್ದು ನಿಂತು ಮಾತನಾಡತೊಡಗಿದರು.)**

**ಸಭಾಪತಿಯವರು:–** ಮಾನ್ಯ ವಿಶ್ವನಾಥ್ ಅವರು ಮಾತನಾಡುವುದನ್ನು ಹೊರತುಪಡಿಸಿ, ಬೇರಾವುದೂ ಕಡತಕ್ಕೆ ಹೋಗಬಾರದು. ಪೀಠದ ಅನುಮತಿಯನ್ನು ಪಡೆಯದೆ ಯಾರೂ ಮಾತನಾಡಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಅಡಗೂರು ಹೆಚ್.ವಿಶ್ವನಾಥ್ ಅವರನ್ನು ಹೊರತುಪಡಿಸಿ ಇತರ ಸದಸ್ಯರು ಮಾತನಾಡಿರುವುದನ್ನು ದಾಖಲಿಸಲಾಗಿರುವುದಿಲ್ಲ.)**

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ದೇವರಾಜ್ ಅರಸ್‌ರವರ ಬಳಿ ಯಾವ ಜಾತಿ ಜನಾಂಗದವರೂ ನಮಗೆ ಮೀಸಲಾತಿ ಬೇಕೆಂದು ಕೇಳಲಿಲ್ಲ. ಅದು ಜನತಂತ್ರ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕವಾಗಿ ಜನಾದೇಶವನ್ನು ಪಡೆದಂತಹ ಸರ್ಕಾರ ಮಾಡಬೇಕಾದಂತಹ ಕರ್ತವ್ಯವಾಗಿತ್ತು. ಈಗ ಎಲ್ಲರೂ ಕೇಳುತ್ತಿದ್ದೇವೆ. ದೇವರಾಜ್ ಅರಸು ಅವರು ಯಾರ ಕೈಯಲ್ಲಿಯೂ ಕೇಳಿಸಿಕೊಳ್ಳಲಿಲ್ಲ. ಹಾವನೂರು ಆಯೋಗವನ್ನು ರಚನೆ ಮಾಡಿದ್ದರು. ಇವತ್ತಿನ ದಿವಸ ನಮ್ಮಲ್ಲಿ ಯಾರಾದರೂ ಜಿಲ್ಲಾಧಿಕಾರಿಗಳಾಗಲೀ, ಪೊಲೀಸ್ ಅಧೀಕ್ಷಕರಿದ್ದಾರೆ ಎನ್ನುವುದಾದರೆ ಅದಕ್ಕೆ ಮಾನ್ಯ ದೇವರಾಜ್ ಅರಸ್ ಅವರು ಕಾರಣ. ಯಾವುದೇ ಚಳುವಳಿ ನಡೆಯಲಿಲ್ಲ. ಯಾವುದೇ ಸ್ವಾಮಿ–ಸನ್ಯಾಸಿಗಳು ನೂರಾರು ಕಿಲೋಮೀಟರ್‌ಗಳ ಪಾದಯಾತ್ರೆಯನ್ನು ಮಾಡಲಿಲ್ಲ. ಹೋರಾಟಗಳೂ ಆಗಲಿಲ್ಲ. ಒಂದು ಜವಾಬ್ದಾರಿಯುತವಾದ ಸರ್ಕಾರ ಎಂದರೆ ಅಂದಿನ ದೇವರಾಜ್ ಅರಸ್ ಅವರ ಸರ್ಕಾರ.

**(...ಮುಂದು)**

(281) 04.03.2021, 1.40. KG.MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಡಗೂರು ಹೆಚ್ ವಿಶ್ವನಾಥ್ (ಮುಂದು.,):–**

ಅದನ್ನು ಮನಗಂಡು ಹಿಂದುಳಿದ ವರ್ಗದವರಿಗೆ ಇದನ್ನೆಲ್ಲಾ ಕೊಡಬೇಕೆಂದು ಅವತ್ತಿನ ದಿವಸ ಕೊಡಮಾಡಲ್ಪಟ್ಟು "ಹಾವನೂರು ಆಯೋಗ" ರಚನೆಯಾಯಿತು. ಇದನ್ನು ಸರ್ಕಾರ ದಯಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ವೀಕಾರ ಮಾಡಬೇಕು. ಅದು ready ಇದೆ. ಮತ್ತೆ ಶ್ರೀ ಕೆ.ಜಯಪ್ರಕಾಶ ಹೆಗಡೆಯವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ ಸುಮ್ಮನೆ ಕಾಲಾಹರಣ ಮಾಡುವುದು ಬೇಡ. ಮೀಸಲಾತಿ ವಿಚಾರದಲ್ಲಿ ರಾಜ್ಯ ಹೊತ್ತಿ ಉರಿಯುತ್ತಿದೆ. ಈ ಮೂರು ಜನರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡುವುದಲ್ಲಾ, We don't agree with that. ಅದು ಏಕೆ ರಚನೆಯಾಗಬೇಕು? ಪ್ರಸುತ್ತ ನಮ್ಮ ಹತ್ತಿರ ಇರತಕ್ಕಂಥದ್ದನ್ನು ಏಕೆ ಉಪಯೋಗ ಮಾಡಿಕೊಳ್ಳುತ್ತಿಲ್ಲ? ಈ ಮೂರು ಜನರಿಂದ ವರದಿ ಪಡೆದ ಮಾತ್ರಕ್ಕೆ ಏನೂ ಆಗುವುದಿಲ್ಲ. ಈಗಾಗಲೇ ಶ್ರೀ ಹೆಚ್.ಕಾಂತರಾಜು ಆಯೋಗದಿಂದ ವರದಿ ಸಿದ್ದಗೊಂಡಿದೆ. It's ready. ಅದನ್ನು ದಯವಿಟ್ಟು ಸ್ವೀಕಾರ ಮಾಡಿ, ಚರ್ಚೆಗೆ ಬಿಡಿ. ಅದರ ಪ್ರಕಾರ, ಯಾವ್ಯಾವ ಜಾತಿ, ಧರ್ಮ ಮತ್ತು ಭಾಷಿಕರಿಗೆ ಏನೇನು ಆಗಬೇಕೆಂದು ಇದೆ, ಆ ಸವಲತ್ತುಗಳನ್ನು ಕೊಡಿ ಎನ್ನತಕ್ಕಂಥದ್ದು ಸರ್ಕಾರಕ್ಕೆ ನಮ್ಮ ಒತ್ತಾಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನದ ಅತ್ಯಂತ ಹಿರಿಯ ಸದಸ್ಯರಾದ ಶ್ರೀ ಹೆಚ್.ವಿಶ್ವನಾಥ್‌ರವರು ಈ ವಿಚಾರವಾಗಿ ಮಾತನಾಡಿದ್ದಾರೆ. ನಮ್ಮ ರಾಜ್ಯದ ಉದ್ದಗಲಕ್ಕೂ ಇವತ್ತಿನ ದಿವಸ ಅನೇಕ ಜಾತಿ ಜನಾಂಗದವರು ನಮ್ಮನ್ನು 2 (ಎ) ಪಟ್ಟಿಗೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಇನ್ನು ಕೆಲವರು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಕೂಡಲಸಂಗಮದಿಂದ ಇಲ್ಲಿಯವರೆಗೆ 709 ಕಿಲೋಮೀಟರ್ ದೂರದವರೆಗೆ ಶ್ರೀ ಮೃತ್ಯಂಜಯ ಸ್ವಾಮಿಯವರ ಜೊತೆಗೆ ಇಡೀ ಸಮುದಾಯವೇ ಪಾದಯಾತ್ರೆ ಮಾಡಿದ್ದಾರೆ. 2 (ಎ) ಪಟ್ಟಿಗೆ ಸೇರಿಸಿ ಎಂದು ಈಗ ಮತ್ತೆ ಉಪವಾಸ ಸತ್ಯಗ್ರಹ ಮಾಡುತ್ತಿದ್ದಾರೆ. ಯಾವುದೇ ಸಮುದಾಯದವರು ಇರಬಹುದು, ಅವರು ಕೇಳುವುದು ತಪ್ಪಲ್ಲ. ಕೇಳುವುದು ಅವರ ಹಕ್ಕು. ಕುರುಬ ಸಮುದಾಯದವರು ಮತ್ತು ಹಾಲುಮತಸ್ಥರು ಶ್ರೀ ಕಾಗಿನೆಲೆ ಮಠ ಕನಕಗುರು ಪೀಠ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿಯವರ ನೇತೃತ್ವದಲ್ಲಿ ಅಸಂಖ್ಯಾತ ಜನರು ನಮ್ಮನ್ನು ಎಸ್.ಟಿ., ಪಟ್ಟಿಗೆ ಸೇರಿಸಿ ಎಂದು 380 ಕಿಲೋಮೀಟರ್ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಿದ್ದಾರೆ. ಆಮೇಲೆ ಗಂಗಾಮತಸ್ಥ ಜನಾಂಗದವರು ನಮ್ಮನ್ನು ಎಸ್.ಟಿ., ಪಟ್ಟಿಗೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಒಕ್ಕಲಿಗ ಸಮುದಾಯದವರ ಬೇಡಿಕೆ ಇದೆ. ಮೊನ್ನೆ ದಿವಸ 300 ಕ್ಕಿಂತ ಹೆಚ್ಚು ಸ್ವಾಮೀಜಿಗಳು ಒಂದು ಕಡೆ ಸಭೆ ಸೇರಿ ಲಿಂಗಾಯಿತ ಸಮುದಾಯದ ಎಲ್ಲಾ ಒಳಪಂಗಡಗಳನ್ನು ಓ.ಬಿ.ಸಿ.. ಗೆ ಸೇರಿಸಿ ಎಂದು ಕೇಳಿದ್ದಾರೆ. ಈ ವಿಷಯ ನಮ್ಮ ರಾಜ್ಯದ ಉದ್ದಗಲಕ್ಕೂ ಹೊತ್ತಿ ಊರಿಯುತ್ತಿದೆ. ಈಗ ಎಲ್ಲಾ ಸಮುದಾಯದವರು ಕೇಳುತ್ತಿದ್ದಾರೆ. ಹಾಗಾಗಿ, ಸರ್ಕಾರ ಇದರ ಬಗ್ಗೆ ಒಂದು ದಿಟ್ಟವಾದ ಕ್ರಮವನ್ನು ಕೈಗೊಳ್ಳಬೇಕಲ್ಲವೇ; ಇದಕ್ಕೆ ಯಾರನ್ನೋ ನೇಮಿಸಿದ್ದೇವೆ, ಅವರಿಗೆ ಪತ್ರ ಬರೆದಿದ್ದೇವೆ. ಅದು ಬರಲಿ ಎಂದರೆ ಹೇಗೆ? ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಹೇಗೆ? ಇದರ ಬಗ್ಗೆ ಸರ್ಕಾರ ಒಂದು ವೈಜ್ಞಾನಿಕವಾದ ಮತ್ತು ಒಂದು ಸೂಕ್ತ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ಇದರಿಂದ ಎಲ್ಲಿಯವರೆಗೆ ಪಲಾಯನ ಮಾಡುವುದಕ್ಕೆ ಆಗುತ್ತದೆ? You have to put an end to this problem. ಮಾನ್ಯ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇಂತಹ ಸಮಸ್ಯೆಗಳು ಆಗಬಾರದೆಂಬ ದೃಷ್ಟಿಯಿಂದ ಸುಮಾರು ರೂ.265 ಕೋಟಿ ರೂಪಾಯಿಗಳಷ್ಟು ವ್ಯಯ ಮಾಡಿ ಶ್ರೀ ಹೆಚ್.ಕಾಂತರಾಜುರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಯಾವ್ಯಾವ ಸಮುದಾಯದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದ್ದಾರೆ ಎಂಬುದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವುದಕ್ಕೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರು ಹಾಗೂ ಸಭಾನಾಯಕರು ಶ್ರೀ ಹೆಚ್.ಕಾಂತರಾಜುರವರ ನೇತೃತ್ವದ ಆಯೋಗದ ಪದಾವಧಿಯು ದಿನಾಂಕ 21.09.2019 ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಸಲ್ಲಿಸಲಾಗಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ಶ್ರೀ ಹೆಚ್.ಕಾಂತರಾಜುರವರ ನೇತೃತ್ವದ ಆಯೋಗದ ಪದಾವಧಿಯು ದಿನಾಂಕ 21.09.2019 ರಂದು ಮುಕ್ತಾಯಗೊಂಡಿದೆ. ದಿನಾಂಕ 21.09.2019 ರಂದು ಅಧಿಕಾರದಲ್ಲಿ ಯಾರಿದ್ದರು? ಆಯೋಗದವರು ಹೆಚ್ಚಿಗೆ ಸಮಯವನ್ನು ಕೇಳಿದ್ದರೆ, ಸಮೀಕ್ಷೆಯನ್ನು ಪೂರ್ತಿ ಮಾಡಿ ವರದಿಯನ್ನು ಸಲ್ಲಿಸಿ ಎಂದು ಸಮಯವನ್ನು ಮುಂದುವರಿಸಬೇಕಾಗಿತ್ತು ಅಲ್ಲವೇ? We have already spent Rs. 265 crores and lakhs of employees are working under this aspect. ಇತ್ತೀಚೆಗೆ ಪ್ರತಿ ದಿವಸ ದಿನಪತ್ರಿಕೆಗಳಲ್ಲಿ ಮತ್ತು ಟಿ.ವಿ.,ಗಳಲ್ಲಿ ಇದೇ ವಿಷಯವನ್ನೇ ನೋಡುತ್ತಿದ್ದೇವೆ. ಅವರವರ ಸಮುದಾಯದವರು ಕೇಳುವ ಹಕ್ಕು ಅವರಿಗೆ ಇದೆ, ಅದಕ್ಕೆ ಕೇಳಿದ್ದಾರೆ. ಅದಕ್ಕೆ ಸರ್ಕಾರ ಒಂದು ಪ್ರತ್ಯುತ್ತರ ಕೊಡಬೇಕಲ್ಲವೇ? ಇದನ್ನು ಎಲ್ಲಿಯವರೆಗೆ ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತಾರೆ? ಇದಕ್ಕೆ ಸಂಬಂಧಪಟ್ಟಂತೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಊರಿನ ಮುಂದೆ ಒಂದು ನದಿ ಹರಿಯುತ್ತದೆ. ಅದು ತಮಗೂ ಗೊತ್ತಿದೆ. ಆ ನದಿಯಲ್ಲಿ ಒಂದು ಹೆಣ ತೇಲಿಕೊಂಡು ಬರುತ್ತಿರುತ್ತದೆ. ಆಗ ಆ ಹೆಣವನ್ನು ನೋಡಿ ಇದು ನಮ್ಮ ಊರಿಗೆ ಬಂದು ಅಲ್ಲಿಗೆ ನಿಂತುಬಿಟ್ಟರೆ, ಅದನ್ನು ಪಂಚನಾಮೆ ಮಾಡಬೇಕು, ಅದಕ್ಕೆ ನಾವೆಲ್ಲರೂ ಸಾಕ್ಷಿಗಳು ಆಗಬೇಕೆಂದು ತಿಳಿದುಕೊಂಡು ಇದರ ಕಿರಿಕಿರಿ ಬೇಡವೆಂದು ಆ ಹೆಣಕ್ಕೆ ಒಂದು ಕಟ್ಟಿಗೆಯಿಂದ ಆ ಹೆಣ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮುಂದಕ್ಕೆ ಹೋಗುವಂತೆ ಚುಚ್ಚಿ ಬಿಡುತ್ತಾರೆ. ನಂತರ ಆ ಹೆಣ ಮುಂದಿನ ಊರಿಗೆ ಹೋಗಿಬಿಡುತ್ತದೆ. ಇದಕ್ಕೆ ಏನಾದರೊಂದು ಅಂತ್ಯ ಆಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,.

**(ಗೊಂದಲ)**

**ಸಭಾಪತಿಯವರು:–** ಸಭಾನಾಯಕರೇ, ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಹೇಳುವ ವಿಷಯವನ್ನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ನಾನು ಪ್ರತಿಪಕ್ಷದ ನಾಯಕನಾಗಿದ್ದು, ನಾನು ಪಕ್ಷಾತೀತವಾಗಿ ಮಾತನಾಡುತ್ತೇನೆ. ನಮ್ಮದು ಪಕ್ಷಾತೀತ ಧೋರಣೆ. ಆಡಳಿತ ಪಕ್ಷದಲ್ಲಿ ವಿಶ್ವನಾಥ್, ನಾರಾಯಣಸ್ವಾಮಿಯವರು,,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಇದು ಗಮನ ಸೆಳೆಯುವ ಸೂಚನೆ. ಇದು ಮಹತ್ವದ ವಿಷಯವಾಗಿದೆ ಎಂದು ಅವಕಾಶ ಕೊಟ್ಟಿದ್ದೇನೆ. ತಾವು ದಯವಿಟ್ಟು short ಆಗಿ ಮಾತನಾಡಿ ಬೇಗ ಮುಗಿಸಿ.,

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನಷ್ಟು short ಆಗಿ ಯಾರು ಮಾತನಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರಷ್ಟು short ಆಗಿ ಯಾರು ಮಾತನಾಡುವುದಿಲ್ಲ. ಅದಕ್ಕೆ ನಮ್ಮ ಸಹಮತವಿದೆ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಬೇಗ ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೊಂದು ಅಂತ್ಯ ಬೇಕಲ್ಲವೇ? ಶ್ರೀ ಕೆ.ಜಯಪ್ರಕಾಶ್ ಹೆಗ್ಡೆಯವರಿಗೆ ಪತ್ರ ಬರೆದಿದ್ದೇವೆ. ಅವರಿಗೆ ತಿಳಿಸಿದ್ದೇವೆ. ಅವರಿಂದ ಉತ್ತರ ಬಂದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. 2019ರ ಅವಧಿ ಮುಗಿದ ನಂತರ ಅದು ಏನಾಯಿತೆಂದು ಈ ಸರ್ಕಾರಕ್ಕೆ ಗಮನ ಇದೆಯೇ? ಇದು ಜ್ವಲಂತ ಸಮಸ್ಯೆ. ಇದು ಇಡೀ ನಮ್ಮ ನಾಡಿನ ಸಮಸ್ಯೆ. ಇದರ ಬಗ್ಗೆ ಗಮನಕೊಡಬೇಕಲ್ಲವೇ? ನಮ್ಮ ರಾಜ್ಯ ಸುಮಾರು ಆರೂವರೆ ಕೋಟಿ ಜನರು ಇದರಲ್ಲಿ ಸೇರಿದ್ದಾರೆ. ಕೆಲವರು ನಮ್ಮನ್ನು ಒಂದಿಲ್ಲೊಂದು category ಯಲ್ಲಿ ಹಾಕಿ ಎಂದು ಹೇಳುತ್ತಾರೆ. ಅದಕ್ಕೆ ಕೆಲವರು ನಮ್ಮ category ಅಲ್ಲಿ ಹಾಕಬೇಡಿ ಎಂದು ಹೇಳುತ್ತಾರೆ. ಈಗ ವರ್ಗ ಸಂಘರ್ಷ ಸಂಭವಿಸುವಂತಹ ಸನ್ನಿವೇಶ ಉದ್ಭವಿಸಿದೆ. This is not a small thing. It is a very serious matter. ಮಾನ್ಯ ಸದಸ್ಯರಾದಂತಹ ಹೆಚ್.ವಿಶ್ವನಾಥ್‌ರವರು ಹೇಳಿದಂತೆ ಮಾನ್ಯ ದೇವರಾಜು ಅರಸ್‌ರವರಿಗೆ ಯಾರು ಮಾಡಿ ಎಂದು ಹೇಳಿಲ್ಲ. ಅವರೇ ಮಾಡಿದ್ದರು. ಮೊದಲು ರಾಜಕಾರಣ ಕೆಲವೇ ವರ್ಗಕ್ಕೆ ಸೀಮಿತವಾಗಿತ್ತು. ಅದನ್ನು ಹರಿದು ಹಂಚಿದ್ದಾರೆ. ಅದರಿಂದ ಇವತ್ತು ಬಹಳಷ್ಟು ಜನರು ರಾಜಕೀಯವಾಗಿ ಸಚಿವರಾಗಿದ್ದಾರೆ, ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಪುಣ್ಯದಿಂದ IPS, IAS, IRS Officers ಆಗಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು Calling Attention. ತಮಗೆ ಸಾಕಷ್ಟು ಸಮಯ ನೀಡಿದ್ದೇನೆ. ತಾವು short ಆಗಿ ಬೇಗ ಮಾತನಾಡಿ ಮುಗಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Calling Attention ಇರಲಿ. ಇದು ಬಹಳ ಮಹತ್ವದ ವಿಷಯ. ಅದಕ್ಕೆ ಇದನ್ನು ತಾರ್ಕಿಕ ಹಂತಕ್ಕೆ ತೆಗೆದುಕೊಂಡು ಹೋಗುವುದು ಬೇಡ. ದಯಮಾಡಿ ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುತ್ತೇನೆ. ದಯಮಾಡಿ ಇದನ್ನು ಮುಂದಕ್ಕೆ ಹಾಕುವುದು, ಮೀನಾಮೇಷ ಮಾಡುವುದು ಬೇಡ. ನಮ್ಮ ಭಾಷೆಯಲ್ಲಿ ಇದನ್ನು ದಾಟು ಹೋಲಿಗೆ ಹಾಕುವುದು ಎಂದು ಹೇಳುತ್ತೇವೆ. ಬಿಸೋದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂದು ನಮ್ಮ ಹಿರಿಯರು ಹೇಳುತ್ತಾರೆ. ಆ ರೀತಿ ಇದನ್ನು ಮುಂದಕ್ಕೆ ಸಾಗಿಸಿ ಬಿಡುವುದು. ಮುಂದೆ ಯಾರು ಬರುತ್ತಾರೋ, ನಾವು ಇನ್ನೆಷ್ಟು ದಿವಸ ಇರುತ್ತೇವೆಯೋ ಎಂದು ಏನಾದರೂ ಲೆಕ್ಕಾಚಾರ ಮಾಡಿದ್ದಾರೋ ಏನೋ ಗೊತ್ತಿಲ್ಲ. ಅದು ಏನಾದರೂ ಇರಲಿ. ದೊಡ್ಡ ದೊಡ್ಡ ಸಮುದಾಯದವರು, ಪಂಚಮಶಾಲಿ ಸಮುದಾಯದವರು ಇನ್ನೂ ಇಲ್ಲಿಯೇ ಇದ್ದಾರೆ. ಇವತ್ತು ನಿರ್ಣಯವಾಗಲಿಲ್ಲವೆಂದರೆ, ಆಮರಣ ಸತ್ಯಾಗ್ರಹ ಮಾಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ. ಅದಕ್ಕೆ ಇಂತಹ ಅಹಿತಕರ ಘಟನೆಗೆ ಅವಕಾಶ ಮಾಡಿಕೊಡಬಾರದು. The Government should take a firm decision ಮತ್ತು ವೈಜ್ಞಾನಿಕವಾಗಿ ನಿರ್ಣಯ ತೆಗೆದುಕೊಳ್ಳಬೇಕು. ಇಲ್ಲಿ ಅವರ ಹೆಸರು ಹೇಳುವುದು, ಇವರ ಹೆಸರು ಹೇಳುವುದು, ಕಾಯಿದೆಯಲ್ಲಿ ಅಲ್ಲಿಂದ ಇಲ್ಲಿಗೆ ಓಡಾಡಿಸುವುದು ಮಾಡಬಾರದು. ಒಂದು ಕಡತ ವಾಪಸ್ಸು ಬರಬಾರದು ಎಂದರೆ, ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸಿಬಿಡುವುದು. ಅದು ಅಲ್ಲಿಗೆ ಮುಗಿದು ಹೋಯಿತು. It is an end. ಇದಕ್ಕೆ ಒಂದು ಅಂತ್ಯ ಆಡಬೇಕು. You take it to a logical end. You finish the matter as early as possible. ಈ ಸಮಸ್ಯೆಯನ್ನು ಒಂದು ಕ್ಷಣಾರ್ದದಲ್ಲಿ ಬಗೆಹರಿಸುವುದು ಸರ್ಕಾರದ ಕೈಯಲ್ಲಿ ಇದೆ. ನಾವು ಗಮನ ಸೆಳೆದಿರುವಂತಹ ವಿಷಯದ ಬಗ್ಗೆ ಒಂದು ನಿರ್ಣಯವಾಗಲಿ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

(ಮುಂದು.,)

(282)04-03-2021(1-50)ಎಂವಿ-ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಒಂದು ಗಂಭೀರವಾದಂತಹ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಒಂದು ಆಯೋಗದ ವರದಿಯನ್ನು ಸರ್ಕಾರ ಮಂಡನೆ ಮಾಡುವುದಕ್ಕೆ ವಿಳಂಬ ಮಾಡುತ್ತಿರುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈಗಾಗಲೇ ಬಹಳಷ್ಟು ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಯಾವಾಗ ನಮ್ಮ ರಾಜಕೀಯ ಸಿದ್ಧಾಂತಗಳು ಹುಟ್ಟಿಕೊಂಡವೊ, ಅಂದಿನಿಂದಲೂ ಕೂಡ ರಾಜಕೀಯ ಪಕ್ಷಗಳು ತಮ್ಮ ಅಸ್ತಿತ್ವಕ್ಕೋಸ್ಕರ ಈ ವ್ಯವಸ್ಥೆಯನ್ನು ಹುಟ್ಟು ಹಾಕಿಕೊಂಡು ಬಂದಿರುವುದು. ಇದರಲ್ಲಿ ಯಾವ ಪಕ್ಷವೂ ಕೂಡ ಹೊರತಾಗಿಲ್ಲ. ಇವತ್ತು ಇವುಗಳನ್ನೆಲ್ಲಾ ಸರ್ಕಾರಗಳೇ ಹುಟ್ಟು ಹಾಕಿರುವಂಥದ್ದು. ಇವತ್ತು ರಾಜ್ಯದಲ್ಲಿ ಸರ್ಕಾರಗಳೇ ಅವುಗಳನ್ನು ಭೇದಿಸುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತಿನ ದಿವಸ ಮೇಲ್ವರ್ಗದಿಂದ ಕೆಳ ವರ್ಗದವರೆಗೆ ಎಲ್ಲರೂ ಕೂಡ ಈ ಮೀಸಲಾತಿ ಸೌಲಭ್ಯಗಳನ್ನು ವಿಸ್ತರಿಸಬೇಕು ಎನ್ನುವಂತಹ ಕೂಗು ಎದ್ದಿದೆ. ಇದಕ್ಕೆ ಎಲ್ಲಾ ಸರ್ಕಾರಗಳು ಕಾರಣವಾಗಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸ್ವಾಮೀಜಿಗಳು ಮೀಸಲಾತಿಯ ಬಗ್ಗೆ ಬಹಳ ಹಠ ತೊಟ್ಟು ನೂರಾರು ಕಿಲೋಮೀಟರ್ ಪಾದಯಾತ್ರೆಗಳನ್ನು ಮಾಡಿಕೊಂಡು ಬಂದು ಸರ್ಕಾರದ ಗಮನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೆಳೆದಿದ್ದಾರೆ. ಜೊತೆಗೆ ಸರ್ಕಾರಕ್ಕೆ ಧಮ್ಕಿ ಕೂಡ ಹಾಕಿದ್ದಾರೆ. ಅದು ಯಾವ ರೀತಿ ಎಂದರೆ, ಕೆಲವು ಸ್ವಾಮೀಜಿಗಳು ಮೀಸಲಾತಿಯನ್ನು ಮುಖ್ಯಮಂತ್ರಿನೂ ಮಾಡಬೇಕು ಮತ್ತು ಅವರ ಅಪ್ಪನು ಮಾಡಬೇಕು ಎಂದು ಹೇಳಿದ್ದಾರೆ. ಮೀಸಲಾತಿಯನ್ನು ಇಷ್ಟು ದಿನಗಳಲ್ಲಿ ಕೊಡಲಿಲ್ಲವೆಂದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ, ಈ ಸರ್ಕಾರವನ್ನು ಪತನಗೊಳಿಸುತ್ತೇವೆಂದು ಹೇಳುತ್ತಾರೆ. ಇವತ್ತಿನ ದಿವಸ ಇಂತಹ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಸರ್ಕಾರಗಳೇ ಕಾರಣ. ನಮಗೆ ಸ್ವಾಮೀಜಿಗಳ ಬಗ್ಗೆ ಅಪಾರವಾದಂತಹ ಗೌರವವಿದೆ ಸಮಾಜದಲ್ಲಿ ಅವರ ಬಗ್ಗೆ ನಂಬಿಕೆ ಮತ್ತು ವಿಶ್ವಾಸವಿದೆ. ಆದರೆ, ಕೆಲವು ಸ್ವಾಮೀಜಿಗಳು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯವನ್ನು ಮರೆತು, ಯಾವುದೋ ಸ್ವಹಿತಕ್ಕಾಗಿ ಮತ್ತು ಯಾವುದೋ ಒಂದು ಸೀಮಿತವಾದಂತಹ ಜನಾಂಗಕ್ಕೋಸ್ಕರ ಅವರು ಕಾವಿಯನ್ನು ಧರಿಸಿರುವಂಥದ್ದು ಮತ್ತು ಅವರು ಸಂವಿಧಾನವನ್ನು ಅರ್ಥಮಾಡಿಕೊಳ್ಳದೆ ಇವತ್ತು ಸ್ವಾಮೀಜಿಗಳೆ ಬೀದಿಗೆ ಬಂದಿರುವಂಥದ್ದು ದೊಡ್ಡ ವಿಪರ್ಯಾಸವೆಂದು ಕೆಲವು ಸ್ವಾಮೀಜಿಗಳ ಬಗ್ಗೆ ನಾನು ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅದರ ಆಧಾರಿತವಾಗಿ 2014-15ನೇ ಸಾಲಿನಲ್ಲಿ ಈ ಸಮೀಕ್ಷೆ ಮುಗಿದಿರುವಂಥದ್ದು. ಇದೆಲ್ಲವೂ ಆಯೋಗದಿಂದ ವರದಿ ಇದ್ದರೂ ಕೂಡ ಸರ್ಕಾರ ಇದನ್ನು ಜಾರಿಗೊಳಿಸುತ್ತಿಲ್ಲ ಮತ್ತು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲವೆಂದು ಹೇಳಿದರೆ, ಇವತ್ತು ಎಲ್ಲರೂ ಕೂಡ ಬೀದಿ ಬೀದಿಯಲ್ಲಿ ಪಾದಯಾತ್ರೆ ಮಾಡುತ್ತಿರುವುದು ಮತ್ತು ಎಲ್ಲಾ ಜನಾಂಗದವರು ಕೂಡ ಇದನ್ನು ಎತ್ತಿಕೊಂಡು ಓಡಾಡುತ್ತಿರುವಂಥದ್ದು ಈ ಒಂದು ವ್ಯವಸ್ಥೆಯಿಂದ. ಇದಕ್ಕೆ ಏನಾದರೂ ಒಂದು ಕಡಿವಾಣ ಹಾಕಬೇಕಲ್ಲವೇ? ಪಂಚಮಸಾಲಿಯ ಕೆಲವು ಸ್ವಾಮೀಜಿಗಳು ಮತ್ತು ಆ ಸಮಾಜದ ಕೆಲವು ಮುಖಂಡರೆಲ್ಲರೂ ಪಾದಯಾತ್ರೆ ಮಾಡಿಕೊಂಡು ಬಂದು, ಸರ್ಕಾರವನ್ನು ಬಹಳ ಇಕ್ಕಟಿನ ಪರಿಸ್ಥಿತಿಗೆ ಸಿಗುವಂತೆ ಮಾಡುತ್ತಿದ್ದಾರೆ. ನಾವು ಇದನ್ನು ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದರ ಸಂಬಂಧವಾಗಿ ಸರ್ಕಾರ ಮೊನ್ನೆ ಸಚಿವ ಸಂಪುಟದಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅಂದರೆ, ಸರ್ಕಾರ ನಿವೃತ್ತಿ ಹೊಂದಿದ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನನಗೆ ಒಂದು ನೆನಪು ಬಂತು. ಅದೇನೆಂದರೆ, ಬೀಚಿಯವರು ಎಲ್ಲೋ ಒಂದು ಕಡೆ ಹೇಳಿರುವುದನ್ನು ನಾನು ಓದಿದ್ದೆ. ಒಬ್ಬರು ಬೀಚಿಯವರಿಗೆ ಒಂದು ಪ್ರಶ್ನೆ ಕೇಳುತ್ತಾರೆ. ಅಂದರೆ, ಸರ್ಕಾರಗಳು ಇಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿದಾಗ, ಆ ಇಕ್ಕಟ್ಟಿನ ಪರಿಸ್ಥಿತಿಯಿಂದ ಹೊರಬರಬೇಕಾದರೆ ಯಾವ ರೀತಿಯ ತೀರ್ಮಾನ ಮಾಡಬೇಕು ಎಂದು ಕೇಳಿದಾಗ, ಅದಕ್ಕೆ ಬೀಚಿಯವರು ಈ ರೀತಿ ಹೇಳುತ್ತಾರೆ. "ಸರ್ಕಾರ ಅಂತಹ ಇಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿದಾಗ, ಆ ವಿಷಯವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಾದರೊಂದು ಸಮಿತಿ ಮಾಡಿ, ಅದನ್ನು ಆ ಸಮಿತಿಗೆ ಒಪ್ಪಿಸಿ ಬಿಟ್ಟರೆ, ಆಗ ಎಲ್ಲಾ ಸಮಸ್ಯೆ ಪರಿಹಾರವಾಗುತ್ತದೆ ಎನ್ನುತ್ತಾರೆ." ಇವತ್ತು ಆ ರೀತಿಯ ಕೆಲಸವನ್ನು ಸರ್ಕಾರ ಮಾಡಿದೆ.

ಇಡೀ ರಾಜ್ಯದ ಉದ್ದಗಲಕ್ಕೂ ಯಾವ ಜಾತಿಯಲ್ಲಿ ಚಳುವಳಿ ಇಲ್ಲ ಹೇಳಿ. ಶ್ರೀ ಬಸವಣ್ಣನವರು ಹುಟ್ಟಿದಂತಹ ನಾಡಿನಲ್ಲಿ ಅವರ ತತ್ವಗಳನ್ನು ಅರ್ಥ ಮಾಡಿಕೊಳ್ಳದೆ ಮತ್ತು ಡಾ||ಬಿ.ಆರ್.ಅಂಬೇಡ್ಕರ್‌ರವರು ಬರೆದಂತಹ ಸಂವಿಧಾನವನ್ನು ಅರ್ಥ ಮಾಡಿಕೊಳ್ಳದೆ ಸರ್ಕಾರಗಳು ಮಾಡಿದಂತಹ ಈ ಕೆಟ್ಟ ನಿರ್ಧಾರಗಳಿಂದ ಒಬ್ಬರ ಮುಖವನ್ನು ಒಬ್ಬರು ನೋಡದಂತಹ ಕಂದಕವಾಗಿದೆ. ಇದಕ್ಕೆಲ್ಲಾ ಸರ್ಕಾರಗಳೇ ಕಾರಣ. ಇವತ್ತು ಸರ್ಕಾರಗಳೇ ಇಷ್ಟೆಲ್ಲಾ ಉತ್ತೇಜನ ಕೊಟ್ಟಿರುವುದಕ್ಕೆ ಸ್ವಾಮೀಜಿಗಳು ಬೀದಿಗೆ ಬಂದಿರುವುದು. ಸ್ವಾಮೀಜಿಗಳು ನಾವು ಇರುವುದು ಸಮಾಜದ ಸುಧಾರಣೆಗೆ ಅದಕ್ಕೆ ಇದನ್ನೆಲ್ಲಾ ಕೇಳುತ್ತಿದ್ದೇವೆ ಎನ್ನುತ್ತಾರೆ. ಸ್ವಾಮೀಜಿಗಳು ಕೇಳುವುದರಲ್ಲಿ ತಪ್ಪೇನಿಲ್ಲ ಮತ್ತು ಅವರು ಚಳುವಳಿಗಳಲ್ಲಿ ಭಾಗವಹಿಸುವುದು ತಪ್ಪು ಎಂದು ಹೇಳುವುದಿಲ್ಲ. ಆದರೆ, ಅವರು ದಯಮಾಡಿ **XXX**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದಯಮಾಡಿ ಈ ರೀತಿ ಸ್ವಾಮೀಜಿಗಳು ತಮ್ಮ **XXX** ಎನ್ನುವುದು ಮತ್ತು ಸ್ವಾಮೀಜಿಗಳ ಬಗ್ಗೆ ಆ ರೀತಿ ಮಾತನಾಡುವುದು ಸರಿಯಲ್ಲ. It is not in good taste.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅವಹೇಳನಕಾರಿಯಾಗಿ ಮಾತನಾಡುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I will take a very serious objection for this.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ...

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಇಟ್ಟಿದ್ದೀರಾ ಅಥವಾ ಇದನ್ನು **XXX**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಯಾವುದೇ ಸಮಾಜ ಮತ್ತು ಯಾರೇ ಇರಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ಯಾರೇ ಇರಬಹುದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಲಾಂಛನ ಮತ್ತು ಒಂದು ಬಟ್ಟೆಯ ಬಗ್ಗೆ ಈ ರೀತಿಯ ಚರ್ಚೆ ಸಮಂಜಸವಲ್ಲ.

**(ಗೊಂದಲ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾತನಾಡಬಾರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲಿನಿಂದಲೂ ಮಾತನಾಡಿದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದು ನನ್ನ ಅನಿಸಿಕೆ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ, ಈ ಸರ್ಕಾರವನ್ನು ಪತನಗೊಳಿಸುತ್ತೇವೆಂದರೆ, ಅದು ಪ್ರಜಾಪ್ರಭುತ್ವದಲ್ಲಿ ಇರುವಂತಹ ಅಸ್ತ್ರ. ಈ ರೀತಿ **XXX** ಮಾತನಾಡುವುದು ಸರಿಯಲ್ಲ. **(ಗೊಂದಲ)**

**ಸಭಾಪತಿಯವರು:-** **ಆ ಪದವನ್ನು ಕಡತದಿಂದ ತೆಗೆದು ಹಾಕಿ.**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಡಾ॥ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ, ತಾವು ಮಾತನಾಡಿದ್ದು ಸಾಕು. ಎಷ್ಟು ಹೊತ್ತು ಮಾತನಾಡುತ್ತೀರಿ? ನೋಡಿ ಇದು ನಿಯಮ 72ರ ಅಡಿಯಲ್ಲಿ Calling Attention ಇದೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಡಾ॥ತೇಜಸ್ವಿನಿ ಗೌಡರವರೇ ತಾವು ಲೋಕಸಭಾ ಸದಸ್ಯರಾಗಿದ್ದಂತಹವರು. ಮಾನ್ಯ ಮರಿತಿಬ್ಬೇಗೌಡರೆ ಬೇಗ ಮಾತನಾಡಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಐದು ನಿಮಿಷ ಮಾತನಾಡುತ್ತೇನೆ. ದಯಮಾಡಿ ನಾನು ಯಾವುದೇ ಸ್ವಾಮೀಜಿ ಮುತ್ತೊಂದರ ಬಗ್ಗೆ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಅದರ ಬಗ್ಗೆ ಮಾತನಾಡಬೇಡಿ. ಅದು ಸರಿಯಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಕೆಲವು ಸ್ವಾಮೀಜಿಗಳು ಎಲ್ಲಾ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಧಮ್ಕಿ ಹಾಕುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಅದನ್ನು ಸದನದಲ್ಲಿ ಹೇಳಬಾರದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರವೇ ಈ ಜಾತಿ ಮೀಸಲಾತಿಗೋಸ್ಕರ ಹೋಗಿ ನಿಂತುಕೊಂಡು, ಸರ್ಕಾರದ ಮಂತ್ರಿಗಳೇ ಈ ಚಳುವಳಿಗಳನ್ನು ಮಾಡಿಸುತ್ತಿದ್ದಾರೆಂದು ಹೇಳಿದರೆ, ನಾವೆಲ್ಲರೂ ಕೂಡ ಸಂವಿಧಾನವನ್ನು ಗೌರವಿಸುತ್ತೇವೆ ಮತ್ತು ಮಾನ್ಯ ರಾಜ್ಯಪಾಲರ ಬಳಿ ಪ್ರಮಾಣ ವಚನವನ್ನು ತೆಗೆದುಕೊಂಡು ಮಂತ್ರಿಗಳಾಗುತ್ತೇವೆ. ಇವತ್ತು ಮಾನ್ಯ ಮಂತ್ರಿಗಳೆ ಹೋಗಿ ನಿಂತುಕೊಂಡು, ಅವರು ಒಂದು ಜಾತಿಗೆ ಸೀಮಿತವಾಗಿ ಇವತ್ತು ಸರ್ಕಾರವನ್ನು ಇಂತಹ ಇಕ್ಕಟ್ಟಿಗೆ ಸಿಲುಕಿಸುವಂತಹ ಮತ್ತು ಜನರನ್ನು ಗೊಂದಲಕ್ಕೆ ತಳ್ಳುವಂತಹ ಕೆಲಸ ಮಾಡುತ್ತಿದ್ದಾರೆ. ಇದು ಸಂವಿಧಾನವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಿಳಿದುಕೊಂಡು ಅರ್ಥ ಮಾಡಿ ಕೊಂಡಿರುವಂಥಹವರು ಮಾಡುವಂಥದ್ದೆ? ಇವತ್ತು ಈ ಸರ್ಕಾರದಲ್ಲಿ ಕೆಲವು ಮಂತ್ರಿಗಳೇ ಈ ದೊಡ್ಡ ಚಳುವಳಿಗೆ ಕುಮ್ಮಕ್ಕು ಕೊಟ್ಟಿರುವಂಥದ್ದು. ಇವತ್ತು ಸಂವಿಧಾನದ ಆಶಯಗಳನ್ನು ಬದಿಗೊತ್ತಿ, ಸಂವಿಧಾನವನ್ನು ಗೌರವಿಸುತ್ತಿಲ್ಲ. ಇವತ್ತು ಮಾನ್ಯ ಮಂತ್ರಿಗಳೇ ಹೋಗಿ ಚಳುವಳಿ ಮಾಡಿಸುತ್ತಾರೆಂದು ಹೇಳಿದರೆ, ಈ ದೇಶದಲ್ಲಿ ಈ ರೀತಿಯೂ ನಡೆಯುತ್ತದೆಯೇ?

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಅಲ್ಲಿಗೆ ಹೋದ ಮಾತ್ರಕ್ಕೆ ಅವರು ಅದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ನಾನು ಇದನ್ನು ಖಂಡಿಸುತ್ತೇನೆ. ಮಾನ್ಯ ಮಂತ್ರಿಗಳು ಆ ಸಮಾಜದವರಾಗಿ ಅಲ್ಲಿಗೆ ಹೋಗಿರಬಹುದು.

**(ಗೊಂದಲ )**

**ಸಭಾಪತಿಯವರು:–** ಮಾನ್ಯ ಸದಸ್ಯರು ಮಾತನಾಡುವಾಗ ಬೇರೆ ಸದಸ್ಯರು ಮಧ್ಯದಲ್ಲಿ ನನ್ನ ಅನುಮತಿ ಇಲ್ಲದೆ ಮಾತನಾಡಬಾರದು.

**(ಗೊಂದಲ)**

**ಶ್ರೀ ಆರ್.ಶಂಕರ್ (ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಗಮನಕ್ಕೆ ತರುವಂತಹ ಕೆಲಸ ಮಾಡಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರಾದ ಆರ್.ಶಂಕರ್‌ರವರೆ, ತಾವು ಮಂತ್ರಿಗಳು ಆದುದರಿಂದ ತಾವು ದಯಮಾಡಿ ಸಭಾಪತಿಯವರ ಅನುಮತಿ ಪಡೆದು ಮಾತನಾಡಿ. ಈಗ ಮಾನ್ಯ ಸದಸ್ಯರು ಮಾತನಾಡಿ ಮುಗಿಸಲಿ. ಆ ನಂತರ ನಿಮಗೆ ಮಾತನಾಡುವುದಕ್ಕೆ ಅವಕಾಶ ನೀಡುತ್ತೇನೆ.

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಅವರು ಏನೇನೋ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ಮಾತನ್ನು ಹಾಗೆಯೇ ಹೆಚ್ಚಿಗೆ ಎಳೆಯುತ್ತಿದ್ದೀರಿ, ಬೇಗ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಮಂತ್ರಿಗಳಾಗಿ ಕಾರ್ಯನಿರ್ವಹಿಸುವವರೆ ಹೋಗಿ, ಒಂದೊಂದು ಜಾತಿ ಮತ್ತು ಜನಾಂಗದ ಪರವಾಗಿ ಮೆರವಣಿಗೆ ಮಾಡುತ್ತಾರೆಂದರೆ, ತಾವು ಇದನ್ನು ಅರ್ಥ ಮಾಡಿಕೊಳ್ಳಿ ಮತ್ತು ಈ ನಾಡಿನ ಜನರು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅರ್ಥಮಾಡಿಕೊಳ್ಳಬೇಕು. ಸರ್ಕಾರಗಳು ಏನು ಮಾಡುತ್ತವೆ? ಈ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಏನಾದರೂ ಕೂಡ ಮುಂದಾಗಿವೆಯೇ? ಮತಕೋಸ್ಕರ ಈ ಕೆಟ್ಟ ನೀತಿಯನ್ನು ಸರ್ಕಾರವೇ ಹುಟ್ಟು ಹಾಕುತ್ತಿರುವಂಥದ್ದು. ನಾನು ಇದನ್ನು ಖಂಡಿಸುತ್ತೇನೆ.

**(ಮುಂದು...)**

(283) 02.00 04.03.2021 ಎಲ್‌ಎಲ್/ಎಕೆ

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಮರಿತಿಬ್ಬೇಗೌಡ(ಮುಂದುವರೆದಿದ್ದು...)**

ನನಗೆ ಎಲ್ಲಾ ಸ್ವಾಮೀಜಿಗಳ ಮೇಲೆ ಗೌರವ ಇದೆ. ಆದರೆ ಸ್ವಾಮೀಜಿಗಳು ಆದವರು...

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಹೇಳಿದ್ದನ್ನೇ ಎಷ್ಟು ಬಾರಿ ಹೇಳುತ್ತೀರಿ. ಸಾಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸ್ವಾಮಿ ವಿವೇಕಾನಂದರ ರೀತಿ ಎಲ್ಲವನ್ನೂ ತ್ಯಾಗ ಮಾಡಿದಂತಹ ಅನೇಕ ಸ್ವಾಮೀಜಿಗಳು ನಮ್ಮಲ್ಲಿದ್ದಾರೆ. ಆದರೆ, ಇವೊತ್ತಿನ ದಿವಸ...

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಉತ್ತರ ಹೇಳಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು:-** ಪೀಠದ ಅನುಮತಿ ಪಡೆಯದೇ ಮಾನ್ಯ ಸದಸ್ಯರು ಮಾತನಾಡುವುದು ಯಾವುದು ದಾಖಲೆಗೆ ಹೋಗತಕ್ಕದ್ದಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡವಳಿಯನ್ನು ದಾಖಲಿಸಿರುವುದಿಲ್ಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ ತಾವು ಉತ್ತರ ನೀಡಿ. ಎಲ್ಲಾ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಸಭಾನಾಯಕರು ಆಡಳಿತ ಪಕ್ಷದ ಸದಸ್ಯರು ಕುಳಿತುಕೊಳ್ಳುವುದಕ್ಕೆ ಹೇಳಬೇಕು. ಈ ಸದನಕ್ಕೆ ಕಿಮ್ಮತ್ತು ಇದೆಯೋ ಅಥವಾ ಇಲ್ಲವೋ.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೇ, ಈ ವರದಿಯನ್ನು ಕೂಡಲೇ ಜಾರಿಗೆ ತರುವುದು ಆಗಬೇಕು ಮತ್ತು ಈ ವರದಿಯಲ್ಲಿರುವ ಮುಖ್ಯಾಂಶಗಳನ್ನು ...

**ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೇ, ತಾವು ಮಾತನಾಡಿರುವುದು ಸಾಕು.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು**:- ಸಾಕು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ. ಸಂಕನೂರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಚಿವರ ಬಗ್ಗೆ ಮಾತನಾಡುತ್ತಾರೆ...

**ಸಭಾಪತಿಯವರು**:- ಮಾನ್ಯ ಸಂಕನೂರರವರೇ, ಆಗಲೇ ತಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲವೇ? ದಯಮಾಡಿ ಕುಳಿತುಕೊಳ್ಳಿ. ನನ್ನ ಅನುಮತಿ ಇಲ್ಲದೇ ಯಾವುದೇ ಸದಸ್ಯರು ಮಾತನಾಡಿದರೆ ಅದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ತಾವು ಉತ್ತರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ)**:- ಮಾನ್ಯ ಸಭಾಪತಿಯವರೇ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಕೆ.ಪಿ. ನಂಜುಂಡಿಯವರು, ಶ್ರೀ ಕೆ.ಸಿ. ಕೊಂಡಯ್ಯನವರು, ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು, ಶ್ರೀ ಮರಿತಿಬ್ಬೇಗೌಡರವರು, ಶ್ರೀ ಆರ್. ಧರ್ಮಸೇನರವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ, ಆರ್ಥಿಕ ಪ್ರಾತಿನಿಧ್ಯದ ಒಟ್ಟು ಸ್ಥಿತಿ-ಗತಿಗಳ ಬಗ್ಗೆ ಮಾಡಿರುವ ಅಧ್ಯಯನ ವರದಿಯನ್ನು ಬಹಿರಂಗಪಡಿಸಬೇಕು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿರುತ್ತದೆ. ಆದರೆ, ಶ್ರೀ ಹೆಚ್. ಕಾಂತರಾಜುರವರ ನೇತೃತ್ವದಲ್ಲಿ 2015ರಲ್ಲಿ ಮಾಡಿರುವಂತಹ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಬಹಿರಂಗಪಡಿಸಬೇಕು ಎನ್ನುವುದು ಮಾತ್ರ ನಮ್ಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದಿರುವಂತಹ ಪ್ರಶ್ನೆಯಾಗಿರುತ್ತದೆ. ಆ ನಂತರ ಬೇರೆಲ್ಲಾ ವಿಚಾರಗಳು ಬಂದಿರುತ್ತವೆ. ಈಗ ನಾನು ತಮ್ಮ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಅಧ್ಯಯನಕ್ಕಾಗಿ ಸುಮಾರು 162 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಉಲ್ಲೇಖ ಮಾಡಲಾಗಿರುತ್ತದೆ. ಬೇರೆ ಬೇರೆ ವಿಚಾರಗಳನ್ನೆಲ್ಲಾ ಉಲ್ಲೇಖ ಮಾಡಲಾಗಿರುತ್ತದೆ. ಇದು ಅತ್ಯಂತ ಗಂಭೀರವಾದಂತಹ ಪ್ರಶ್ನೆಯಾಗಿರುತ್ತದೆ. ಶ್ರೀ ಹೆಚ್. ಕಾಂತರಾಜುರವರು ಸುದೀರ್ಘವಾಗಿರುವಂತಹ ಅವಧಿಯಲ್ಲಿ ಅಧ್ಯಯನವನ್ನು ಮಾಡಿ ಮಂಡನೆ ಮಾಡುವಂತಹ ಪ್ರಯತ್ನಗಳನ್ನು ಮಾಡಿದರು. ಆ ನಂತರ ಬೇರೆ ಬೇರೆ ಕಾರಣಕ್ಕೆ ಅವರ ಅವಧಿ ಮುಕ್ತಾಯವಾಯಿತು. ಆ ನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿರುತ್ತದೆ. ಆ ಸಂದರ್ಭದಲ್ಲಿ ಅಧ್ಯಕ್ಷರ ಹುದ್ದೆ ಖಾಲಿಯಾಗಿತ್ತು. ನಾವು ಈಗ ಹೊಸ ಅಧ್ಯಕ್ಷರನ್ನು ನೇಮಕ ಮಾಡಿದ್ದೇವೆ. ಅಲ್ಲಿ ಬೇರೆ ಬೇರೆ ಒತ್ತಡಗಳು, ಸಮಸ್ಯೆಗಳು ಇರುವುದು ಸತ್ಯ. ಇದರಲ್ಲಿ ಯಾವುದೇ ವಾದ ಇರುವುದಿಲ್ಲ. ಆದರೆ, ನಮ್ಮಲ್ಲಿರುವ ಒಂದಿಷ್ಟು ಮಾನಸಿಕತೆ ಏನೆಂದರೆ, ಯಾವುದಾದರೂ ರೂಪದಲ್ಲಿ ಈ ಸ್ಥಿತಿ-ಗತಿಗಳ ಅಧ್ಯಯನದ ವರದಿಯನ್ನು ಬಹಿರಂಗಪಡಿಸಬೇಕು ಎನ್ನುವುದು ನಮ್ಮ ಮುಂದಿರುವ ಚರ್ಚೆಯಾಗಿರುತ್ತದೆ. ಈ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಅಂದರೆ, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗಲೂ ಇದರ ಬಗ್ಗೆ ಒತ್ತಾಯ ಮಾಡಿರುತ್ತೇನೆ. ಈಗ ಒಂದು ಬಾರಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕೆಂಬ ಪ್ರಸ್ತಾಪಗಳನ್ನು ನಾನು ಮಾಡಿದ್ದು ಹೌದು. ಆದಾಗ್ಯೂ, ಈಗ ಹಿಂದುಳಿದ ವರ್ಗಗಳ ಆಯೋಗದ ಹೊಸ ಅಧ್ಯಕ್ಷರ ಜೊತೆಯಲ್ಲಿ ನಿನ್ನೆಯ ದಿವಸ ನಾನು ಮಾತನಾಡಿರುತ್ತೇನೆ. ಇದರ ಜೊತೆಗೆ, ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಹಾಗೂ ಸರ್ಕಾರದ ಜೊತೆಯಲ್ಲಿ ಬೇರೆ ಬೇರೆ ರೂಪದಲ್ಲಿ ಮಾತನಾಡಿ ಇದನ್ನು ಬಹಿರಂಗಪಡಿಸುವಂತಹ ಕೆಲಸವನ್ನು ಬಹುಬೇಗ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

**ಸಭಾಪತಿಯವರು:-** ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 03-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 02 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಮಧ್ಯಾಹ್ನ 03-00 ಗಂಟೆಗೆ ಸೇರಲು ನಿಶ್ಚಯಿಸಿತು)**

(284) 04.03.2021, 3.20, ಟಿಸಿಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ 3 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಅಜೆಂಡಾದಲ್ಲಿದ್ದಂತೆ **"ಒಂದು ರಾಷ್ಟ್ರ–ಒಂದು ಚುನಾವಣೆ"** ಕುರಿತು ಚರ್ಚೆ.

10. **'ಒಂದು ರಾಷ್ಟ್ರ – ಒಂದು ಚುನಾವಣೆ' ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಾರದೆಂದು ವಿರೋಧಪಕ್ಷದವರಿಂದ ಒತ್ತಾಯ ಹಾಗೂ ಧರಣಿ**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದನ್ನು ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದೀರೆಂದು ನಮಗೆ ಅರ್ಥವೇ ಆಗುತ್ತಿಲ್ಲ. ಒಂದು ದೇಶ–ಒಂದು ಚುನಾವಣೆ, ಒಂದು ದೇಶ–ಒಂದು ಕಾಡು ಮತ್ತು ಒಂದು ದೇಶ–ಒಬ್ಬ leader ಈ ರೀತಿ ಇದೆ. ಯಾಕ್ರೀ ಸಭಾನಾಯಕರೆ. ಒಂದು ದೇಶ–ಒಬ್ಬ ನಾಯಕ; ನೀವೇನು ಹಿಂದೆ–ಮುಂದೆ ನೋಡುವವರಲ್ಲ. ಮಾನ್ಯ ಸಭಾಪತಿಯವರೇ, ಇದು ಯಾವ ನಿಯಮದಡಿ ಅಜೆಂಡಾದಲ್ಲಿ ಬಂದಿದೆ. ಇದು ಚರ್ಚೆ ಎಲ್ಲಿ ಆಗಿದೆ? ಇದನ್ನು ತೆಗೆದುಕೊಳ್ಳುವುದಕ್ಕೆ ನಮ್ಮ Rules of procedure, ಈ ನಿಯಮಗಳೇನಿವೆ, ಈ ಒಂದು ನಿಯಮದಲ್ಲಾದರೂ ತೆಗೆದುಕೊಳ್ಳಬಹುದೆಂದು ಇರಬೇಕಲ್ಲವೇ? ಈಗ ತಾವು ನಿಯಮಕ್ಕನುಗುಣವಾಗಿಯೇ ಸದನವನ್ನು ನಡೆಸುತ್ತಿದ್ದೀರಿ. ಯಾವುದಾದರೊಂದು ನಿಯಮದಡಿ ಈ ಸದನದಲ್ಲಿ ಈ ವಿಷಯ ಚರ್ಚೆಗೆ ಬರಬೇಕು. ನಿಯಮ–72, ನಿಯಮ 330, ಶೂನ್ಯವೇಳೆ ಮತ್ತು ಬೇರೆ ಬೇರೆ ನಿಯಮದಡಿಯಲ್ಲಿ ಚರ್ಚೆ ಮಾಡಲು ಬರುತ್ತದೆಯೇ? ಯಾವ ನಿಯಮದಡಿ ಇದನ್ನು ಚರ್ಚೆ ಮಾಡಬೇಕು. ನಿಯಮದಡಿಯಲ್ಲಿ ಬರದಿದ್ದರೆ ನಾವು ಏನು ಬೇಕಾದರೂ ಚರ್ಚೆ ಮಾಡಬಹುದೇ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಹಿಂದೆ ನಾವು ಸಂವಿಧಾನ ಕುರಿತು 6 ದಿನಗಳ ಕಾಲ ಇದೇ ಸದನದಲ್ಲಿ ಚರ್ಚೆ ಮಾಡಿದ್ದೆವು. ಆಗ ಅದು ಇತ್ತೇ ಎಂದು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆಗ ಅದನ್ನು ಚರ್ಚೆ ಮಾಡಿದೆವು. ಈಗ ಒಂದು ದೇಶ–ಒಂದು ಚುನಾವಣೆ ಕುರಿತು ಚರ್ಚೆ ಮಾಡಬೇಕೆಂದು ಎಲ್ಲೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಗ ಸಂವಿಧಾನದ ಕುರಿತು ಚರ್ಚೆ ಮಾಡಲು Business Advisory Committee ಯಲ್ಲಿ ಚರ್ಚೆಯಾಗಿತ್ತು. Business Advisory Committee is meant for that only. ಅಜೆಂಡಾದಲ್ಲಿ ಯಾವ ವಿಷಯವನ್ನು ತೆಗೆದುಕೊಳ್ಳಬೇಕು, ಯಾವ ವಿಷಯವನ್ನು ಹೆಚ್ಚು ಚರ್ಚೆ ಮಾಡಬೇಕು, ಸದನವನ್ನು ಎಷ್ಟು ದಿನಗಳವರೆಗೆ ನಡೆಸಬೇಕು. ಆಮೇಲೆ ಪ್ರಶ್ನೋತ್ತರ ಯಾವ ರೀತಿ ನಡೆಸಬೇಕು ಎಂಬ ವಿವರವನ್ನು ನಾವು ನಿಮಗೆ ಹೇಳುವಂತಹ ಅವಶ್ಯಕತೆ ಇಲ್ಲ. ಎಲ್ಲಾ ನಿಮಗೆ ಗೊತ್ತಿದೆ. ಅದನ್ನು ಅನಿವಾರ್ಯವಾಗಿ what have been compelled... ಆದರೆ, ಇದನ್ನು ಚರ್ಚೆ ಮಾಡುವುದಕ್ಕೆ ಯಾವ ನಿಯಮವೂ ಇಲ್ಲ. ಯಾವ ನಿಯಮವೂ ಇಲ್ಲದೇ, ಏನು ಬೇಕಾದರೂ ಚರ್ಚೆ ಮಾಡಬಹುದೇ? ನೋಡಿ, ಇದು 114 ವರ್ಷಗಳ ಇತಿಹಾಸವುಳ್ಳಂಥ ಅತ್ಯಂತ ಹಿರಿಯದಾದ ಮನೆ ಮತ್ತು ಚಿಂತಕರ ಛಾವಡಿ. ನೀವು ಆ ಪೂಜ್ಯನೀಯ ಸ್ಥಾನದಲ್ಲಿ ಕುಳಿತುಕೊಂಡು ನಿಯಮಕ್ಕೊಳಪಟ್ಟು ಸದನವನ್ನು ನಡೆಸಬೇಕು. ನಾವ್ಯಾರಾದರು ಮಾತನಾಡಲು ಎದ್ದುನಿಂತರೆ, ನೀವು ನನ್ನ ಅನುಮತಿ ಪಡೆದುಕೊಂಡಿಲ್ಲ, ತಾವು ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ಇಲ್ಲಿ ನಾವು ತಮ್ಮ ಅನುಮತಿ ಪಡೆದುಕೊಂಡು ನಿಲ್ಲಬೇಕಾಗುತ್ತದೆ. ನೀವು ಹೇಳಿದಾಗ ನಾವು ಮಾತನಾಡಬೇಕು. ನೀವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು. ನಾವು ಅದನ್ನು ಚಾಚೂ ತಪ್ಪದೇ ಪಾಲನೆ ಮಾಡುತ್ತೇವೆ. You are the custodian of this House. ಈ ನಿಯಮಗಳೆಲ್ಲವನ್ನೂ ಪಾಲನೆ ಮಾಡುವ ಸಲುವಾಗಿ ತಾವು ಆ ಸ್ಥಾನದಲ್ಲಿ ಕುಳಿತಿದ್ದೀರಿ. ಈಗ ನೀವು ನಿಯಮ ಮೀರಿ "ಒಂದು ರಾಷ್ಟ್ರ-ಒಂದು ಚುನಾವಣೆ" ಕುರಿತು ವಿಶೇಷ ಚರ್ಚೆ ಎಂದು ಹೇಳುತ್ತಿದ್ದೀರಲ್ಲಾ. ಇಂತಹ ವಿಷಯವನ್ನು ನೀವು ತರುತ್ತಿದ್ದೀರಿ. ಏನೂ ಸಂಬಂಧವಿಲ್ಲ, ಸೂತ್ರವಿಲ್ಲ; ಒಂದು ನಿಯಮವಿಲ್ಲ. ಈ ವಿಷಯ Business Advisory Committee ಯಲ್ಲಿ ಚರ್ಚೆಯೇ ಆಗಿಲ್ಲ. ಇದು ಎಲ್ಲೂ ಚರ್ಚೆಯೇ ಆಗಿಲ್ಲ. ನಮ್ಮ ಸಭಾನಾಯಕರು "ಒಂದು ದೇಶ-ಒಬ್ಬ ನಾಯಕ" ಎಂದು ಹೇಳುತ್ತಿದ್ದರು.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ, "ಒಂದು ದೇಶ-ಒಂದು ಕುಟುಂಬ".

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(285)4.3.2021/3.30/ಎಂ.ಎಂ-ವಿ.ಕೆ

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ನನ್ನ ಕಡೆ ತಿರುಗಿ ಮಾತನಾಡಿ. ಈಗ ಮಾನ್ಯ ಹರಿಪ್ರಸಾದ್‌ರವರು ಮಾತನಾಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ನನ್ನ ಸ್ನೇಹಿತರಾಗಿ ಅವರು ನಮ್ಮ ಮೇಲೆ ಜೀವ . . .

**ಸಭಾಪತಿಯವರು:-** ನಮ್ಮನ್ನೂ ಸ್ವಲ್ಪ ಕನ್ಸಿಡರ್ ಮಾಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮೂರು ದೇಶ ಒಂದು ಚುನಾವಣೆ . . .

**ಸಭಾಪತಿಯವರು:-** ಇರಲಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 'ವಸುಧೈವ ಕುಟುಂಬಕಂ' ಎಂದು ಹೇಳುತ್ತಾರೆ. ಅದು ಅನುಕೂಲ ಶಾಸ್ತ್ರಗಳು ಅಷ್ಟೇ. 'ವಸುಧೈವ ಕುಟುಂಬಕಂ' ಎನ್ನುವವರು ದೇಶದಲ್ಲಿರುವವರನ್ನೇ ಒಪ್ಪಿಕೊಳ್ಳುವುದಿಲ್ಲ ಎಂದರೆ ಬೇರೆಯವರನ್ನೆಲ್ಲಾ ಎಲ್ಲಿ ಒಪ್ಪಿಕೊಳ್ಳುತ್ತಾರೆ ಅದು ಬೇರೆ ಪ್ರಶ್ನೆ. ಒಂದು ದೇಶ, ಒಂದು ಚುನಾವಣೆಯು ಮೊದಲು ಚರ್ಚೆಯಾಗಬೇಕಾಗಿರುವುದು ಪಾರ್ಲಿಮೆಂಟ್‌ನಲ್ಲಿ. ಏಕೆಂದರೆ, ಇದಕ್ಕೆ ಸಂವಿಧಾನದ ತಿದ್ದುಪಡಿಯಾಗಬೇಕು. ಸಂವಿಧಾನದ ತಿದ್ದುಪಡಿ ಮಾಡುವುದಕ್ಕೆ ಅನುಚ್ಛೇದ 368ರಲ್ಲಿ *"The Doctrine says that the Parliament does have the power under Article 368 of the Constitution to amend the Constitution. This power does not allow the Parliament to amend the basic structure of the Constitution and the federal character of the Constitution has been specified to be one of the features of the basic structure..."* 'ಕೇಶವಾನಂದ ಭಾರತಿ' ಕೇಸ್‌ನಲ್ಲು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಮಾಡುತ್ತಾರೆ. ಏಕೆಂದರೆ, ಸಂವಿಧಾನದ ಅನುಚ್ಛೇದ 370 ಮಾಡಿರುವ ಜನ ಏನು ಬೇಕಾದರೂ ಮಾಡುತ್ತಾರೆ ಅದು ಬೇರೆ ಪ್ರಶ್ನೆ. Basic structure ಅನ್ನು ಮುಟ್ಟುವುದಕ್ಕಾಗುವುದಿಲ್ಲ ಎಂದು ಸುಪ್ರೀಂಕೋರ್ಟ್‌ನ 13 ನ್ಯಾಯಾಧೀಶರ ಪೀಠ ತೀರ್ಪನ್ನು ಕೊಟ್ಟಿದೆ. ನೀವು ಅದನ್ನು ಇಲ್ಲಿ ಚರ್ಚೆ ಮಾಡಬೇಕೆನ್ನುವುದು ಎಷ್ಟು ಸಮಂಜಸ ಎಂದು ತಾವೇ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಯಾವುದೋ ಒಂದು ಸಂಘಟನೆಯ ಅಜೆಂಡಾವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು ಬಂದು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಅವರು ಅಲ್ಲಿ ಚರ್ಚೆ ಮಾಡಿಕೊಳ್ಳಲಿ ಬಹಳ ಸಂತೋಷ. ಇದನ್ನು ದೇಶದ ಪ್ರಧಾನಮಂತ್ರಿಯವರು 2014ರಲ್ಲಿಯೂ ಸಹ ಹೇಳಿದ್ದರು. 'ಒಂದು ದೇಶ, ಒಂದು ಚುನಾವಣೆ' ಎಂಬುದು 2019ರಲ್ಲು ಕೂಡ ಭಾರತೀಯ ಜನತಾ ಪಕ್ಷದ manifesto ದಲ್ಲೂ ಇತ್ತು. ಅದು ಅಲ್ಲಿ ಚರ್ಚೆಯಾಗಬೇಕು. ಈ ಸದನದಲ್ಲಿ ನಾವು ಸಂವಿಧಾನವನ್ನು ಮುಟ್ಟುವುದಕ್ಕೇ ಆಗುವುದಿಲ್ಲ. ಸಂವಿಧಾನದ basic structure ಏನಿದೆ ಅದರಲ್ಲಿ ಏನಾದರೂ ಬದಲಾವಣೆ ಮಾಡಬೇಕೆನ್ನುವುದು ಇದ್ದರೆ 2/3 ಮೆಜಾರಿಟಿ ಇಟ್ಟುಕೊಂಡು ಪಾರ್ಲಿಮೆಂಟ್‌ನಲ್ಲಿ ಮಾಡಬೇಕೇ ವಿನಃ ಈ ಸದನದಲ್ಲಲ್ಲ. ಆದ್ದರಿಂದ ದಯವಿಟ್ಟು ಇದನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಡಿ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಒಂದು ದೇಶ, ಒಂದು ಚುನಾವಣೆ ಎನ್ನುವುದು ಎಲ್ಲಿಯೂ ಚರ್ಚೆಯಾಗಿಲ್ಲ, ಇಲ್ಲಿ ಚರ್ಚೆಯಾಗಬಾರದು ಎನ್ನುವುದು ನಮ್ಮ ಮನವಿಯಾಗಿದೆ. ಏಕೆಂದರೆ, ನಿಮ್ಮಂತಹವರು ಇರುವಾಗ ಇಂತಹ ವಿಷಯ ಚರ್ಚೆಯಾಗಬಾರದು. ಇದು ಸಂವಿಧಾನಕ್ಕೆ ವಿರೋಧ. Rules of Procedure ಬುಕ್‌ನಲ್ಲಾಗಲೀ ಅಥವಾ ನಮ್ಮ ನಡವಳಿಕೆಗಳಲ್ಲಾಗಲೀ ಅಥವಾ Legislation ನಲ್ಲಾಗಲೀ ಎಲ್ಲಾದರೂ ಇದನ್ನು ತರಬಹುದು ಎಂದು ಇದ್ದರೆ ಹೇಳಿ ನಾವು point of order raise ಮಾಡುತ್ತೇವೆ. ವಿನಾಕಾರಣ ಸಮಯವನ್ನು ವ್ಯರ್ಥ ಮಾಡಿ ಇದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾವು ಇದನ್ನು ನಡೆಸುವುದಕ್ಕೆ ಕೊಡುವುದಿಲ್ಲ.

**ಶ್ರೀ ಹೆಚ್.ಎಂ. ರಮೇಶ್ ಗೌಡ(ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಇವತ್ತು ಒಂದು ದೇಶ, ಒಂದು ಚುನಾವಣೆ ಎಂದು ಅಜೆಂಡಾವನ್ನು ತೆಗೆದುಕೊಂಡು ಬಂದಿದ್ದಾರೆ. ಆದರೆ ಇದನ್ನು ಯಾವ ಆಧಾರದ ಮೇಲೆ ತೆಗೆದುಕೊಂಡು ಬಂದಿದ್ದಾರೆ ಎಂದು ನನಗಂತೂ ಅರ್ಥವಾಗಿಲ್ಲ. ಏಕೆಂದರೆ, ಒಂದು ವೇಳೆ ಇಡೀ ದೇಶದಲ್ಲಿ ಒಂದೇ ಚುನಾವಣೆ ಎಂದು ಇಟ್ಟುಕೊಳ್ಳೋಣ. ಎಲ್ಲಾ ರಾಜ್ಯದಲ್ಲೂ ಒಂದೇ ಸಲ ಚುನಾವಣೆ ನಡೆಯಿತು, ಲೋಕಸಭೆ ಮತ್ತು ರಾಜ್ಯ ಚುನಾವಣೆಗಳು ಒಂದೇ ಸಲ ನಡೆಯುತ್ತದೆ ಎಂದು ಇಟ್ಟುಕೊಳ್ಳೋಣ. ಮೊನ್ನೆ ಭಾರತೀಯ ಜನತಾ ಪಾರ್ಟಿಯವರು ಜೆ.ಡಿ(ಎಸ್) ಮತ್ತು ಕಾಂಗ್ರೆಸ್ ಶಾಸಕರನ್ನು ಕರೆದುಕೊಂಡು ಹೋಗಿ ಅನೈತಿಕವಾದ ಸರ್ಕಾರವನ್ನು ತೆಗೆದುಕೊಂಡು ಬಂದರು. ಆ ರೀತಿ ಆದರೆ ಒಂದು ದೇಶ, ಒಂದು ಚುನಾವಣೆ ಅದು ಯಾವ ರೀತಿ ಆಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಇದನ್ನು ನಮ್ಮ ದೇಶದಲ್ಲಿ ತರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಭಾವನೆ ನಮ್ಮದು. ಒಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೇಳೆ ಭಾರತೀಯ ಜನತಾ ಪಾರ್ಟಿ ಕೇಂದ್ರದಲ್ಲೂ ಸಹ ಅವರದ್ದೇ ಸರ್ಕಾರ, ರಾಜ್ಯದಲ್ಲೂ ಸಹ ಅವರದ್ದೇ ಸರ್ಕಾರ ಇದೆ. ಈಗಾಗಲೇ United Nations ನಲ್ಲಿ ಇರುವ ರೀತಿ ಏನಾದರೂ ಅವರ ಭಾವನೆ ಇದ್ದರೆ ಮೊದಲು ಅದು ಲೋಕಸಭೆಯಲ್ಲಿ ಮಂಡನೆಯಾಗಬೇಕಾಗುತ್ತದೆ. ಮಾನ್ಯ ಹರಿಪ್ರಸಾದ್‌ರವರು ಹೇಳಿದ ಹಾಗೆ ಅವರು ಅಲ್ಲಿ ತಿದ್ದುಪಡಿಯನ್ನು ತರಬೇಕಾಗುತ್ತದೆ. ಅಲ್ಲಿ ತಿದ್ದುಪಡಿಯನ್ನು ತಂದ ನಂತರ ನಮ್ಮ ರಾಜ್ಯದಲ್ಲಿ, ಸದನಗಳಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಅದರ ಬಗ್ಗೆ ಏನಾದರೂ ಒಂದಷ್ಟು ಮಾಹಿತಿ ತೆಗೆದುಕೊಂಡು ಮಾತನಾಡಬಹುದು. ಏನೂ ಇಲ್ಲದೇ ಏಕಾಏಕಿ ಅಜೆಂಡಾದಲ್ಲಿ ತಂದಿರುವುದು ಸೂಕ್ತವಾದ ಕ್ರಮವಲ್ಲ, ಅದನ್ನು ತರಬಾರದು ಎಂದು ನಾವು ತಮ್ಮಲ್ಲಿ ಮನವಿ ಮಾಡುತ್ತೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಹಾಗೆಯೇ ಎಲ್ಲಾ ಹಿರಿಯ ಸದಸ್ಯರು ಕೂಡ ಪ್ರಸ್ತಾಪ ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಇದನ್ನು ತಾವು Business Advisory Committee ಯಲ್ಲಿ ಚರ್ಚೆ ಮಾಡದೇ ಇದನ್ನು ಅಜೆಂಡಾದಲ್ಲಿ ತಂದಿರುವುದೇ ನನ್ನ ಪ್ರಕಾರ ಇದು ಸರಿಯಾದ ಒಂದು ನಿಯಮವಲ್ಲ ಎಂದು ಭಾವಿಸಿದ್ದೇನೆ. ಒಂದು ದೇಶ, ಒಂದು ಚುನಾವಣೆ ಎಂದು ಮಾಡಬೇಕು ಎನ್ನುವುದು ಏನಾದರೂ ಇದ್ದರೆ ಈಗಾಗಲೇ ಮಾನ್ಯ ಹರಿಪ್ರಸಾದ್‌ರವರು ಹೇಳಿದ್ದಾರೆ. ಸಂವಿಧಾನದ ಅನುಚ್ಛೇದ 368ರ ಪ್ರಕಾರ ಪಾರ್ಲಿಮೆಂಟ್‌ನಲ್ಲಿ ಅದನ್ನು ನಿರ್ಣಯ ಮಾಡುವುದಕ್ಕೆ ಅಧಿಕಾರವಿದೆ. ಆದರೆ ಇದರ ಹಿಂದೆ ಏನಾದರೂ ಇದೆಯೇ? ಇವತ್ತು ಇದನ್ನು ವಿಧಾನಸಭೆಯಲ್ಲಿಯೂ ಚರ್ಚೆ ಮಾಡುವುದಕ್ಕೆ ಪ್ರಸ್ತಾಪ ಮಾಡಿದ್ದಾರೆ, ಇಲ್ಲಿಯೂ ಮಾಡಿದ್ದಾರೆ. ಇದರ ಹಿಂದೆ ಏನಾದರೂ ಸಂಚು ಇದೆಯೇ? ನಮ್ಮ ದೇಶದಲ್ಲಿ ಸಂವಿಧಾನಕ್ಕೆ ವಿರೋಧವಾಗಿ ಏನೇನು ರೂಪಿಸುತ್ತಿದೆ. ಇವತ್ತಿನ ದಿನಮಾನಗಳಲ್ಲಿ ತಾವು ನೋಡಿದ್ದೀರಿ. ಸಿ.ಎ.ಎ., ಕಾನೂನನ್ನು ತಂದರು, ಎನ್.ಆರ್.ಸಿ., ಕಾನೂನನ್ನು ತಂದರು. ಈ ರೀತಿ ಹಲವಾರು ಕಾನೂನುಗಳನ್ನು ತಂದು ಏನು ಸಂವಿಧಾನವನ್ನು ಮೊಟಕುಗೊಳಿಸುವಂತಹ ಪ್ರಯತ್ನ ನಡೆಯುತ್ತಿದೆ ಇದು ಸರಿಯಾದುದಲ್ಲ. ನಾವು ಹಿರಿಯರ ಚಾವಡಿ ಎನಿಸಿಕೊಂಡು ಅರ್ಥಪೂರ್ಣವಾಗಿ, ಸಂವಿಧಾನಬದ್ಧವಾಗಿ ನಮ್ಮಲ್ಲಿ ಏನು ನಿಯಮಗಳಿವೆ ಮತ್ತು ನಮ್ಮ ಸಂವಿಧಾನದಲ್ಲಿ ಏನು ಹೇಳುತ್ತದೆ ಅದರ ಪ್ರಕಾರ ಚರ್ಚೆಗಳನ್ನು ಮಾಡಬೇಕು. ಇದನ್ನು ಬಿಟ್ಟು ಕೇಂದ್ರ ಸರ್ಕಾರದ ಒಂದು ಅಜೆಂಡಾ ಇದೆಯೆಂದು ಅದನ್ನು ನಾವೇಕೆ ಇಲ್ಲಿ ಚರ್ಚೆ ಮಾಡಬೇಕು? ಇದರಿಂದ ನಮ್ಮ ಸದನದ ಸಮಯ ವ್ಯರ್ಥವಾಗುತ್ತದೆ. ನಮಗೆ ಇನ್ನೂ ಹಲವಾರು ಮಹತ್ವದ ಪ್ರಶ್ನೆಗಳಿವೆ. ಪೆಟ್ರೋಲ್ ದರ, ಡೀಸೆಲ್ ದರ, ಕಾಯಿಪಲ್ಲೆಗಳ ದರ ಏರಿಕೆಯಾಗುತ್ತಿದೆ. ಈ ರೀತಿ ಹತ್ತು ಹಲವಾರು ಸಮಸ್ಯೆಗಳನ್ನು ಸದನದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆ ಮಾಡಬೇಕಾಗಿದೆ. ಅದರ ಬಗ್ಗೆ ಚರ್ಚೆ ಮಾಡದೇ ಸಮಯವನ್ನು ವ್ಯರ್ಥ ಮಾಡಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ನಮ್ಮ ರಾಜ್ಯದ ಜನರಿಗೆ ನಾವು ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ಯಾವತ್ತೂ ನಮ್ಮ ಸದನ ಸಂಪೂರ್ಣವಾಗಿ ನಡೆಯುವುದಕ್ಕೆ ಅವಕಾಶ ಸಿಗುತ್ತಿಲ್ಲ. ನಮಗೆ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಸಮಯ ಸಿಗುತ್ತಿಲ್ಲ. ನಾವು ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ ವಿನಃ ನಮ್ಮ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡಿ ನಿರ್ಣಯ ತೆಗೆದುಕೊಳ್ಳುವುದಕ್ಕೆ, ಇದರ ಆಗುಹೋಗುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಸಮಯ ವ್ಯರ್ಥವಾಗುತ್ತದೆ, ದಯವಿಟ್ಟು ತಾವು ಇದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇವತ್ತು ಒಂದು ದೇಶ, ಒಂದು ಚುನಾವಣೆ 'One Nation, One Election' ಅದರ ಬಗ್ಗೆ ಚರ್ಚೆ ಮಾಡಬೇಕೆಂದು ತಾವು ಅಜೆಂಡಾದಲ್ಲಿ ತೆಗೆದುಕೊಂಡಿದ್ದೀರಿ. ಇದು ಅಸಂಬದ್ಧವಾಗಿರುವಂತಹದ್ದು. ಚುನಾವಣೆ ಯಾವ ರೀತಿ ನಡೆಯಬೇಕೆಂಬುದನ್ನು ಚುನಾವಣಾ ಆಯೋಗ ತೀರ್ಮಾನ ಮಾಡುತ್ತದೆ. ನಮ್ಮ ದೇಶಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವಂತಹ ಸಂವಿಧಾನ ಏನಿದೆಯೋ ಅದರಲ್ಲಿ ಸಂಪೂರ್ಣವಾದಂತಹ, ಕಾನೂನಾತ್ಮಕವಾದಂತಹ ಎಲ್ಲಾ ವಿಷಯಗಳೂ ಅಡಗಿವೆ. ಆದರೆ ಎಲ್ಲೋ ಒಂದು ಕಡೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವಂತಹ ಸಂವಿಧಾನವನ್ನು ಅದಕ್ಕಿರುವಂತಹ ಶಕ್ತಿಯನ್ನು, ಬೆಲೆಯನ್ನು ಕಡಿತ ಮಾಡುವುದಕ್ಕೆ ಇದು ಹುನ್ನಾರ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಪಾರ್ಲಿಮೆಂಟ್‌ನಲ್ಲಿ ಇದು ಚರ್ಚೆಯಾಗಬೇಕು. 'One Nation, One Election' ಪಾರ್ಲಿಮೆಂಟ್‌ನಲ್ಲಿ ನಿಮಗೆ ಬಹುಮತ ಇದೆ, ಅಲ್ಲಿ ನೀವು ಮಾತುಕತೆಯಾಡಿ. ಉದಾಹರಣೆಗೆ ಹೇಳಬೇಕೆಂದರೆ, ಸುಮಾರು 5–6 ವರ್ಷಗಳ ಹಿಂದೆ ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗುತ್ತದೆ. 'One Nation, One Election' ಬಗ್ಗೆ ಮಾತನಾಡಬೇಕಾದರೆ ಒಂದು ಸಮಿತಿಯನ್ನು ಕೂಡ ಮಾಡುತ್ತಾರೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿ ಒಂದು ದೇಶಕ್ಕೆ ಒಂದು ಚುನಾವಣೆ ಇರಬೇಕೇ, ಇದರ ಬಗ್ಗೆ ಆಗುಹೋಗುಗಳನ್ನು ತಿಳಿದು ಹೇಳಬೇಕೆಂದಾಗ ಆ ಸಮಿತಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದೆ. ಈ ರೀತಿಯ ಕಾನೂನು ಮಾಡುವುದಕ್ಕೆ ಸಾಧ್ಯವಿಲ್ಲ, ಇದರಲ್ಲಿ ಯಾವುದೇ ರೀತಿಯ ಅರ್ಥಪೂರ್ಣವಾದಂತಹ ವಿಷಯವಿಲ್ಲ, ಇದನ್ನು ಕೈಬಿಡಬೇಕೆಂದು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಕೆಳಮನೆಯಲ್ಲಿ ಸ್ಪೀಕರ್‌ರವರು ಇದನ್ನು ತಂದಿದ್ದಾರೆ ಎಂದು ಚಿಂತಕರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಾವಡಿ ಎನ್ನುವಂತಹ ಮೇಲ್ಮನೆಯಲ್ಲಿ ಅದನ್ನು ಚರ್ಚೆ ಮಾಡುವಂತಹದ್ದು ಅಸಮಂಜಸ ಎಂದು ನನ್ನ ಭಾವನೆಯಾಗಿದೆ. ಒಂದು ದೇಶ, ಒಂದು ಚುನಾವಣೆ ಎನ್ನುತ್ತಾರೆ. ಬರೀ ಪಾರ್ಲಿಮೆಂಟ್, ಅಸೆಂಬ್ಲಿ ಮಾತ್ರ ಅಲ್ಲ.

(ಮುಂದು)

(286) 04-03-2021/ 03-40/ ಕೆಹೆಚ್-ವಿಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಇಲ್ಲಿ ಸಹಕಾರ ಸಂಘಗಳ ಚುನಾವಣೆಗಳು ಬರುತ್ತದೆ. ಪಂಚಾಯಿತಿ ಚುನಾವಣೆಗಳು ಬರುತ್ತದೆ. ಮುನಿಸಿಪಾಲಿಟಿ ಚುನಾವಣೆಗಳು ಬರುತ್ತದೆ. ಕಾರ್ಪೋರೇಷನ್ ಚುನಾವಣೆಗಳು ಬರುತ್ತದೆ. ಇದನ್ನು ಏನು ಮಾಡುವುದಕ್ಕೆ ಆಗುತ್ತದೆ? ಚುನಾವಣೆಗಳ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, 5 ವರ್ಷಗಳಿಗೊಮ್ಮೆ ಚುನಾವಣೆಗಳು ಆಗುತ್ತದೆ. ಚುನಾವಣಾ ಆಯೋಗದವರು ಕಾನೂನುಬದ್ಧವಾಗಿ ಚುನಾವಣೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ಮಾಡುತ್ತಾರೆ. ಆಪರೇಷನ್ ಕಮಲ ಎನ್ನುವಂತಹ ಪಿಡುಗು ಏನಿದೆಯೋ ಮಾನ್ಯ ಶಾಸಕರುಗಳಿಗೆ ಆಸೆ-ಆಮಿಷಗಳನ್ನು ತೋರಿಸಿ, ಸರ್ಕಾರಗಳನ್ನು ಬೀಳಿಸಿ, ಬೇರೆ ಸರ್ಕಾರವನ್ನು ರಚನೆ ಮಾಡಿ, ಒಂದು ವೇಳೆ ಅಲ್ಲಿಯೂ ಕೂಡ ಸರ್ಕಾರ ಬಿದ್ದು ಹೋಯಿತು ಎಂದರೆ, ರಾಷ್ಟ್ರಪತಿಗಳ ಆಡಳಿತವನ್ನು ನೇಮಿಸಲಾಗುತ್ತದೆ. ಈ ರೀತಿಯಾದರೆ ಮತ್ತೆ ಮತ್ತೆ ಚುನಾವಣೆಗಳು ಬರುವುದಿಲ್ಲವೇ, ಇದಕ್ಕೆ ಏನಾದರೂ ಅರ್ಥ ಇದೆಯೇ, ನಿಜವಾಗಿಯೂ ಎಲ್ಲೋ ಒಂದು ಕಡೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ರವರು 'ಕೇಶವ ಕೃಪ'ದಲ್ಲಿ ಕುಳಿತು ಮಾಡಿರುವಂತಹ ಅಜೆಂಡಾ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದ್ದರಿಂದ, ಇದರ ಬಗ್ಗೆ ಚರ್ಚೆಯಾಗಬಾರದು. ಇವತ್ತು ಈ ರಾಜ್ಯ ಮತ್ತು ರಾಷ್ಟ್ರ ಬಹಳಷ್ಟು ಜಲ್ವಂತ ಸಮಸ್ಯೆಗಳ ಬಗ್ಗೆ ನೊಂದು ಬೆಂದಿದೆ. ಈ ರಾಷ್ಟ್ರದ ಬೆನ್ನೆಲುಬು ಎಂದು ಕರೆಯುವಂತಹ ರೈತರು ಏನಿದ್ದಾರೋ, ಅವರು ದೆಹಲಿಯಲ್ಲಿ ಸುಮಾರು 120 ದಿವಸಗಳಿಂದ ಹೋರಾಟ ಮಾಡುತ್ತಿದ್ದಾರೆ. ಈ ಕೃಷಿ ಕಾಯಿದೆಗಳನ್ನು ತಂದು ರೈತರ ಬೆನ್ನಿನ ಮೂಳೆಗಳನ್ನು ಮುರಿಯುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದ್ದರಿಂದ, ನೂರಾರು ಜನ ರೈತರು ಸತ್ತಿದ್ದಾರೆ. ನಾವು ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಿನೇ ದಿನೇ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಜಾಸ್ತಿ ಆಗುತ್ತಿದೆ. ಗ್ಯಾಸ್ ಸಿಲಿಂಡರ್ ಬೆಲೆ ಜಾಸ್ತಿ ಆಗುತ್ತಿದೆ. ನಾವೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಬೇಕೇ ಅಥವಾ 'ಒಂದು ರಾಷ್ಟ್ರ - ಒಂದು ಚುನಾವಣೆ' ಬಗ್ಗೆ ನಾವೆಲ್ಲರೂ ಮಾತನಾಡಬೇಕೇ, ದಯಮಾಡಿ, 'ಒಂದು ರಾಷ್ಟ್ರ - ಒಂದು ಚುನಾವಣೆ' ಯ ವಿಷಯವನ್ನು ಚರ್ಚೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬಾರದು. ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರು ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ದಯಮಾಡಿ, ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಕೈಬಿಟ್ಟು ಈ ರಾಜ್ಯ ಮತ್ತು ರಾಷ್ಟ್ರ ಎದುರಿಸುತ್ತಿರುವಂತಹ ಜ್ವಲಂತ ಸಮಸ್ಯೆಗಳು ಏನಿದೆಯೋ ಅದರ ಬಗ್ಗೆ ಚರ್ಚೆಯಾಗಬೇಕು. ಇನ್ನೊಂದು ಮಹತ್ತರವಾದ ವಿಷಯ ಎಂದರೆ, ದಕ್ಷಿಣ ಕರ್ನಾಟಕದ ಜೀವನದಿ ಕಾವೇರಿ ನದಿ, ಅದರ ನೀರನ್ನು ತಮಿಳುನಾಡಿಗೆ ಬಿಡುವಂತಹ ಕೆಲಸವನ್ನು ಇವತ್ತಿನ ದಿವಸ ಕೇಂದ್ರ ಸರ್ಕಾರವು ಮಾಡುತ್ತಿದೆ. ತಮಿಳುನಾಡಿನಲ್ಲಿ ಚುನಾವಣೆಯಾಗುತ್ತದೆ ಎಂದು ಸಾವಿರಾರು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನಾವು ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅದಕ್ಕೋಸ್ಕರ ಈ ವಿಷಯವನ್ನು ಕೈಬಿಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯ ನಮ್ಮ State Legislature ಗೆ ಬರುತ್ತದೆಯೇ?

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ಇದರ ಬಗ್ಗೆ ತಮಗೆ ನಂತರ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 'ಒಂದು ರಾಷ್ಟ್ರ – ಒಂದು ಚುನಾವಣೆ' ಇದು ಸರಳವಾದಂತಹ ವಿಚಾರವೇ. ಕೇಂದ್ರದಲ್ಲಿ White Paper ಅನ್ನು ಹೊರಡಿಸಿದ್ದಾರೆಯೇ, ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿದೆ or Enactment ಆಗಿದೆ. ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇದೊಂದು ರಾಷ್ಟ್ರ ಮಟ್ಟದ ವಿಚಾರ. ಇಲ್ಲಿ ಏನು ಇಲ್ಲ. ನಮ್ಮ ಸದನ ಮಾರ್ಚ್ 31 ರವರೆಗೂ ನಡೆಯುತ್ತದೆ. ಅದಕ್ಕಾಗಿ ಈ ಸರ್ಕಾರಕ್ಕೆ ಅಭಿನಂದಿಸಬೇಕು. ಮಾನ್ಯ ಎಂ.ನಾರಾಯಣಸ್ವಾಮಿಯವರು ಈ ರಾಜ್ಯದ ಜ್ವಲಂತ ಸಮಸ್ಯೆಯ ಬಗ್ಗೆ ಮತ್ತು ಕನ್ನಡಾಂಬೆಯ ಕಾವೇರಿ ಮತ್ತು ಕೃಷ್ಣೆ ಎರಡು ಕಣ್ಣು ಇದ್ದ ಹಾಗೆ. ಕೃಷ್ಣೆಯ ಮೂರನೇ ಹಂತದ 55 ಸಾವಿರ ಕೋಟಿ ರೂಪಾಯಿಗಳ ಯೋಜನೆಗೆ 55 ರೂಪಾಯಿಗಳನ್ನು ಸಹ ಕೊಟ್ಟಿಲ್ಲ. 137 ಟಿಎಂಸಿ ನೀರು ಅಲೋಕೇಷನ್ ಆಗಿದೆ. 14 ಲಕ್ಷ ಎಕರೆ ನೀರಾವರಿ ಆಗುತ್ತದೆ. ಇನ್ನು ಒಂದು ಗುಂಟೆ ಜಮೀನಿಗೂ ನೀರಾವರಿ ಆಗಿಲ್ಲ.

**ಸಭಾಪತಿಯವರು:–** ಮಾನ್ಯ ಎಸ್.ಆರ್,ಪಾಟೀಲ್‌ರವರೇ, . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I request you. ನಾನು ಹೇಳುವುದನ್ನು ಕೇಳಿ. ತಾವು ಅವಸರ ಮಾಡುವುದಕ್ಕೆ ಹೋಗಬೇಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾನು ಅವಸರ ಮಾಡುತ್ತಿಲ್ಲ. ಇದರ ಬಗ್ಗೆ ತಾವು ಎರಡು ಬಾರಿ ಹೇಳಿದ್ದೀರಿ ಎಂದು ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, This is my submission. ನಾನು ಹೇಳುವುದನ್ನು ಕೇಳಿ. ನಮ್ಮ ದೇಶದಲ್ಲಿ ಅನೇಕ ಜ್ವಲಂತ ಸಮಸ್ಯೆಗಳು ಇವೆ. ರಾಜ್ಯದಲ್ಲಿ ತಲೆ ತಿನ್ನುವಂತಹ ಮತ್ತು ದೇಶಕ್ಕೆ ಅನ್ನ ಇಡುವಂತಹ ಧಣಿಗಳ ಸಮಸ್ಯೆ, ಅನ್ನದಾತರ ಸಮಸ್ಯೆ, ಈ ನಾಡಿನ ಜಲ–ನೆಲದ ಪ್ರಶ್ನೆ ಇದೆ. ಅನೇಕ ಜ್ವಲಂತ ಸಮಸ್ಯೆಗಳು ನಮಗೆ ನಿದ್ದೆ ಮಾಡುವುದಕ್ಕೆ ಅವಕಾಶ ಕೊಡದೇ ಇರುವಷ್ಟು ಸಮಸ್ಯೆಗಳು ಇವೆ. ಇವತ್ತು 'ಒಂದು ರಾಷ್ಟ್ರ – ಒಂದು ಚುನಾವಣೆ'ಯ ಬಗ್ಗೆ ಚರ್ಚೆ ಮಾಡುವುದಕ್ಕೆ ಸದನವನ್ನು ಕರೆದಿದ್ದಾರೆ. ಇವರು ರಾಜ್ಯದ ಸಮಸ್ಯೆಗಳನ್ನೆಲ್ಲಾ ಬಿಟ್ಟಿದ್ದಾರೆ. ಪ್ರಸ್ತುತ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ತಲೆ ತಿನ್ನುವಂತಹ ಸಮಸ್ಯೆಗಳು ಇವೆ. ಇವತ್ತಿನ ದಿವಸ ಬೆಳಗ್ಗೆ ಹಿಂದುಳಿದ ವರ್ಗದವರ ಬಗ್ಗೆ ಮಾನ್ಯ ಸದಸ್ಯರಾದ ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿದರು. ಎಲ್ಲಾ ಸಮಾಜದವರು ನಮ್ಮನ್ನು ಆ ವರ್ಗಕ್ಕೆ ಹಾಕಿ, ಈ ವರ್ಗಕ್ಕೆ ಹಾಕಿ ಎಂದು ಕೇಳುತ್ತಿದ್ದಾರೆ. ಇದ್ದರಿಂದ, ನಮಗೆಲ್ಲಾ ನಿದ್ದೆ ಮಾಡುವುದಕ್ಕೆ ಬಿಡದೇ ಇರುವಂತಹ ಪರಿಸ್ಥಿತಿ ಆಗಿದೆ. ಇವತ್ತಿನ ದಿವಸ ಅಂತಹ ಪರಿಸ್ಥಿತಿ ಇದೆ. ಇನ್ನು ಅನೇಕ ಜ್ವಲಂತ ಸಮಸ್ಯೆಗಳು ಇವೆ. More than this. 'ಒಂದು ರಾಷ್ಟ್ರ – ಒಂದು ಚುನಾವಣೆ' ಆಗಬೇಕಾದರೆ ಸಂವಿಧಾನದಲ್ಲಿ ತಿದ್ದುಪಡಿಯಾಗಬೇಕು. ತಮ್ಮ ಗಮನಕ್ಕೆ ತರುವುದೇನೆಂದರೆ, ಸಂವಿಧಾನದ ಪರಿಚ್ಛೇದ–83 states that "the term of Lok Sabha will be five years from the date of its first sitting..." ಎಂದು ಹೇಳುತ್ತದೆ. ಸಂವಿಧಾನದ ಪರಿಚ್ಛೇದ–85 states that "it empowers the President to dissolve the Lok Sabha..." ಎಂದು ಹೇಳುತ್ತದೆ. ಸಂವಿಧಾನದ ಪರಿಚ್ಛೇದ–83 ಮತ್ತು ಸಂವಿಧಾನದ ಪರಿಚ್ಛೇದ–85 term ಇದೆಯಲ್ಲವೇ, ಸಂವಿಧಾನದ ಪರಿಚ್ಛೇದ–174 states that "it empowers the Governor of the State to dissolve the Legislative Assembly..." ಅವರು ಶಿಫಾರಸ್ಸು ಮಾಡುತ್ತಾರೆ. ಸಂವಿಧಾನದ ಪರಿಚ್ಛೇದ–172 states that "the term of the Legislative Assembly will be five years from the date of its first sitting..." ಎಂದು ಹೇಳುತ್ತದೆ. ಸಂವಿಧಾನದ ಪರಿಚ್ಛೇದ–83 ಮತ್ತು ಸಂವಿಧಾನದ ಪರಿಚ್ಛೇದ–85 Parliament ಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಸಂವಿಧಾನದ ಪರಿಚ್ಛೇದ–172 ಮತ್ತು ಸಂವಿಧಾನದ ಪರಿಚ್ಛೇದ–174 State Legislature ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟಿದ್ದಾಗಿರುತ್ತದೆ. ಸಂವಿಧಾನದ ಪರಿಚ್ಛೇದ–356 states that "it authorises the Central Government to impose President's rule for the failure of C*onstitutional Machinery* in a State…" ರಾಜ್ಯದಲ್ಲಿ ಸಂವಿಧಾನಾತ್ಮಕವಾಗಿ ಸರ್ಕಾರವನ್ನು ನಡೆಸುವುದಕ್ಕೆ ಅಸಾಧ್ಯವಾದಂತಹ ಸ್ಥಿತಿ ಇದೆ ಎಂದು ಘನತೆವೆತ್ತ ರಾಜ್ಯಪಾಲರು ಶಿಫಾರಸ್ಸು ಮಾಡಿದ್ದರೆ, Central Cabinet ತೀರ್ಮಾನವನ್ನು ತೆಗೆದುಕೊಂಡು dissolve ಮಾಡುತ್ತಾರೆ. ಇದಲ್ಲದೇ ಇನ್ನು ಒಂದು ಕಾಯ್ದೆ ಇದೆ. The Representation of Peoples Act ಅನ್ನು ತಿದ್ದುಪಡಿ ಮಾಡಬೇಕು. ಸಂವಿಧಾನದ ಪರಿಚ್ಛೇದ–356 ಕಾಯ್ದೆಯನ್ನು ತಿದ್ದುಪಡಿ ಮಾಡಬೇಕು. ಸಂವಿಧಾನದ ಪರಿಚ್ಛೇದ–83, ಸಂವಿಧಾನದ ಪರಿಚ್ಛೇದ–85, ಸಂವಿಧಾನದ ಪರಿಚ್ಛೇದ–172 ಮತ್ತು ಸಂವಿಧಾನದ ಪರಿಚ್ಛೇದ–174 ಇವೆಲ್ಲಾ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕು. 2024ರ ವರೆಗೆ Parliament term ಇದೆ. ಕಳೆದ ವರ್ಷ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢ್ ಇಲ್ಲಿ ಚುನಾವಣೆಗಳು ಆಗಿವೆ. ಈಗ ಪಂಚರಾಜ್ಯಗಳ ಚುನಾವಣೆಗಳು ನಡೆಯಲಿದೆ. ಇನ್ನೇನು 5 ವರ್ಷಗಳು ಆಗುತ್ತದೆ. ಈಗ 5 ರಾಜ್ಯಗಳಲ್ಲಿ ಚುನಾವಣೆಗಳಾದರೆ, ಇವರಿಗೆ 5 ವರ್ಷಗಳ ಸಂವಿಧಾನತ್ಮಾಕವಾಗಿ ಅವಧಿ ಇದೆ. Parliament Election ಬಂದ ಕೂಡಲೇ ಇವರನ್ನೆಲ್ಲಾ dissolve ಮಾಡಿಬಿಡುತ್ತಾರೆ. ಎಲ್ಲಾ Assembly ಅನ್ನು dissolve ಮಾಡಿ, Parliament and Assembly ಕೂಡಿ ಚುನಾವಣೆ ಮಾಡುವುದೇ? ಇದು ಸಣ್ಣ ವಿಷಯ ಅಲ್ಲ. Representation of Peoples Act ಅನ್ನು ತಿದ್ದುಪಡಿ ಮಾಡಬೇಕು. ಸಂವಿಧಾನದ ಪರಿಚ್ಛೇದ–356 ಅನ್ನು ತಿದ್ದುಪಡಿ ಮಾಡಬೇಕು. ಸಂವಿಧಾನದ ಪರಿಚ್ಛೇದ–83, ಸಂವಿಧಾನದ ಪರಿಚ್ಛೇದ–85, ಸಂವಿಧಾನದ ಪರಿಚ್ಛೇದ–172 ಮತ್ತು ಸಂವಿಧಾನದ ಪರಿಚ್ಛೇದ–174 ಇವೆಲ್ಲಾ ಕಾಯ್ದೆಗಳನ್ನು ತಿದ್ದುಪಡಿ ಮಾಡಬೇಕು. ಕೆಲವು ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ simple majority ಕೂಡ ಇದೆ. Two-thirds majority ಕೂಡ ಇದೆ. ಸಂವಿಧಾನದ ಆಶಯಗಳನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಈಗಾಗಲೇ ಹೇಳಿದೆ. ಸಂವಿಧಾನದ ಮೂಲ ಅಂತಃಸತ್ವ ಏನಿದೆ. ಅದಕ್ಕೆ ಧಕ್ಕೆಯಾಗುವ ಆಗಿಲ್ಲ. Main structure ಏನಿದೆ ಮತ್ತು ಸಂವಿಧಾನದ ಆಶಯಗಳು ಏನಿದೆ, ಅದನ್ನು ತಿದ್ದುಪಡಿ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ two-thirds majority ಬೇಕು. ಕೆಲವು special amendment ಆಗಬೇಕು.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರೇ, . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಕೇಳಿ.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಾವು ಎಷ್ಟು ಹೊತ್ತು ಬೇಕಾದರೂ ಮಾತನಾಡಿ. ತಾವು ಹೇಳಿರುವ ವಿಷಯಗಳನ್ನೇ ಎರಡೆರಡು ಬಾರಿ ಹೇಳಿದ್ದೀರಿ. ತಾವು ಮಾತನಾಡಿರುವ ವಿಷಯಗಳನ್ನು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ, ನಾನು ಎಲ್ಲರೂ ಹೇಳುವುದನ್ನು ಕೇಳುತ್ತೇನೆ. ತಾವು ಮುಂದೆ ಬೇಕಾದರೆ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಮುಗಿಸುವುದು ಬೇಡವೇ, ನಾನು ಮಾತನಾಡುವುದು ಬೇಡ ಎಂದರೆ ನಾನು ಹೋಗುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾನು ಮಾತನಾಡಬೇಡಿ ಎಂದು ಹೇಳಿಲ್ಲ. ತಾವು ಮಾತನಾಡಿ. ನಾನು ಮಾತನಾಡುವುದನ್ನು ಕಡಿಮೆ ಮಾಡಿ ಎಂದು ಹೇಳುತ್ತಿದ್ದೇನೆ ಅಷ್ಟೇ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಂತಹ ಮಹತ್ತರವಾದ ವಿಷಯದಲ್ಲಿ ಏನು ಕಡಿಮೆ ಮಾತನಾಡಬೇಕು? ತಾವು ನನಗೆ ಕಡಿಮೆ ಮಾತನಾಡಿ ಎಂದು ಹೇಳುತ್ತೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಇಷ್ಟು ಹೊತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, by virtue of Opposition Leader, I will not have any time limits. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಸಹ ಅವರಿಗೆ ಅದನ್ನೇ ಹೇಳುತ್ತಿದ್ದೇನೆ. ಅವರು ಕೇಳಬೇಕಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಎಲ್ಲಾ ಪ್ರತ್ಯೇಕ ಪರಿಚ್ಛೇದಗಳು ತಿದ್ದುಪಡಿಯಾಗಬೇಕು. ಸಂವಿಧಾನದ ಪರಿಚ್ಛೇದ 356 ರಿಂದ ಹಿಡಿದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Representation of Peoples Act ತಿದ್ದುಪಡಿಯಾಗಬೇಕು. ಈ ವಿಚಾರ ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧು ಅಲ್ಲ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಈಗ debate ಅನ್ನೇ start ಮಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 'One Nation, One Election' should not be taken up for discussion. ನೀವು ಯಾವ Rules ಕೆಳಗೂ ತಂದಿಲ್ಲ. Business Advisory Committee ಯಲ್ಲಿಯೂ ಚರ್ಚೆಗೆ ತೆಗೆದುಕೊಳ್ಳಬೇಕೋ, ಬೇಡವೋ ಎಂದು ಚರ್ಚೆ ಸಹ ಮಾಡಿಲ್ಲ ಹಾಗೂ ಇದನ್ನು ಮನಸೋಯಿಚ್ಛೆ ಸದನದಲ್ಲಿ ತಂದು ಚರ್ಚೆ ಮಾಡುವುದಕ್ಕೆ ಈ ಪವಿತ್ರವಾದಂತಹ ಸದನದ ಅತ್ಯಂತ ಮಹತ್ವವಾದ ಸಮಯವನ್ನು ವ್ಯರ್ಥವಾಗಿ ಹಾಳು ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

**ಸಭಾಪತಿಯವರು:–** ಇದರ ಬಗ್ಗೆ ನಾನು ಹೇಳುತ್ತೇನೆ.

**ಶ್ರೀ ಅಡಗೂರು ಹೆಚ್ ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಇದರ ಬಗ್ಗೆ ತಾವು ಹೇಳುತ್ತೀರಿಯೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಇದರ ಬಗ್ಗೆ ಯಾರೋ ಒಬ್ಬರು ಹೇಳಿ. ತಾವು ಏನು ಹೇಳುತ್ತೀರೋ, ಅದನ್ನು ಚಿಕ್ಕದಾಗಿ ಹೇಳಿ.

**ಶ್ರೀ ಅಡಗೂರು ಹೆಚ್ ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಒಂದು ದೇಶ – ಒಂದು ಚುನಾವಣೆ, ಒಂದು ಮತದಾರರ ಪಟ್ಟಿ. Yes, it is a need of a Nation. It is not just a discussion on the floor of the House. It is a need of a Country. Leader of the Opposition ಅವರು ಹೇಳಿದರು. ಇದಕ್ಕೆ ಬೇಕಾದಷ್ಟು amendments ಗಳು ಬೇಕಾಗುತ್ತದೆ. Yes, it needs a decorian changes in the Constitution ನಲ್ಲಿ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(287) 04/03/2021/ಎಸ್‌ಪಿಆರ್/ಬಿಎನ್‌ಎಸ್/3:50**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್(ಮುಂದು):–**
ನಮ್ಮ ದೇಶದ ಸಂವಿಧಾನಕ್ಕೆ ಬಹಳಷ್ಟು ತಿದ್ದುಪಡಿಗಳ ಅವಶ್ಯಕತೆ ಇದೆ ಮತ್ತು ತಿದ್ದುಪಡಿಗಳಾಗಿವೆ. ಏನಾದರೂ ಹೊಸತನ, ಬದಲಾವಣೆ ಮತ್ತು ಸುಧಾರಣೆಗಳು ಬೇಕೆಂದರೆ, ಈ ಹಿಂದೆಯೂ ಸಹ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತಂದಿದ್ದೇವೆ; ಮುಂದೆಯೂ ಸಹ ತರಲೂ ಬೇಕಾಗುತ್ತದೆ. ಹಾಗೆಂದು ಇದು ಚರ್ಚೆಗೆ ಬೇಡವಾದ ವಿಷಯವಲ್ಲ; ಬಹಳ ಪ್ರಮುಖವಾದ ವಿಚಾರವಾಗಿದೆ. ಜಾಗತಿಕ ಜಗತ್ತಿನಲ್ಲಿ ಅತ್ಯಂತ ಎತ್ತರದ ಜನತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡು ಮತ್ತು ಅಪ್ಪಿಕೊಂಡು ಆಡಳಿತ ಮಾಡುತ್ತಿರುವ ದೇಶ ನಮ್ಮ ಭಾರತ. ಭಾರತದ ಚುನಾವಣೆಗಳು ಭಾರತದ ಮೆದುಳು ಮತ್ತು ಆತ್ಮವಾಗಿವೆ. ಅಂತಹ ಚುನಾವಣೆಗಳು ಹೇಗಿರಬೇಕು ಎನ್ನುವುದೇ 'ಒಂದು ದೇಶ – ಒಂದು ಚುನಾವಣೆ'. That is the beauty of democracy. ನಾವು ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ, discussion has to take place. Throw the subject to the general public for a vast discussion. Then come to conclusion. First debate, discussion, interaction then decision. Allow this House to debate on it. What is there in it? ಈ ವಿಷಯದಲ್ಲಿ ಚರ್ಚೆಗಳು ಏಕೆ ಆಗಬಾರದು?

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇಂತಹ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವೇ ಇಲ್ಲ.

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಎಲ್ಲಿ ಬೇಕಾದರೂ ಅವಕಾಶಗಳಿವೆ. ಸಂವಿಧಾನಕ್ಕೆ ಏನು ಬೇಕಾದರೂ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ನಿಮಗೆ ಮಾತನಾಡಲು ನಾನು ಸಾಕಷ್ಟು ಸಮಯಾವಕಾಶವನ್ನು ನೀಡಿದ್ದೇನೆ. ಬೇರೆಯವರು ಮಾತನಾಡುವಾಗ ಮಧ್ಯದಲ್ಲಿ ಎದ್ದು ಮಾತನಾಡುವುದು ಪದ್ಧತಿಯಲ್ಲ. ನಿಮಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದೇನೆ. ಯಾರು ಮಾತನಾಡಲು ಅವಕಾಶವನ್ನು ಕೇಳುತ್ತಾರೋ, ಅವರಿಗೆಲ್ಲಾ ಅವಕಾಶವನ್ನು ನೀಡಿದ್ದೇನೆ. ಮಾನ್ಯ ಸದಸ್ಯರು ಮಾತನಾಡಲು ಬಿಡಿ; ಮಧ್ಯದಲ್ಲಿ ಅಡ್ಡಿಪಡಿಸಬೇಡಿ ಮತ್ತು ಅಡ್ಡಪಡಿಸಲೂಬಾರದು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ ದಯಮಾಡಿ ನನ್ನ ಮಾತನ್ನು ಕೇಳಿ. ಮಾನ್ಯ ಸದಸ್ಯರು ಹೇಳುವುದನ್ನು ಕೇಳಿ. ನಿಮ್ಮಂತೆ ಅವರಿಗೂ ಸಹ ಮಾತನಾಡಲು ಸ್ವತಂತ್ರವಿದೆ. ಹೀಗಾಗಿ ಅವರು ಮಾತನಾಡಲಿ; ಅದನ್ನು ಕೇಳಿಸಿಕೊಳ್ಳುವಷ್ಟು ಪುರಸೊತ್ತು ನಿಮಗಿರಲಿ. ಶ್ರೀ ವಿಶ್ವನಾಥ್‌ರವರೇ ನೀವು ಮುಂದುವರೆಸಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಕಾಶ್ ರಾಥೋಡ್‌ರವರೇ, ನಾನು ನಿಮಗಿಂತ ಹಿರಿಯವನಾಗಿದ್ದೇನೆ. I am not just a layman. I am also an advocate. With my advocacy background I have studied the Constitution. ಇದರ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಸಂವಿಧಾನದಲ್ಲಿಯೇ ಮಾತನಾಡಲು ಅವಕಾಶವಿದೆ. ಪ್ರಸ್ತುತ ನಾವು ಯಾವುದರ ಬಗ್ಗೆ ಮಾತನಾಡುತ್ತಿದ್ದೇವೆ? 'ಒಂದು ರಾಷ್ಟ್ರ – ಒಂದು ಚುನಾವಣೆ – ಒಂದು ಮತದಾರರ ಪಟ್ಟಿ' ಇದರಲ್ಲಿ ಬಹಳಷ್ಟು ಅನುಕೂಲಗಳು ನಮ್ಮ ದೇಶಕ್ಕಾಗುತ್ತವೆ. It needs the hour of India. It is not just for discussion. ಹೀಗಾಗಿ ದಯಮಾಡಿ ಸಭಾಪತಿಯವರು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಬೇಕು; ಇದರ ಬಗ್ಗೆ ಚರ್ಚೆಯಾಗಲಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ಒಂದು ರಾಷ್ಟ್ರ – ಒಂದು ಚುನಾವಣೆ' ಈ ಅಂಶವು ಹೊಸದೇನೂ ಅಲ್ಲ. 1952 ನೇ ಇಸ್ವಿಯಿಂದ 1967 ರ ಇಸ್ವಿಯವರೆಗೂ ಸದಾಕಾಲ ಒಂದೇ ಬಾರಿಗೆ ಚುನಾವಣೆಗಳು ನಡೆಯುತ್ತಿದ್ದವು. 1967 ನೇ ಇಸ್ವಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತರ ಕಾರಣಾಂತರಗಳಿಂದ ಚುನಾವಣಾ ಸಮಯಗಳಲ್ಲಿ ವ್ಯತ್ಯಯಗಳಾದಾಗ ಆ ವ್ಯವಸ್ಥೆಯನ್ನು ಕೈಬಿಟ್ಟರು. ಇದು ಅಷ್ಟು ಸುಲಭವಾದುದಲ್ಲ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಅದು ಕಾರಣಾಂತರವಲ್ಲ. ದಿವಂಗತ ಜವಾಹರಲಾಲ್ ನೆಹರುರವರು ಇರುವವರೆಗೂ ಈ ವ್ಯವಸ್ಥೆಯು ನಡೆಯಿತು. ಆದರೆ ಅವರ ಕಾಲಾನಂತರದಲ್ಲಿ ಏನಾಯಿತು? ಅದರ ಬಗ್ಗೆ ಹೇಳಿ.

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರು ಮಾತನಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವನಾಥ್‌ರವರು ತಾವು ವಕೀಲರು ಎಂದು ಹೇಳಿದರು. With due respect to him, ಸಂವಿಧಾನದ ಅನುಚ್ಛೇದ 368 ರ ಬಗ್ಗೆ ಹೇಳುವುದಾದರೆ, In the case Kesavananda Bharati vs. State of Kerala, 13 Judge Constitution Bench has clearly said that basic structure of the Constitution cannot be touched. ಇಂತಹ ತೀರ್ಪಿನ ಹಿನ್ನೆಲೆಯಲ್ಲಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಹೇಗೆ ಮಾಡುತ್ತೀರಿ? ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರುವ ವಿಷಯವು ಬೇರೆಯದ್ದಾಗಿದೆ. ಇಲ್ಲಿ The Representation of the People Act, 1951 ಸಹ ಇದೆ. ಅದರಲ್ಲಿನ ಅಂಶಗಳ ಬಗ್ಗೆ ಚರ್ಚೆಯಾಗಿದೆ. ಸಂವಿಧಾನದ ಅನುಚ್ಛೇದ 370 – ಇದು ಒಂದಕ್ಕೆ ಮಾತ್ರವೇ ಪ್ರಮುಖ ತಿದ್ದುಪಡಿಯನ್ನು ಮಾಡಲಾಗಿದೆ. ಇಂದ್ರ ಸಹಾನಿ ಪ್ರಕರಣದಲ್ಲಿ ಒಂಭತ್ತು ನ್ಯಾಯಾಧೀಶರನ್ನೊಳಗೊಂಡ ಪೀಠವು ತೀರ್ಪನ್ನು ನೀಡಿತ್ತು. ಇದು ಬೇರೆಯ ವಿಷಯವಾಗಿದೆ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲ ರಚನೆಯ ಬಗ್ಗೆ ತಿದ್ದುಪಡಿ ಮಾಡುವ ವಿಷಯದಲ್ಲಿ ನ್ಯಾಯಾಲಯವು ಬಹಳ ಸ್ಪಷ್ಟವಾದ ತೀರ್ಪನ್ನು ನೀಡಿದೆ. ಹೀಗಾಗಿ 'ಒಂದು ರಾಷ್ಟ್ರ – ಒಂದು ಚುನಾವಣೆ' ಎನ್ನುವ ಪ್ರಸ್ತಾವನೆಯು ಹೊಸದಲ್ಲ. 1952 ನೇ ಇಸ್ವಿಯಿಂದ 1967 ರ ಇಸ್ವಿಯವರೆಗೂ ಇದೇ ವ್ಯವಸ್ಥೆಯು ನಡೆದುಕೊಂಡು ಬಂದಿದೆ. ದೇಶದಲ್ಲಿ ಸಣ್ಣ ಸಣ್ಣ ರಾಜ್ಯಗಳಿದ್ದು, ಅಲ್ಲಿ ಸಮ್ಮಿಶ್ರ ಸರ್ಕಾರಗಳು ಅಸ್ತಿತ್ವದಲ್ಲಿರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಸರ್ಕಾರಗಳ ಪತನವಾದಾಗ ಇದೇ ಅಂಶವನ್ನು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. I am sorry to say this; ಈ ದೇಶದಲ್ಲಿ ನಾನು ಬಹಳಷ್ಟು ಚುನಾವಣೆಗಳನ್ನು ನೋಡಿದ್ದೇನೆ. ಸಣ್ಣ ಸಣ್ಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಗಳಲ್ಲಿ ಆರು ತಿಂಗಳಿಗೊಮ್ಮೆ ಚುನಾವಣೆಗಳನ್ನು ಮಾಡಬೇಕಾಗುತ್ತದೆ. ದೇಶದ ಪ್ರಧಾನ ಮಂತ್ರಿಗಳೇ ಎಲ್ಲಾ ರಾಜಕೀಯ ಪಕ್ಷಗಳ ಸಭೆಯನ್ನು ಕರೆದಿದ್ದರು. ಈ ಅಂಶವನ್ನು ಸಂಸತ್ತಿನಲ್ಲಿ ಚರ್ಚಿಸಲಿಲ್ಲ. 40 ರಾಜಕೀಯ ಪಕ್ಷಗಳ ಪೈಕಿ 31 ಪಕ್ಷಗಳು ಆ ಸಭೆಗೆ ಹಾಜರಾಗಲಿಲ್ಲ. ಇದು ಬಹಳ ಗಂಭೀರ ಸಮಸ್ಯೆ ಎಂದರೆ, ತಾವು ಎಲ್ಲಾ ರಾಜಕೀಯ ಪಕ್ಷಗಳ ಸಭೆಯನ್ನು ಕರೆದು, ಅಲ್ಲಿ ಚರ್ಚೆಯನ್ನು ಮಾಡಿ ಎಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಹೀಗಾಗಿ ಸದನದ ಸಮಯವನ್ನು ವ್ಯರ್ಥ ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 'ಒಂದು ರಾಷ್ಟ್ರ – ಒಂದು ಚುನಾವಣೆ' ಇದರ ಬಗ್ಗೆ ತಂದಿರುವ ಪ್ರಸ್ತಾವಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಒಂದು ಚುನಾವಣೆ ಮಾಡುವುದರಿಂದ ಹಲವಾರು ರೀತಿಯಲ್ಲಿ ಅನುಕೂಲವಾಗುತ್ತದೆ. ಅಂದರೆ ಚುನಾವಣೆಗಾಗಿ ಮಾಡುವ ಖರ್ಚು-ವೆಚ್ಚಗಳು, ಚುನಾವಣಾ ನೀತಿ ಸಂಹಿತೆಯ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎನ್ನುವ ಉಲ್ಲೇಖಗಳಿವೆ. ಇದರ ಬಗ್ಗೆ ಚರ್ಚೆಯಾಗುತ್ತದೆ ಎಂದು ಅವರಿಗೆ ಗೊತ್ತಾದಾಗ ಮಾಧ್ಯಮಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ; ಅನೇಕ ಹಿರಿಯ ಸದಸ್ಯರುಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸದನದಲ್ಲಿ 'ಒಂದು ರಾಷ್ಟ್ರ – ಒಂದು ಚುನಾವಣೆ' ಎನ್ನುವ ವಿಷಯದ ಬಗ್ಗೆ ಸಾರ್ಥಕವಾದ ಚರ್ಚೆಯಾಗಬೇಕು ಎನ್ನುವ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನಾನು ನೋಡಿದ್ದೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಯಾಗಬೇಕು. ಚರ್ಚೆಯೇ ನಿರ್ಧಾರವಾಗುವುದಿಲ್ಲ. ಇದರ ಮೇಲೆ ನಿರ್ಣಯವನ್ನೂ ಸಹ ತೆಗೆದುಕೊಳ್ಳುತ್ತಿಲ್ಲ. ಇತ್ತೀಚೆಗೆ ನಮ್ಮ ದೇಶದ ಸಂವಿಧಾನದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಲಾಗಿತ್ತು. ಅದರ ಪರಿಣಾಮವಾಗಿ ಬಹಳ ಸದಸ್ಯರು ಸಂವಿಧಾನದ ಬಗ್ಗೆ ತಿಳಿದುಕೊಂಡರು. ಸಂವಿಧಾನವು ಕೆಲವರ ಸ್ವತ್ತು ಎಂದು ನಾವು ಭಾವಿಸಿದ್ದೆವು. ಈ ಸದನದ ಬಹಳಷ್ಟು ಸದಸ್ಯರು ಸಂವಿಧಾನದ ಬಗ್ಗೆ ಚರ್ಚೆ ಮಾಡಿದಾಗ, ಈ ವಿಷಯದಲ್ಲಿ ಅವರಿಗಿರುವ ಆಳವಾದ ಜ್ಞಾನದ ಬಗ್ಗೆ ಗೊತ್ತಾಯಿತು. ನಮಗೆಲ್ಲಾ ಸಂವಿಧಾನದ ಬಗ್ಗೆ ಹೊಸ ಅರಿವು ಮೂಡಿತು. ನನ್ನ ದೃಷ್ಟಿಯಲ್ಲಿ ಹೊಸ ವಿಚಾರ, ಯೋಚನೆ ಮತ್ತು ಚರ್ಚೆಗಳು ಬಂದಾಗ ಅದು ಸವಾಲಾಗಿರುತ್ತದೆ. ಇದರಲ್ಲಿ ಯಾವುದೇ ವಾದಗಳಿಲ್ಲ. ನಾವು 'ಒಂದು ರಾಷ್ಟ್ರ – ಒಂದು ಚುನಾವಣೆ' ವಿಷಯದ ಮೇಲೆ ಚರ್ಚೆಯನ್ನು ಮಾಡೋಣ. ಇದರ ವಿರೋಧ ಹಾಗೂ ಪರವಾಗಿ ಮಾತನಾಡುವವರು ಮಾತನಾಡಲಿ. ಅನುಮಾನವಿರುವವರು ತಮ್ಮ ಜಿಜ್ಞಾಸೆಗಳನ್ನು ಹೇಳಿಕೊಳ್ಳಲಿ. ಎಲ್ಲರ ಕುತೂಹಲ, ಜಿಜ್ಞಾಸೆ, ಆತಂಕಗಳಿಗೆ ಸಮರ್ಥವಾದ ಉತ್ತರವು ಸರ್ಕಾರದಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊರೆಯುತ್ತದೆಯೇ ಎಂದು ನಾವು ನೋಡೋಣ. ಹೀಗಾಗಿ ಈ ಚರ್ಚೆಯನ್ನು ಪ್ರಾರಂಭಿಸಿ. ಚರ್ಚೆಯೇ ನಿರ್ಧಾರವಾಗುವುದಿಲ್ಲವೆಂದು ನಾನು ಸಭಾಪತಿಯವರ ಮೂಲಕ ಮತ್ತೊಮ್ಮೆ ವಿನಂತಿಸುತ್ತೇನೆ. ಇದರ ಬಗ್ಗೆ ವಿರೋಧ ಮಾಡುವವರು ಮಾಡಲಿ, ಅವರ ಭಾವನೆಗಳು ನಮಗೆ ಅರ್ಥವಾಗುತ್ತವೆ. ಉಪ ಚುನಾವಣೆ ಬಂದರೆ ಏನು ಮಾಡಬೇಕು ಇತ್ಯಾದಿ ವಿಷಯಗಳ ಬಗ್ಗೆ ವಿರೋಧ ಪಕ್ಷದವರು ತಿಳಿಸಲಿ. ಈ ವಿಷಯದಲ್ಲಿ ರಾಜ್ಯದ ಹಲವಾರು ಸಮಸ್ಯೆಗಳಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸವಾಲುಗಳಿವೆ. ಚುನಾವಣಾ ಆಯೋಗ, ಚುನಾವಣಾ ನೀತಿ ಸಂಹಿತೆ ಹಾಗೂ ಕಾನೂನು ಅಡೆತಡೆಗಳಿದ್ದು, ಇವುಗಳೆಲ್ಲವೂ ಸತ್ಯವಾಗಿವೆ. ಹೀಗಾಗಿ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ ಹಾಗೂ ಈ ಮೂಲಕ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸೋಣ. ದೇಶಕ್ಕೆ, ರಾಜ್ಯಕ್ಕೆ ಮತ್ತು ಸಮಾಜಕ್ಕೆ ಹಿತವಾಗುವ ಒಳ್ಳೆಯ ನಿರ್ಧಾರಗಳನ್ನು ನಾವು ತೆಗೆದುಕೊಳ್ಳೋಣ. ದಯಮಾಡಿ ಈ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅಧಿಕಾರವಿದೆಯೇ?

**ಸಭಾಪತಿಯವರು:-** ಇದರ ಬಗ್ಗೆ ನಾನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, this is not a proper forum to discuss.

**ಸಭಾಪತಿಯವರು:-** ಪ್ರಸ್ತುತ ವಿಷಯದ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಅನುಮೋದನೆಯನ್ನು ಪಡೆಯಬೇಕಾಗಿತ್ತು ಎಂಬುದಾಗಿ ಇಲ್ಲಿನ ಅನೇಕ ಸದಸ್ಯರು ಹೇಳಿದ್ದು, ಅದನ್ನು ನಾನು ಒಪ್ಪುತ್ತೇನೆ. ಆದರೆ ಪ್ರಸ್ತುತ ಅಧಿವೇಶನ ಪ್ರಾರಂಭವಾಗುವ ಮುನ್ನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯನ್ನು ಮಾಡುವುದಕ್ಕೆ ಬರಲಿಲ್ಲ. ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಏನು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೋ ಅದರ ಆಧಾರದ ಮೇಲೆ ನಾವು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯನ್ನು ಮಾಡಬೇಕಾಗಿತ್ತು. ಆದರೆ ಇದನ್ನು ಮಾಡಲಿಲ್ಲ. ಆದರೆ, ನಾವು ದಿನಾಂಕ 02/03/2021 ರಂದು ಮಾಜಿ ಸಭಾಪತಿಗಳ ಸಭೆಯನ್ನು ಕರೆದಿದ್ದೆವು. ದಿನಾಂಕ 03/03/2021 ರಂದು ಎಲ್ಲಾ ಪಕ್ಷಗಳ ನಾಯಕರ ಸಭೆಯನ್ನೂ ಸಹ ಕರೆಯಲಾಗಿತ್ತು. ರಾಜ್ಯಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀ ರೆಹಮಾನ್ ಖಾನ್‌ರವರು ಅಂದು ಬಂದಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಸಂದರ್ಭದಲ್ಲಿ ಯಾವುದೋ ನಿಯಮದನ್ವಯ 'ರಾಜ್ಯಸಭೆಯಲ್ಲಿ ವಾರದ ಯಾವುದಾದರೂ ಒಂದು ದಿನ ಯಾವುದಾದರೂ ಒಂದು ವಿಶೇಷ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡುತ್ತಾರೆ; ನೀವು ಹಾಗೆಯೇ ಮಾಡಬಹುದು' ಎಂಬುದಾಗಿ ತಿಳಿಸಿದರು. ಈ ಸಂಗತಿಗಳೆಲ್ಲವನ್ನೂ ಸಹ ನಾನು ಒಪ್ಪುತ್ತೇನೆ. ಸದನದಲ್ಲಿ ಯಾರೇ ಒಬ್ಬ ಸದಸ್ಯರಿದ್ದರೂ ಸಹ ಅವರ ಅಭಿಪ್ರಾಯವನ್ನು ನಾವು ಕ್ರೋಢೀಕರಿಸಬೇಕು. ಸದಸ್ಯರಾದ ಶ್ರೀ ಸಿ.ಎಂ.ಲಿಂಗಪ್ಪರವರು ಪತ್ರವೊಂದನ್ನು ನೀಡಿದ್ದು, ಅದರಲ್ಲಿ 'ಗೌರವಾನ್ವಿತ ಸಭಾಪತಿಯವರೇ, 'ಒಂದು ರಾಷ್ಟ್ರ – ಒಂದು ಚುನಾವಣೆ' ಈ ವಿಷಯದ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಡಬೇಕಾಗಿ ವಿನಂತಿಸುತ್ತೇನೆ' ಎಂಬುದಾಗಿ ತಿಳಿಸಿದ್ದಾರೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 342 ರನ್ವಯ ಸಭಾಪತಿಯವರಿಗೆ ಒಂದೊಂದು ಬಾರಿ ಈ ರೀತಿಯ ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಹಾಗೂ ಅಧಿಕಾರಗಳಿವೆ. ಇವುಗಳೆಲ್ಲವನ್ನೂ ನಾನು ಗಣನೆಗೆ ತೆಗೆದುಕೊಂಡು ಚರ್ಚೆಗೆ ಅವಕಾಶ ನೀಡಿದ್ದೇನೆ. ಅಪರಾಹ್ನದ ಸಮಯದಲ್ಲಿ ಬೇರೆ ಇನ್ನಾವುದೇ ವಿಷಯಗಳನ್ನು ನಾವು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿಲ್ಲ. ಅಪರಾಹ್ನ ನಿಗದಿಪಡಿಸಿದ್ದ ಕಾರ್ಯಕಲಾಪಗಳೆಲ್ಲವೂ ಸಹ ಮುಗಿದಿವೆ. ಹೀಗಾಗಿ . . .

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿರವರು ನಿಯಮ 330 ರ ಮೇರೆಗೆ ಪ್ರಸ್ತಾಪಿಸಿರುವ ವಿಷಯವು ಬಾಕಿ ಇದೆ.

**ಸಭಾಪತಿಯವರು:–** ನಾನು ಹೇಳುವುದನ್ನು ಮೊದಲು ಕೇಳಿ. ಎಲ್ಲಾ ವಿಷಯಗಳು ಮುಗಿದಿವೆ. ರಾಜ್ಯದ ಮುಖ್ಯಮಂತ್ರಿಗಳು ಸದನದಲ್ಲಿ ಪ್ರಸ್ತುತ ಉಪಸ್ಥಿತರಿಲ್ಲ. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ಸಭೆಯನ್ನು ಮುಂದೂಡುವುದಕ್ಕಿಂತ ಈ ವಿಷಯದ ಮೇಲೆ ಚರ್ಚೆಯನ್ನು ಮಾಡೋಣ. ಇದನ್ನು ವಿರೋಧಿಸುವವರು ವಿರೋಧಿಸಿ, ಪರ ಮಾತನಾಡುವವರು ಮಾತನಾಡಲಿ. ನಾವು ನಾಳೆಯ ದಿನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯನ್ನು ಕರೆದು, ಅದರಲ್ಲಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳೋಣ. ಈ ಹಿನ್ನೆಲೆಯಲ್ಲಿ ನಾನು ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈಗ ಯಾವುದೇ ವಿಷಯವಿಲ್ಲದೇ ನಾವು ಸದನವನ್ನು ಮುಂದೂಡಬೇಕಾಗುತ್ತದೆ. ಅದರ ಬದಲಾಗಿ ಚರ್ಚೆಯನ್ನು ಮಾಡುವುದಕ್ಕೆ ನಾನು ಅನುವು ಮಾಡಿಕೊಡುತ್ತೇನೆ. ಮೊದಲು ಚರ್ಚೆಯನ್ನು ಮಾಡಿ, ಅದರಲ್ಲಿ ಯಾವ ರೀತಿಯ ಅಭಿಪ್ರಾಯಗಳು ವ್ಯಕ್ತವಾಗುತ್ತವೆ ಎನ್ನುವುದನ್ನು ನಾವು ನೋಡೋಣ. ನಾಳೆಯ ದಿನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯನ್ನು ಕರೆದು, ಅಲ್ಲಿ ನಿಮ್ಮೆಲ್ಲರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೀರ್ಮಾನವನ್ನು ಗೌರವಿಸಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳೋಣ. ಹೀಗಾಗಿ ಈ ವಿಷಯದ ಮೇಲೆ ಚರ್ಚೆಯನ್ನು ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಉಲ್ಲೇಖಿಸಿರುವ ನಿಯಮ – 342 (Residuary Powers) ಇಂತಹ ಕೆಲಸಗಳಿಗಲ್ಲ ಎಂದು ನಾನು ಹೇಳುತ್ತೇನೆ. ಈಗ ಇದನ್ನು ನಾನು ಉಲ್ಲೇಖಿಸುತ್ತೇನೆ. ನಮಗೆ ಸಂಬಂಧಿಸಿಲ್ಲದ ವಿಷಯಗಳನ್ನು ಇಲ್ಲಿ ಚರ್ಚಿಸುವುದು ಬೇಡ.

**(ಗೊಂದಲ)**

**ಸಭಾಪತಿಯವರು:-** ಈಗ ಏನು ಮಾಡೋಣವೆಂದು ನೀವೇ ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದು ಪಕ್ಷಕ್ಕೆ ಸೀಮಿತಗೊಂಡ ಅಜೆಂಡಾಗಳನ್ನು ಇಲ್ಲಿ ಪ್ರಸ್ತಾಪಿಸಬಾರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಇಲ್ಲಿ ಚರ್ಚೆಗೆ ತೆಗೆದುಕೊಂಡಿರುವ . . .

**(ಮುಂದು)**

(288)04-03-2021(04-00)ಬಿಎಸ್‌ಡಿ-ಬಿಎನ್‌ಎಸ್

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ಎಲ್ಲರಿಗಿಂತ ಹೆಚ್ಚಾಗಿದ್ದು, ಒಂದು ಪಕ್ಷದ agenda ವನ್ನು ಚರ್ಚೆಗೆ ತರಬಾರದು. ತಾವು ಯಾವುದೇ ಪಕ್ಷದ ಪರವಾಗಿ ಮಾತನಾಡಬಾರದು, ನಮ್ಮೆಲ್ಲರ ಪರವಾಗಿ ತಾವು ಆಯ್ಕೆಯಾಗಿದ್ದೀರಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಈ ರೀತಿ ಆಪಾದನೆ ಮಾಡಬಾರದು, ಈ ರೀತಿ ಆಪಾದನೆ ಮಾಡುವುದು ಒಳ್ಳೆಯದಲ್ಲ. ಇಡೀ ದೇಶದ...... ಹಣ ಉಳಿಸುವ ....... ಉಳಿತಾಯ ಇದೆ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ....... ಇದೇ final ಅಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್‌ಃ–** ಇಲ್ಲ, ಒಪ್ಪುವುದಿಲ್ಲ.

**(ಗೊಂದಲ)**

**ಸಭಾಪತಿಯವರುಃ–** ಎಲ್ಲರೂ ಮಾತನಾಡಬೇಡಿ, ಕುಳಿತುಕೊಳ್ಳಿ.

**ಡಾಃ ತೇಜಸ್ವಿನಿಗೌಡಃ–** ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶ ಇದೆ.

**(ಗೊಂದಲ)**

**ಸಭಾಪತಿಯವರುಃ–** ನಾನು ಇಲ್ಲಿಯವರೆಗೂ ಹೇಳಿದ್ದೇನೆ. ಪರಿಸ್ಥಿತಿಗಳನ್ನು ಹಾಗೂ ಏನು ನಡೆಯುತ್ತದೆ ಎಂದು ಹೇಳಿದ್ದೇನೆ. ಎಲ್ಲಾ ಸದಸ್ಯರು ವಿಚಾರ ಮಾಡಿ. ಇವತ್ತು ಸದನವನ್ನು adjourn ಮಾಡಿ ಏನೂ ನಡೆಸದಿರುವ ಬದಲು ಈ ಚರ್ಚೆಯನ್ನು ಮಾಡೋಣ. ಎಲ್ಲಾ ಚರ್ಚೆಗಳು ಮುಗಿದಿವೆ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ನನ್ನ ವಿಷಯ ಇದೆ.

**ಸಭಾಪತಿಯವರುಃ–** ನಿಮ್ಮ ಹೆಸರು ಕರೆದಾಗ absent ಇದ್ದರೆ ಹೇಗೆ ವಿಷಯ ತೆಗೆದುಕೊಳ್ಳಲು ಸಾಧ್ಯ? Absent ಇರುತ್ತಾರೆ, ಕರೆದಾಗ ಇರುವುದಿಲ್ಲ. ವಿಷಯ ಹೇಗೆ ತೆಗೆದುಕೊಳ್ಳಲು ಸಾಧ್ಯ?

**ಶ್ರೀ ಎಸ್.ಆರ್. ಪಾಟೀಲ್‌ಃ–** ನಿಯಮ 68 ಕ್ಕೆ convert ಮಾಡಿರುವುದನ್ನು ಚರ್ಚೆ ಮಾಡಿಸಿ.

**ಸಭಾಪತಿಯವರುಃ–** ನಾನು agenda ಬಿಟ್ಟು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಭಾನಾಯಕರೇ, agenda ದಲ್ಲಿ ಬರಬೇಕು. ನಾನು ಸದನಕ್ಕೆ convince ಮಾಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್‌ಃ–** ಈ ವಿಚಾರವು ಏನೂ ಇಲ್ಲದೇ agenda ದಲ್ಲಿ ಬಂದಿದೆ.

**ಸಭಾಪತಿಯವರುಃ–** ನಾನು ಇಷ್ಟು ವಿಚಾರಗಳನ್ನು ಸದನಕ್ಕೆ convince ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಎಲ್ಲರ ವಿಚಾರಗಳನ್ನು ಕೇಳಿ, ಪರಿಸ್ಥಿತಿಯನ್ನು ಅರಿತು ತೀರ್ಮಾನ ಮಾಡಬೇಕಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡೋಣ. ನಾಳೆ BAC meeting ನಲ್ಲಿ ಕುಳಿತು, ತಾವುಗಳು ತೀರ್ಮಾನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವ ರೀತಿಯಲ್ಲಿ ಹೋಗೋಣ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆ ಹಿನ್ನೆಲೆಯಲ್ಲಿ ಮಾನ್ಯ ತೇಜಸ್ವಿನಿಗೌಡರವರು ಮಾತನಾಡಬೇಕು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಬಾವಿಗೆ ಇಳಿದು ಧರಣಿ ನಿರತರಾದರು)**

**ಡಾಃ ತೇಜಸ್ವಿನಿಗೌಡಃ–** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ನಾನು ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ಮಾನ್ಯ ಎಸ್.ಆರ್. ಪಾಟೀಲರು, ಮಾನ್ಯ ಹರಿಪ್ರಸಾದ್ ಹಾಗು ಸನ್ಮಿತ್ರರಿಗೆ ವಿನಂತಿಸುತ್ತೇನೆ.

**ಸಭಾಪತಿಯವರುಃ–** ಬಾವಿಯಲ್ಲಿ ನಿಂತು ಮಾತನಾಡುವುದು ಅಥವಾ ಧಿಕ್ಕಾರಗಳನ್ನು ಕೂಗತಕ್ಕದ್ದಲ್ಲ. ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಏನಾದರೂ ಮಾತನಾಡುವುದಿದ್ದರೆ ಅವರ ಸ್ಥಾನಗಳಿಗೆ ತೆರಳಿ ಮಾತನಾಡಿ. ಬಾವಿಯಲ್ಲಿ ಧರಣಿ ಮಾಡಿದರೆ ತಕರಾರಿಲ್ಲ. ಆದರೆ ಕೂಗುವುದು, ಇತ್ಯಾದಿಗಳನ್ನು ಮಾಡುವುದನ್ನು ನಾನು ಒಪ್ಪುವುದಿಲ್ಲ. ಬಾವಿಯಲ್ಲಿ ನಿಂತು ಮಾತನಾಡುವಂತಿಲ್ಲ. ಬಾವಿಯಲ್ಲಿ ಕೂಗಬಾರದು, ಮಾತನಾಡಬಾರದು ಎಂದು ಕಾನೂನು ಇದೆ. ಪುಸ್ತಕ ನೋಡಿ. ಗೌರವ ಕೊಡುವುದನ್ನು ಕಲಿಯಿರಿ. ನಿಮ್ಮ ಹಕ್ಕಿಗೆ ಬೆಲೆ ಇದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ಸ್ವಸ್ಥಾನದಿಂದ)ಃ–** ಬಾವಿಗೆ ಇಳಿಯುವುದು ನಮ್ಮ ಹಕ್ಕು, boycott ಮಾಡುವುದು ನಮ್ಮ ಹಕ್ಕು. ನಮ್ಮ ಸರ್ಕಾರ ಇದ್ದಾಗ placard ಗಳನ್ನು ಹಿಡಿದುಕೊಂಡು ಬಾವಿಯಲ್ಲಿ ಇಳಿದಿದ್ದರು. ಅದಕ್ಕೆ ಚಿಟಟಿಡಿ ಮಾಡುತ್ತೀರಿ, ಈಗ ಬಹಳÀ serious ಆಗಿದ್ದೀರಿ. ದಯಮಾಡಿ serious ಆಗಬೇಡಿ. ನೀವು ಈ ಕಡೆ ಬಹಳ ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದೀರಿ. ನಮಗಿಂತ ಹೆಚ್ಚು ವರ್ಷಗಳ ಕಾಲ ಇಲ್ಲಿದ್ದು, ಎಲ್ಲವನ್ನು ತಾವು ನೋಡಿದ್ದಿರಿ, ಇಲ್ಲ ಏನೇನು ಅವಾಂತರಗಳು ಆಗಿವೆ ಎಂದು ನೋಡಿದ್ದೀರಿ. ಈ ವಿಷಯವಾಗಿ ಹೋಗಿ ಕುಳಿತಿದ್ದಾರೆ.

**ಸಭಾಪತಿಯವರುಃ–** ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರುನಾನು ಹೇಳುವುದನ್ನು ಕೇಳಬೇಕು. ಇದು ನಿಮ್ಮ ಅಧಿಕಾರ, ಬಾವಿಯಲ್ಲಿ ಕುಳಿತುಕೊಳ್ಳುವುದು ನಿಮ್ಮ fundamental right. ಅದಕ್ಕೆ ನನ್ನ ತಕರಾರೇನೂ ಇಲ್ಲ. ಆದರೆ ಧಿಕ್ಕಾರ ಕೂಗುವುದು ಅಥವಾ ಬೇರೆ ಇನ್ನೊಂದು ಮಾಡುವುದು ಸರಿಯಲ್ಲ. ಅವರು placard ಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರದರ್ಶನ ಮಾಡಿದ್ದರೆ ಅದು ತಪ್ಪು. ಬಾವಿಯಲ್ಲಿ ನಿಂತು ಏಕೆ ಮಾತನಾಡುತ್ತೀರಿ? ಇದನ್ನು ನಾನು ಒಪ್ಪುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಇದೇನು ಹೊಸ ನಿಯಮ ಅಲ್ಲ. It is a routine practice followed by opposition party. Either this side or that side. ಅವರು ನೂರಾರು ಸಲ ಮಾಡಿದ್ದಾರೆ.

**ಶ್ರೀ ನಸೀರ್ ಅಹಮದ್:–** ಒಂದು ತಿಂಗಳು ಎಲ್ಲರನ್ನು suspend ಮಾಡಿಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾಡಿಬಿಡಿ, ನಿಮಗೆ ಅಧಿಕಾರ ಇದೆ. ನಮ್ಮನ್ನು ಸದನದಿಂದ ಹೊರಗೆ ಹಾಕಿಬಿಡಿ. ಅವರೇ ನಡೆಸಿಕೊಂಡು, ಅವರ ಮನಸೋ ಇಚ್ಛೆ ಸದನ ನಡೆಸಿಕೊಂಡು ಹೋಗಲಿ. ನಾವು ಹೋಗುತ್ತೇವೆ. We are prepared to go out. ನಮ್ಮನ್ನು expel ಮಾಡಿ, action ತೆಗೆದುಕೊಳ್ಳಿ. ಅವರು ಹೇಳಿದಂತೆ ಸಭೆ ನಡೆಸಿಕೊಂಡು ಹೋಗಿ. ನಮಗೆ ಏನೂ ಇಲ್ಲವೇ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಆ ರೀತಿ ಮಾತನಾಡಬೇಡಿ. ಈ ರೀತಿ ಮಾಡಿದರೆ ಸದನ ನಡೆಸುವುದು ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:–** ತಾವು ಈ ಸದನದಲ್ಲಿ ಹೆಚ್ಚು ವರ್ಷಗಳ ಕಾಲ ಇದ್ದೀರಿ. ತಾವು ಈ ಬಾವಿಯಲ್ಲಿ placard ಗಳನ್ನು exhibit ಮಾಡಿದ್ದನ್ನು ನೋಡಿಲ್ಲವೇ? ಮನಸೋ ಇಚ್ಛೆ ನಡೆದುಕೊಂಡಿರುವ ಬಗ್ಗೆ ನೋಡಿಲ್ಲವೇ? ಏನೇನೋ ಮಾತನಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಬಾವಿಯಲ್ಲಿ ನಿಂತು ಮಾತನಾಡಬೇಡಿ.

**ಶ್ರೀ ಎಸ್.ಆರ್. ಪಾಟೀಲ್:–** ಈಗ ನಮ್ಮ ಅಧಿಕಾರವಧಿ 6 ವರ್ಷ ಹಾಗೂ Assembly, Lok Sabha ಗೆ 5 ವರ್ಷ ಇದೆ. ರಾಜ್ಯಸಭಾದಲ್ಲಿಯೂ 6 ವರ್ಷ ಇದೆ. ಇದರಿಂದ ಏನೂ ಸಹಾಯ ಆಗುವುದಿಲ್ಲ. ನಮ್ಮ ಕಡೆ ಇದಕ್ಕೆ ತೌಡು ಕುಟ್ಟುವುದು ಎಂದು ಹೇಳುತ್ತಾರೆ. ನಾವು–ನೀವು ಸೇರಿ ತೌಡು ಕುಟ್ಟುವ ಕೆಲಸ ಮಾಡುವುದು ಬೇಡ. ಚರ್ಚೆ ಅಂತ ತೌಡು ಕುಟ್ಟುವ ಕೆಲಸ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾಃ ತೇಜಸ್ವಿನಿಗೌಡಃ**- ಮಾನ್ಯ ಸಭಾಪತಿಯವರೇ, ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತಿದೆ, ಪೀಠ ನನ್ನನ್ನು ಕರೆದಿದೆ, ದಯಮಾಡಿ ಅವಕಾಶ ಕೊಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ**- ಇದನ್ನು ಚರ್ಚೆ ಮಾಡಬೇಕೆ?

**ಡಾಃ ತೇಜಸ್ವಿನಿಗೌಡಃ**- ನನ್ನ ಅವಕಾಶಕ್ಕೆ ಧಕ್ಕೆ ತರಬಾರದೆಂದು ಸಹದ್ಯೋಗಿ ಮಿತ್ರರಲ್ಲಿ ಕೋರುತ್ತೇನೆ.

**ಸಭಾಪತಿಯವರುಃ**- ಯಾವ ವಿಚಾರಗಳು ಕಡತಕ್ಕೆ ಹೋಗಬಾರದು.

**(ಗೊಂದಲ)**

**ಸಭಾಪತಿಯವರುಃ**- ನನಗೆ ಮಾತನಾಡಲು ಆಸ್ಪದ ಕೊಡುತ್ತಿಲ್ಲ, ಈಗ 10 ನಿಮಿಷಗಳವರೆಗೆ ಸಭೆಯನ್ನು adjourn ಮಾಡುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇಬ್ಬರು Chief Whip ಗಳು ನನ್ನ Chamber ಗೆ ಬನ್ನಿ. ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

**(ಸದನವು ಸಂಜೆ 4 ಗಂಟೆ 8 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ 10 ನಿಮಿಷಗಳ ತರುವಾಯ ಸಮಾವೇಶಗೊಳ್ಳಲು ನಿಶ್ಚಯಿಸಿತು)**

(289)04-03-2021/4.30/ಎಂಡಿ-ಡಿಎಸ್

**(ಸದನವು ಮತ್ತೆ 4 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್ ಮತ್ತು ಶ್ರೀ ಕೆ.ಸಿ.ಕೊಂಡಯ್ಯರವರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾದರು)**

**ಡಾ||ತೇಜಸ್ವಿನಿಗೌಡ**:- ಮಾನ್ಯ ಸಭಾಪತಿಯವರೇ, ಒಂದು ರಾಷ್ಟ್ರ-ಒಂದು ಚುನಾವಣೆ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹಲವಾರು ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದಾರೆ. ಇದು ಬೂಷಣವಲ್ಲ. It is not fair in the parliamentary procedure. ನೀವು ನಿಜವಾದ ರೈತರು. ಕೃಷಿಯಲ್ಲಿ ಅಪಾರವಾದ ನಂಬಿಕೆ, ವಿಶ್ವಾಸ ಇದ್ದಂಥವರು.

**(ಗೊಂದಲ)**

(ಮುಂದು)

290/4-3-2021/4-40/bkp-md

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಈ ಸದನದಲ್ಲಿ ಭಾರತ ದೇಶದ ಸಂವಿಧಾನದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಕರ್ನಾಟಕ ರಾಜ್ಯದ ಸಂಸದೀಯ ಇತಿಹಾಸಕ್ಕೆ ತನ್ನದೇ ಆದ ಭವ್ಯತೆ, ಪರಂಪರೆ ಮತ್ತು ಘನತೆ-ಗೌರವ ಇದೆ. ಸಂವಿಧಾನದ ಆಶಯಗಳನ್ನು ಗಟ್ಟಿಗೊಳಿಸುವುದಕ್ಕೆ ನಮ್ಮ ಪೂರ್ವಜರು ತಜ್ಞರು ಅಪಾರವಾದಂಥ ಕೊಡುಗೆಯನ್ನು ಕೊಟ್ಟಿದ್ದಾರೆ ಮತ್ತು ಮಾದ್ಯಮಗಳಿಂದಲೂ ಈ ವಿಚಾರದ ಬಗ್ಗೆ ಚರ್ಚೆಯಾಗಿದೆ. ಈ ಸದನದಲ್ಲಿ ಅನೇಕ ಮುತ್ಸದ್ದಿಗಳು, ಮತ್ತು ತಿಳುವಳಿಕೆಯುಳ್ಳವರು ಆಯ್ಕೆಯಾಗಿ ಬಂದಿದ್ದಾರೆ. ಇತ್ತೀಚೆಗೆ ಗುಜರಾತ್‌ನ ಕೆವಾಡಿಯಾದಲ್ಲಿ.... ಆರ್ಟಿಕಲ್ 19 ಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಮಾನ್ಯ ಸದಸ್ಯರು ನನ್ನ freedom of speech ಗೆ ಧಕ್ಕೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರುಗಳು ಸಂವಿಧಾನಕ್ಕೆ ಅಪಮಾನ ಮಾಡುತ್ತಿದ್ದಾರೆ. Right to speech is my right and they cannot curtail my right to express my views.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

ಅವರಿಗಿಂತ ಜೋರಾಗಿ ಕೂಗುವುದಕ್ಕೆ ನಮಗೂ ಸಹ ಬರುತ್ತದೆ. But it is not fair. I would like to debate. ಮಾಧ್ಯಮದವರು ಸಹ ನೋಡುತ್ತಿದ್ದರು. Nobody can curtail my right to speech.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸದನದ ಬಾವಿಯಿಂದ ಮಾತನಾಡಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ.

**ಡಾ॥ ತೇಜಸ್ವಿನಿ ಗೌಡ:–** ನಾನು ವರದಿಗಾರರಿಗೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇಂತಹ ಒಂದು ಘಟನೆಗಳು, it is challenging for reporting. ಮುಂದೊಂದು ದಿನ publish ಆಗುತ್ತದೆ. ನಮಗಾದ ಕಹಿ ಅನುಭವವನ್ನು ಸಹ ಬರೆಯುತ್ತೇವೆ ಎಂದಾಗಬೇಕು. ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡುತ್ತೇನೆ.

**Sri S.R.PATIL:-** Mr.Chairman Sir, House is not in order. This is not in good taste. ಈ ರೀತಿಯ ಸಂದರ್ಭ ಇರುವಾಗ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ನೈಜವಾದ ಕಾಳಜಿ ಇದ್ದರೆ, ಘಟನಾವಳಿಗಳ ಮೂಲಕ ಹೇಳುವುದಾದರೆ, ಕಾಂಗ್ರೆಸ್ ಪಕ್ಷ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ ಎಂದು ಹೇಳಬೇಕಾಗುತ್ತದೆ. ಇತ್ತೀಚೆಗೆ ಗುಜರಾಜ್ ರಾಜ್ಯದ ಕೆವಾಡಿಯಾದಲ್ಲಿ ಪೀಠಾಸೀನಾಧಿಕಾರಿಗಳ ಸಮ್ಮೇಳನ ನಡೆಯಿತು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಬಾವಿಯಲ್ಲಿ ಬೊಬ್ಬೆ ಹಾಕುವುದು ಯಾವ ಸಂಪ್ರದಾಯ?

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ **ಮುಂದೂಡಲಾಗಿದೆ.**

**(ಸದನವು ಸಂಜೆ 4 ಗಂಟೆ 44 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 5–3–2021ರ ಶುಕ್ರವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"